## ಬುಧವಾರ, ೧೮ನೇ ಡಿಸೆಂಬರ್, ೧೯೪೬

ಭಾರತದ ಸಂವಿಧಾನ ರಚನಾಸಭೆಯು ನವದೆಹಲಿಯ ಸಂವಿಧಾನ ಸಭಾಂಗಣದಲ್ಲಿ ಗೌರವಾನ್ವಿತ ಡಾ. ರಾಜೇಂದ್ರ ಪ್ರಸಾದ್ ಅವರ ಅಧ್ಯಕ್ಷತೆಯಲ್ಲಿ ಬೆಳಗ್ಗೆ ೧೧ ಘಂಟೆಗೆ ಸಭೆ ಸೇರಿತು.

### ಕಾರ್ಯಕ್ರಮಕಲಾಪದ

**ಮಾನ್ಯ ಅಧ್ಯಕ್ಷರು :** ಶ್ರೀ ಮೋಹನ್‌ಲಾಲ್ ಸಕ್ಸೇನಾ ಅವರಿಂದ ನನಗೊಂದು ಟಿಪ್ಪಣಿ ಬಂದಿದೆ. ನಿಯಮಗಳ ಸಮಿತಿಯಲ್ಲಿ ಆಗಿರುವ ಪ್ರಗತಿಯನ್ನು ಕುರಿತು ಒಂದು ಹೇಳಿಕೆಯನ್ನು ಕೊಡುವಂತೆ ಅವರು ನನ್ನನ್ನು ಕೇಳಿದ್ದಾರೆ. ನಾನು ಇಂದು ಆ ಹೇಳಿಕೆಯನ್ನು ನೀಡಿದರೆ ಸದಸ್ಯರಿಗೆ ತಮ್ಮ ಮುಂದಿನ ಕಾರ್ಯಕ್ರಮವನ್ನು ರೂಪಿಸಿಕೊಳ್ಳಲು ಸಹಾಯವಾಗುತ್ತದೆ ಎಂದು ನಾನು ಭಾವಿಸಿದ್ದೇನೆ. ಹಿಂದೆ ಸಿದ್ಧಪಡಿಸಿದ್ದ ಕರಡು ಪ್ರತಿಗಳನ್ನು ನಾವು ಚರ್ಚಿಸುತ್ತಾ ಇದ್ದೇವೆ. ಈ ನಿಟ್ಟಿನಲ್ಲಿ ನಾವು ಸಾಕಷ್ಟು ದೂರ ಕ್ರಮಿಸಿದ್ದೇವೆ. ಆದರೆ ಇನ್ನೂ ಮಾಡಬೇಕಾದ ಕೆಲಸ ಸ್ವಲ್ಪ ಉಳಿದಿದೆ. ಈ ಸದನದ ಮುಂದೆ ಮಂಡಿಸುವ ಮೊದಲು ಅಂತಿಮ ಕರಡನ್ನು ನಿಯಮಗಳ ಸಮಿತಿಯು ಪರಿಗಣಿಸಬೇಕಾಗಿದೆ. ಶುಕ್ರವಾರದ ಹೊತ್ತಿಗೆ ಈ ಕೆಲಸವನ್ನು ಮುಗಿಸಲು ನಮಗೆ ಸಾಧ್ಯವಾಗುತ್ತದೆ ಎಂದು ಭಾವಿಸಿದ್ದೇನೆ. ನಿಯಮಗಳ ಸಮಿತಿಯು ಅಂಗೀಕರಿಸಿದ ಅಂತಿಮ ರೂಪದ ನಿಯಮಗಳನ್ನು ಸದಸ್ಯರಿಗೆ ಶನಿವಾರದಂದು ಕೊಡಬೇಕೆಂದು ನಾನು ಉದ್ದೇಶಿಸಿದ್ದೇನೆ. ಅದರಿಂದಾಗಿ ಮುಂದಿನ ಸೋಮವಾರದಂದು ಅವುಗಳನ್ನು ಈ ಸದನದಲ್ಲಿ ಪರಿಗಣನೆಗೆ ಕೈಗೆತ್ತಿಕೊಳ್ಳಬಹುದು. ಸೋಮವಾರವೆಂದರೆ ೨೩ನೇ ತಾರೀಖಾಗುತ್ತದೆ. ಅನಂತರ ನಮಗೆ ಕ್ರಿಸ್‌ಮಸ್ ರಜ ಬರುತ್ತದೆ. ನಿಯಮಗಳನ್ನು ಒಂದು ದಿನದಲ್ಲಿ ಮುಗಿಸುವುದು ನಮಗೆ ಸಾಧ್ಯವಾಗುವುದಿಲ್ಲ ಎಂದುಕೊಂಡಿದ್ದೇನೆ. ಅವುಗಳಿಗೆ ಕನಿಷ್ಠ ಎರಡು ದಿನ ಹಿಡಿಯಬಹುದು ಅಥವಾ ಮೂರು ದಿನಗಳೇ ಬೇಕಾಗಬಹುದು. ಸದಸ್ಯರು ಒಪ್ಪಿದರೆ ನಾವು ಕ್ರಿಸ್‌ಮಸ್ ರಜಗಳನ್ನು ೨೪ ಮತ್ತು ೨೫ ರಂದು ಆಚರಿಸೋಣ, ಅನಂತರ ಸಭೆಯ ಬೈಠಕ್ಕು ಮತ್ತೆ ಮುಂದುವರಿಯುತ್ತದೆ. ಹೀಗೆ ನಾವು ೨೬ ಮತ್ತು ೨೭ ರಂದು ನಿಯಮಗಳನ್ನು ಕುರಿತು ಚರ್ಚಿಸಬಹುದು. ೨೭ರ ಹೊತ್ತಿಗೆ ಅವುಗಳನ್ನು ಮುಗಿಸಿಬಿಡೋಣ. ನಿಯಮಗಳಿಂದ ಏನಾದರೂ ಪ್ರಶ್ನೆ ಉದ್ಭವಿಸಿದರೆ ಅನಂತರ ನೋಡಿಕೊಳ್ಳಬಹುದು. ನಿಯಮಗಳನ್ನು ಅಂಗೀಕರಿಸದೆ ಮತ್ತು ಕೆಲವು ಸಮಿತಿಗಳನ್ನು ನೇಮಿಸದೆ ನಾವು ಈ ಪೂರ್ವಭಾವಿ ಅಧಿವೇಶನವನ್ನು ಮುಗಿಸಬಾರದು ಎಂದು ನಾನು ಭಾವಿಸುತ್ತೇನೆ. ಪೂರ್ವಭಾವಿ ಅಧಿವೇಶನದ ಉದ್ದೇಶವೇ ಈ ಸಮಿತಿಗಳನ್ನು ನೇಮಿಸುವುದು. ಸದ್ಯಃ ನಾನು ಆಲೋಚಿಸಿದ ಕಾರ್ಯಕ್ರಮ ಇದು. ಅದು ಸದನದ ಮೇಲೆ ಅವಲಂಬಿಸಿರುತ್ತದೆ. ಈಗಾಗಲೇ ನಮಗೆ ಸಮಯದ ಕೊರತೆ ಇದೆ. ಇಡೀ ಕ್ರಿಸ್‌ಮಸ್ ವಾರ ಕೆಲಸವಿಲ್ಲದೆ ಹೋಗುವುದಕ್ಕೆ ನಾವು ಶಕ್ತರಲ್ಲ ಎಂದು ನಾನು ಭಾವಿಸುತ್ತೇನೆ. ನಾವು ಈ ವರ್ಷದ ೨೪ ಮತ್ತು ೨೫ ರಂದು ರಜ ತೆಗೆದುಕೊಳ್ಳಬೇಕೆಂದು ನಾನು ಭಾವಿಸುತ್ತೇನೆ.

**ಶ್ರೀ ಎಮ್. ಅನಂತಶಯನಮ್ ಅಯ್ಯಂಗಾರ್** (ಮದ್ರಾಸ್ : ಸಾಮಾನ್ಯ) : ಇಡೀ ವಾರವನ್ನು ಕ್ರಿಸ್‌ಮಸ್ ರಜೆಯಾಗಿ ನಾವು ಪಡೆಯಬೇಕೆಂದು ಬಯಸುತ್ತೇವೆ. ಈ ಅವಧಿಯಲ್ಲಿ ನಾವು ಹಿಂತಿರುಗಿ ಮುಂದಿನ ವರ್ಷದ ಪ್ರಾರಂಭದ ಅನಂತರ ಮತ್ತೆ ಭೇಟಿಯಾಗೋಣ.

**ಮಾನ್ಯ ಅಧ್ಯಕ್ಷರು** : ಎರಡು ದಿನ ಮಾತ್ರ ರಜವಿದ್ದರೆ ಸದಸ್ಯರು ಊರಿಗೆ ಹೋಗುತ್ತಾರೆ ಎಂದು ನಿರೀಕ್ಷಿಸಲಾಗಿಲ್ಲ.

**ಗೌರವಾನ್ವಿತ ಪಂಡಿತ್ ಹೃದಯನಾಥ್ ಕುಂಜ್ರು** (ಸಂಯುಕ್ತ ಪ್ರಾಂತ್ಯಗಳು : ಸಾಮಾನ್ಯ) : ಮಾನ್ಯ ಅಧ್ಯಕ್ಷರೆ, ನಮ್ಮಲ್ಲಿ ಬಹುಪಾಲು ಸದಸ್ಯರು ಈ ಅಧಿವೇಶನ ಆರಂಭವಾದಾಗ ಕ್ರಿಸ್‌ಮಸ್‌ಗೆ ಮೊದಲು ಅದು ಮುಗಿಯುತ್ತದೆ ಎಂದು ನಿರೀಕ್ಷಿಸಿದ್ದೆವು. ಅದರ ಆಧಾರದ ಮೇಲೆ ನಾವು ಕೆಲಸಗಳನ್ನು ಹೊಂಚಿಕೊಂಡಿದ್ದೆವು. ಅದರಿಂದಾಗಿ ಕ್ರಿಸ್‌ಮಸ್ ವಾರದಲ್ಲಿ ನಾವು ಬಿಡುವಿಲ್ಲದೆ ಕಾರ್ಯಮಗ್ನರಾಗಿರುತ್ತೇವೆ. ನಾನು ಯಾವ ರಜಗಳನ್ನೂ ಕೇಳುವುದೇ ಇಲ್ಲ. ಒಟ್ಟಿನಲ್ಲಿ ರಜವೇ ಇಲ್ಲದೆ ಕೆಲಸ ಮಾಡುವುದಕ್ಕೆ ನಾನು ಸಿದ್ಧನಾಗಿದ್ದೇನೆ. ಆದರೆ ಕೆಲಮಟ್ಟಿಗೆ ಮುಖ್ಯವಾದ ಕಾರ್ಯಗಳನ್ನು ಒಪ್ಪಿಕೊಂಡಿರುವುದರಿಂದ ಈ ಅಧಿವೇಶನವು ೨೩ನೇ ಡಿಸೆಂಬರ್ ಅನಂತರವೂ ಮುಂದುವರಿದರೆ ನಮ್ಮಲ್ಲಿ ಅನೇಕರಿಗೆ ಹಾಜರಾಗಲು ಸಾಧ್ಯವಾಗದೇ ಹೋಗಬಹುದು. ಆದ್ದರಿಂದ ಸಂವಿಧಾನ ರಚನಾಸಭೆಯ ನಿಯಮಗಳನ್ನು ಅಂಗೀಕರಿಸಲು ಮತ್ತು ನೀವು ಉಲ್ಲೇಖಿಸಿದ ಆ ಸಮಿತಿಗಳನ್ನು ನೇಮಿಸಲು ಮತ್ತೆ ಯಾವಾಗ ಸಭೆ ಸೇರಬೇಕು ಎಂದು ನಿರ್ಧರಿಸುವ ಮುನ್ನ ನೀವು ದಯವಿಟ್ಟು ಈ ವಿಚಾರವನ್ನು ಪರಿಗಣಿಸುತ್ತೀರಿ ಎಂದು ಭಾವಿಸುತ್ತೇನೆ.

**ಶ್ರೀ ಧೀರೇಂದ್ರನಾಥ್ ದತ್ತ** (ಬಂಗಾಳ : ಸಾಮಾನ್ಯ) : ಮಾನ್ಯ ಅಧ್ಯಕ್ಷರೆ, ನಿಯಮಗಳನ್ನು ನಮ್ಮ ಮುಂದೆ ೨೩ನೇ ಡಿಸೆಂಬರ್‌ನಂದು ಮಂಡಿಸಬೇಕು ಮತ್ತು ಅವುಗಳನ್ನು ೨೬ನೇ ಡಿಸೆಂಬರ್‌ನಂದು ಪರಿಗಣಿಸಬೇಕು ಎಂದು ನೀವು ಈಗಷ್ಟೇ ಹೇಳಿದಿರಿ. ಆದರೆ ತಿದ್ದುಪಡಿಗಳನ್ನು ಮಂಡಿಸಲು ಸ್ವಲ್ಪ ಸಮಯ ಬೇಕಾಗುತ್ತದೆ. ಇಲ್ಲಿನ ಅಭ್ಯಾಸವೇನೋ ನನಗೆ ಗೊತ್ತಿಲ್ಲ. ಆದರೆ ಬೇರೆಡೆ ಶಾಸನ ಸಭೆಗಳಲ್ಲಿ ಕನಿಷ್ಠ ೪ ಅಥವಾ ೫ ದಿನಗಳ ಸಮಯವನ್ನು ನೀಡಲಾಗುತ್ತದೆ. ಆದ್ದರಿಂದ ನಿಯಮಗಳ ಪರಿಗಣನೆಯನ್ನು ೨೬ರಂದು ಪ್ರಾರಂಭಿಸುವುದು ಅಸಾಧ್ಯ. ಇಂತಹ ಪರಿಸ್ಥಿತಿಯಲ್ಲಿ ಜನವರಿ ೨ ರಂದು ನಾವು ಸಭೆ ಸೇರುವುದು ಅಪೇಕ್ಷಣೀಯ ಎಂದು ನಾನು ಭಾವಿಸುತ್ತೇನೆ.

**ಗೌರವಾನ್ವಿತ ರೆವರೆಂಡ್ ಜೆ.ಜೆ.ಎಮ್. ನಿಕೊಲಸ್ ರಾಯ್** (ಅಸ್ಸಾಮ್ : ಸಾಮಾನ್ಯ) : ಮಾನ್ಯ ಅಧ್ಯಕ್ಷರೆ, ಕ್ರಿಸ್‌ಮಸ್ ರಜಗಳು ಕ್ರೈಸ್ತರಿಗೆ ಬಹಳ ಮುಖ್ಯ. ನಾವು ಸಾಮಾನ್ಯವಾಗಿ ೨೪, ೨೫, ೨೬ ಮತ್ತು ೨೭ ರಂದು ರಜ ಪಡೆಯುತ್ತೇವೆ. ಈ ಸಂವಿಧಾನ ರಚನಾಸಭೆಯು ಜನವರಿ ೨ ಅಥವಾ ೩ ರಂದು ಮತ್ತೆ ಸಭೆಸೇರಿದರೆ ನಮಗೆಲ್ಲ ತುಂಬ ಸಂತೋಷವಾಗುತ್ತದೆ. ಆಗ ನಾವು ಎಷ್ಟು ದಿನ ಬೇಕಾದರೂ ನಮ್ಮ ಕಾರ್ಯವನ್ನು ಮುಂದುವರಿಸಬಹುದು. ಆದರೆ ನಾವು ಈ ವರ್ಷ ೨೫ನೇ ತಾರೀಖಿನ ಅನಂತರ ಅಂದರೆ ಕ್ರಿಸ್‌ಮಸ್ ರಜದ ಸಮಯದಲ್ಲಿ ಸಭೆ ಸೇರಿದರೆ ಈ ಸಭೆಯ ಕೆಲಸಕ್ಕೆ ಬಹಳ ಅನನುಕೂಲವಾಗುತ್ತದೆ. ಅಲ್ಲದೆ ಕ್ರಿಸ್‌ಮಸ್ ರಜದ ಸಂದರ್ಭಕ್ಕೆಂದು ನಾವು ಈಗಾಗಲೇ ಗೊತ್ತುಮಾಡಿಕೊಂಡಿರುವ ನಮ್ಮ ಅನೇಕ ಕಾರ್ಯಗಳಿಗೆ ಅಡಚಣೆಯೂ ಉಂಟಾಗುತ್ತದೆ. ಈ ಸದನದ ಮುಂದೆ ನಾನು ಮಂಡಿಸಬೇಕಾಗಿರುವುದು ಇಷ್ಟೇ ಸ್ವಾಮಿ.

**ಶ್ರೀ ಡಿ.ಪಿ. ಖೈತಾನ್** (ಬಂಗಾಳ : ಸಾಮಾನ್ಯ) : ಮಾನ್ಯರೆ, ಈ ಸಂವಿಧಾನ ರಚನಾಸಭೆಯ ಸದಸ್ಯರು ನೀವು ಪ್ರಕಟಿಸಿದ ಕಾರ್ಯಕ್ರಮಗಳನ್ನು ಒಪ್ಪದಿರುವ ರೀತಿಯನ್ನು ನೋಡಿ ನನಗೆ ಸ್ವಲ್ಪಮಟ್ಟಿಗೆ ಆಶ್ಚರ್ಯವೇ ಆಗುತ್ತಿದೆ. ಈ ಸಂವಿಧಾನ ರಚನಾಸಭೆಯ ಮುಂದಿರುವ ಕೆಲಸವು ಬೇರೆಲ್ಲ ಕೆಲಸಗಳಿಗಿಂತ ಹೆಚ್ಚು ಆದ್ಯತೆಯನ್ನು ಪಡೆಯಬೇಕು. ನಾವು ಎಷ್ಟು ಸಾಧ್ಯವೋ ಅಷ್ಟು ವೇಗದಿಂದ ಮುಂದೆ ಸಾಗಬೇಕು. ಅತ್ಯಂತ ಅಗತ್ಯವಾದ ಕಾರ್ಯ ವಿಧಾನಗಳ ನಿಯಮಗಳನ್ನು ಅಂಗೀಕರಿಸುವುದಕ್ಕಿಂತ ಮೊದಲು ನಾವು ಇಲ್ಲಿಂದ ಹೊರಟುಹೋಗಬಾರದು. ಆದ್ದರಿಂದ ಬೇರೆ ಎಲ್ಲ ಕೆಲಸಗಳನ್ನು ಬದಿಗಿಟ್ಟು ನಮ್ಮ ಮುಂದಿರುವ ಪ್ರಮುಖ ಕೆಲಸಕ್ಕೆ ಆದ್ಯತೆ ನೀಡಬೇಕೆಂದು ಈ ಸಂವಿಧಾನ ರಚನಾಸಭೆಯ ಎಲ್ಲ ಸದಸ್ಯರಿಗೆ ನಿಮ್ಮ

ಮೂಲಕ ನಾನು ಮನವಿ ಮಾಡಿಕೊಳ್ಳುತ್ತೇನೆ ಮಾನ್ಯರೆ.

**ಶ್ರೀ ಮೋಹನ್‌ಲಾಲ್ ಸಕ್ಸೇನಾ** (ಸಂಯುಕ್ತ ಪ್ರಾಂತ್ಯಗಳು : ಸಾಮಾನ್ಯ) : ಮಾನ್ಯ ಅಧ್ಯಕ್ಷರೆ, ನಾನು ಒಂದು ಸಲಹೆ ಮಾಡಲು ಬಯಸುತ್ತೇನೆ. ಕಾರ್ಯ ವಿಧಾನಗಳ ಸಮಿತಿಯ ಕೆಲಸಕ್ಕೆ ಅನುಕೂಲ ಮಾಡಿಕೊಡುವುದಕ್ಕಾಗಿ ಈ ಸದನವು ನಾಳೆ ಸಭೆ ಸೇರದಿರಲಿ, ನಾಡಿದ್ದು ಮಧ್ಯಾಹ್ನ ಸಭೆ ಸೇರಲಿ. ಆಗ ಸಮಿತಿಯ ವರದಿಯು ನಮಗೆ ಪೂರ್ಣ ಪ್ರಮಾಣದಲ್ಲಿ ಲಭ್ಯವಾಗುತ್ತದೆ ಮತ್ತು ಶನಿವಾರದಿಂದ ನಾವು ನಿಯಮಗಳನ್ನು ಪರಿಶೀಲಿಸಬಹುದು ಹಾಗೂ ಸಾಧ್ಯವಾದರೆ ನಾವು ಸೋಮವಾರ ಅದನ್ನು ಮುಗಿಸಬಹುದು.

**ಶ್ರೀ ಆರ್.ಕೆ. ಸಿಧ್ವಾ** (ಸಿ.ಪಿ. ಮತ್ತು ಬೇರಾರ್ : ಸಾಮಾನ್ಯ) : ವರದಿಯನ್ನು ಅಧ್ಯಯನ ಮಾಡಲು ಮತ್ತು ತಿದ್ದುಪಡಿಗಳನ್ನು ಸೂಚಿಸಲು ಈ ಸದನಕ್ಕೆ ಸಾಕಷ್ಟು ದಿನಗಳನ್ನು ಪಡೆಯುವ ಹಕ್ಕು ಇದೆ ಎಂದು ನಾನು ಭಾವಿಸುತ್ತೇನೆ. ನಮ್ಮ ಪಕ್ಷದ ಸಭೆಗಳಲ್ಲೂ ನಾವು ಅವುಗಳನ್ನು ಪರಿಗಣಿಸಬೇಕಾಗುತ್ತದೆ. ಅದಕ್ಕೆ ಎರಡು ಅಥವಾ ಮೂರು ದಿನಗಳು ಹಿಡಿಯಬಹುದು. ಶ್ರೀ ಮೋಹನ್‌ಲಾಲ್ ಸಕ್ಸೇನಾ ಅವರು ಹೇಳುವಂತೆ ಎರಡು ಅಥವಾ ಮೂರು ದಿನಗಳಲ್ಲಿ ಆ ಕೆಲಸವನ್ನು ಪೂರ್ತಿಮಾಡಲು ಸಾಧ್ಯವಾಗದೇ ಹೋಗಬಹುದು. ಆದ್ದರಿಂದ ಸಮಿತಿಯ ವರದಿಯನ್ನು ೨೧ ಅಥವಾ ೨೩ ರಂದು ಮಂಡಿಸಿದ ಮೇಲೆ ಜನವರಿ ೨ ಅಥವಾ ೩ ರಂದು ನಾವು ಸಭೆಸೇರಬೇಕೆಂಬ ಪ್ರಸ್ತಾವಕ್ಕೆ ನಾನು ಬೆಂಬಲ ನೀಡುತ್ತೇನೆ.

**ಮಾನ್ಯ ಅಧ್ಯಕ್ಷರು** : ಬಹಳ ಹಿಂದೆಯೇ ಪ್ರಕಟಿಸಲಾದ ಇತರ ಕೆಲವು ಸಾರ್ವಜನಿಕ ಸಮಾರಂಭಗಳಿವೆ. ಅವು ಜನವರಿ ಮೊದಲನೆಯ ವಾರದಲ್ಲಿ ನಡೆಯುತ್ತವೆ. ಈ ಕಾರಣದಿಂದಾಗಿ ಈ ವರ್ಷ ಮುಗಿಯುವುದರೊಳಗಾಗಿ ಈ ಸಭೆಯ ಕೆಲಸಗಳನ್ನು ಮುಗಿಸಬೇಕೆಂಬ ತವಕದಲ್ಲಿ ನಾನಿದ್ದೆ. ಉದಾಹರಣೆಗೆ, ಮುಂದಿನ ಜನವರಿ ೨ ರಂದು ವಿಜ್ಞಾನ ಸಮ್ಮೇಳನ ಆರಂಭವಾಗುತ್ತದೆ. ಜಗತ್ತಿನಾದ್ಯಂತ ಪ್ರಖ್ಯಾತ ವಿಜ್ಞಾನಿಗಳು ಬರುತ್ತಿದ್ದಾರೆ. ಪಂಡಿತ್ ಜವಾಹರಲಾಲ್ ನೆಹರು ಅವರಿಗೆ ಅಲ್ಲಿ ಪ್ರಮುಖವಾದ ಸಮಾರಂಭವಿದೆ. ಇತರ ಸದಸ್ಯರಿಗೂ ಅದರಲ್ಲಿ ಆಸಕ್ತಿ ಇರಬಹುದು. ಅದೇ ರೀತಿಯಲ್ಲಿ ಗೊತ್ತುಪಡಿಸಲಾದ ಇತರ ಸಮಾರಂಭಗಳೂ ಇವೆ. ಆದ್ದರಿಂದ ಈಗಾಗಲೇ ಪ್ರಕಟಿಸಲಾಗಿರುವ ಆ ಸಾರ್ವಜನಿಕ ಸಮಾರಂಭಗಳಿಗೆ ಅಡಚಣೆಯುಂಟುಮಾಡದೆ ಈ ವರ್ಷದೊಳಗೆ ಸಾಧ್ಯವಾದಷ್ಟು ಕೆಲಸವನ್ನು ಮುಗಿಸಬೇಕೆನ್ನುವುದು ನನ್ನ ಕಾಳಜಿ. ಸಹಜವಾಗಿಯೇ ಇದು ಈ ಸಭೆಯ ಸದಸ್ಯರನ್ನು ಅವಲಂಬಿಸಿದೆ. ೨೩ರ ಅನಂತರ ಇಲ್ಲಿ ಸೇರಲು ಅವರು ಇಷ್ಟಪಡದಿದ್ದರೆ ಅದನ್ನು ಕೂಡ ನಾವು ಪರಿಗಣನೆಗೆ ತೆಗೆದುಕೊಳ್ಳಬೇಕಾಗುತ್ತದೆ ಮತ್ತು ಮುಂದಿನ ವರ್ಷಕ್ಕೆ ಹೋಗಬೇಕಾಗುತ್ತದೆ. ನಮಗೆ ಎದುರಾಗುವ ಅಡಚಣೆಗಳನ್ನು ನಿಮ್ಮ ಮುಂದೆ ಇರಿಸಿದ್ದೇನೆ. ಜನವರಿಯಲ್ಲಿ, ಮತ್ತಷ್ಟು ಕಷ್ಟ ಇದೆ. ಕೆಲವು ಪ್ರಾಂತೀಯ ಶಾಸನಸಭೆಗಳು ಸೇರುತ್ತವೆ.

**ಗೌರವಾನ್ವಿತ ಶ್ರೀ ಪುರುಷೋತ್ತಮ ದಾಸ್ ಟಂಡನ್** (ಸಂಯುಕ್ತ ಪ್ರಾಂತ್ಯಗಳು : ಸಾಮಾನ್ಯ) : ಪ್ರಾಂತೀಯ ಶಾಸನ ಸಭೆಗಳ ಕಲಾಪವನ್ನು ಸೂಕ್ತವಾಗಿ ಹೊಂದಿಸಿಕೊಳ್ಳಬಹುದು.

**ಗೌರವಾನ್ವಿತ ಸರ್ದಾರ್ ವಲ್ಲಭಭಾಯಿ ಜೆ. ಪಟೇಲ್** (ಬಾಂಬೆ : ಸಾಮಾನ್ಯ) : ಮಾನ್ಯರೆ, ೩೦೦ ಜನ ಪ್ರಮುಖ ಸದಸ್ಯರಿಂದ ಕೂಡಿದ ಒಂದು ಸದನದಲ್ಲಿ ಎಲ್ಲರ ಅನುಕೂಲಗಳನ್ನೂ ಸರಿಹೊಂದಿಸುವುದು ಕಷ್ಟ. ಎಲ್ಲ ಪ್ರಾಂತ್ಯಗಳ ಮುಂಗಡಪತ್ರದ ಅಧಿವೇಶನ ಕೂಡ ಬರುತ್ತಿದೆ.

ಕೇಂದ್ರ ಶಾಸನಸಭೆಯ ಮುಂಗಡಪತ್ರದ ಅಧಿವೇಶನವೂ ಇದೆ. ಎಲ್ಲರ ಅನುಕೂಲಗಳನ್ನು ಈಡೇರಿಸುವುದು ಸಾಧ್ಯವಿಲ್ಲ. ಸರಿಯಾಗಿ ಸಲಹೆ ಕೊಟ್ಟಿರುವ ಪ್ರಕಾರ, ಸಂವಿಧಾನ ರಚನಾಸಭೆಯ ಕೆಲಸಕ್ಕೆ ಆದ್ಯತೆಯನ್ನು ಕೊಡಬೇಕು. ನಿಯಮಗಳನ್ನು ನಾವು ಅಂಗೀಕರಿಸುವವರೆಗೂ ಸಂವಿಧಾನ ರಚನಾಸಭೆಯ ಕೆಲಸದಲ್ಲಿ ಯಾವುದೇ ಪ್ರಗತಿಯನ್ನು ಮಾಡಲಾಗುವುದಿಲ್ಲ. ನಾವು ಚದುರುವ ಮೊದಲು ನಿಯಮಗಳನ್ನು ಮುಗಿಸಬೇಕು. ಅನಂತರ ಸಭೆಯನ್ನು ಮುಂದೂಡಬಹುದು. ಪೂರ್ವಭಾವಿ ಅಧಿವೇಶನವು ಈ ತಿಂಗಳ ಅವಧಿಯಲ್ಲಿ

ಮುಕ್ತಾಯವಾಗಲಾರದು ಅಥವಾ ಜನವರಿ ಮೊದಲ ವಾರದಲ್ಲಿ ಕೂಡ. ಆದ್ದರಿಂದ ಜನವರಿ ೩ ಅಥವಾ ೪ ರಂದು ಸಭೆ ಸೇರೋಣ ಎಂದು ಸಲಹೆ ಮಾಡುವುದು ಪ್ರಾಯೋಗಿಕವಲ್ಲ. ನಮಗೆ ಏನೆಲ್ಲ ಅನನುಕೂಲಗಳು ಒದಗಿ ಬಂದರೂ, ನಿಯಮಗಳನ್ನು ನಾವು ಮುಗಿಸಲೇ ಬೇಕು. ಆದ್ದರಿಂದ ಅಧ್ಯಕ್ಷರು ಸೂಚಿಸಿದಂತೆ ನಿಯಮಗಳು ೨೩ ರಂದು ಸಿದ್ಧವಾಗುವುದಾದರೆ, ಒಂದೋ ನಾವು ೨೪ ಮತ್ತು ೨೫ರ ರಜಾದಿನಗಳನ್ನು ಕೈಬಿಡಬೇಕು ಅಥವಾ ೨೬ ಮತ್ತು ೨೭ ರಂದು ಬಂದು ನಿಯಮಗಳನ್ನು ಮುಗಿಸಬೇಕು. ಅನಂತರ ನಾವು ಯಾವ ದಿನಾಂಕಕ್ಕೆ ಸಭೆಯನ್ನು ಮುಂದೂಡಬೇಕು ಎಂದು ನಿಗದಿಮಾಡಬಹುದು. ಕಾರ್ಯಕ್ರಮವನ್ನು ಖಚಿತಪಡಿಸದಿದ್ದರೆ ನಮ್ಮ ಕೆಲಸವನ್ನು ಫೈಸಲು ಮಾಡಲಾಗುವುದಿಲ್ಲ. ಆದ್ದರಿಂದ ನಾವು ತಾತ್ಕಾಲಿಕವಾಗಿ ಕಾರ್ಯಕ್ರಮವನ್ನು ನಿಗದಿಗೊಳಿಸೋಣ ಮತ್ತು ಅನಂತರ ಇತರ ವಿಚಾರಗಳನ್ನು ಪರಿಗಣಿಸೋಣ.

**ಶ್ರೀ ಕೆ. ಸಂತಾನಮ್** (ಮದ್ರಾಸ್ : ಸಾಮಾನ್ಯ) : ನಿಯಮಗಳು ಸಿದ್ಧವಾಗುತ್ತಿರುವಂತೆಯೇ ಅವುಗಳನ್ನು ಸಭೆಯ ಮುಂದೆ ಮಂಡಿಸಬಹುದು ಎಂದು ಸಲಹೆ ಮಾಡಲು ನಾನು ಬಯಸುತ್ತೇನೆ. ಎಲ್ಲ ನಿಯಮಗಳೂ ಪೂರ್ತಿಯಾಗುವವರೆಗೂ ನಾವು ಯಾಕೆ ಕಾಯಬೇಕು. ನಾಳೆ ಅಥವಾ ಇಂದು ಸಾಯಂಕಾಲದಿಂದಲೇ ನಾವು ಅವುಗಳನ್ನು ಕೈಗೆತ್ತಿಕೊಳ್ಳಬಹುದು. ಒಂದು ಭಾಗದ ಕರಡು ಪ್ರತಿಯನ್ನು ಸಿದ್ಧಪಡಿಸಲು ಸಮಿತಿಗೆ ಸಾಧ್ಯವಾಗಲಿಲ್ಲವೆ ಎಂದು ನನಗೆ ಆಶ್ಚರ್ಯವಾಗುತ್ತಿದೆ. ನಾವು ಭಾಗಗಳನ್ನು ತೆಗೆದುಕೊಂಡು ಕೈದಾಟಿಸುತ್ತಾ ಹೋಗೋಣ. ಅವರು ಮುಗಿಸುವ ಹೊತ್ತಿಗೆ ನಾವೂ ಮುಗಿಸಿರುತ್ತೇವೆ.

**ಮಾನ್ಯ ಅಧ್ಯಕ್ಷರು** : ನಿಯಮಗಳನ್ನು ಸ್ವಲ್ಪ ಸ್ವಲ್ಪವಾಗಿ ತೆಗೆದುಕೊಳ್ಳುವುದು ಸಾಧ್ಯ ಎಂದು ನನಗೆ ಅನ್ನಿಸುತ್ತಿಲ್ಲ. ಅವುಗಳನ್ನು ನಾವು ಇಡಿಯಾಗಿ ತೆಗೆದುಕೊಳ್ಳಬೇಕು.

**ಗೌರವಾನ್ವಿತ ಶ್ರೀ ಪುರುಷೋತ್ತಮ ದಾಸ್ ಟಂಡನ್** : ಮಾನ್ಯರೆ, ನಾನು ಸೂಚಿಸುವುದೇನೆಂದರೆ ಹೆಚ್ಚಿನ ಸಂಖ್ಯೆಯ ಸದಸ್ಯರು ಕ್ರಿಸ್‌ಮಸ್ ವಾರಕ್ಕಾಗಿ ಈಗಾಗಲೇ ಕೆಲಸಗಳನ್ನು ಗೊತ್ತುಮಾಡಿಕೊಂಡಿದ್ದಾರೆ ಎನ್ನುವುದನ್ನು ದೃಷ್ಟಿಯಲ್ಲಿಟ್ಟುಕೊಳ್ಳಬೇಕು. ಅಂತಹ ಕೆಲಸಗಳನ್ನು ಗೊತ್ತುಮಾಡಿಕೊಳ್ಳಬಾರದು ಎಂದು ಈಗ ಹೇಳುವುದರಲ್ಲಿ ಯಾವುದೇ ಪ್ರಯೋಜನವಿಲ್ಲ. ಕ್ರಿಸ್‌ಮನ್ ವಾರದಲ್ಲಿ ಸಾಮಾನ್ಯವಾಗಿ ನಾವು ಇಲ್ಲಿ ಸಕ್ರಿಯವಾಗಿ ಕೆಲಸ ಮಾಡುವುದಿಲ್ಲ ಎಂದು ಭಾವಿಸಲಾಗಿದೆ. ನಾವು ಚೆದುರುವ ಮೊದಲು ಸದಸ್ಯರಿಗೆ ನಿಯಮಗಳನ್ನು ನೀಡಿದರೆ ಅವರು ಸಹಜವಾಗಿಯೇ ತಮ್ಮ ಕಾಲದ ಸ್ವಲ್ಪ ಭಾಗವನ್ನು ಅದಕ್ಕೆ ವಿನಿಯೋಗಿಸುತ್ತಾರೆ. ಅವುಗಳನ್ನು ಕುರಿತು ಯೋಚನೆ ಮಾಡಲು ಅವರಿಗೆ ಸ್ವಲ್ಪ ಸಮಯವನ್ನು ನೀಡಬೇಕು. ಈಗಾಗಲೇ ಎತ್ತಿ ತೋರಿಸಿದಂತೆ ಪಕ್ಷಗಳು ಕೂಡ ತಮ್ಮ ಪಕ್ಷದ ಸಭೆಗಳಲ್ಲಿ ಅವುಗಳನ್ನು ಪರಿಗಣಿಸಬೇಕಾಗಿಬರಬಹುದು. ಮಾನ್ಯರೆ, ಕ್ರಿಸ್‌ಮಸ್ ವಾರದ ಅವಧಿಯಲ್ಲಿ ನಿಯಮಗಳ ಪ್ರಶ್ನೆಯನ್ನು ನಾವು ಕೈಗೆತ್ತಿಕೊಳ್ಳಬಾರದು ಎಂದು ನಾನು ಭಾವಿಸುತ್ತೇನೆ. ಅವುಗಳನ್ನು ಕುರಿತು ಯೋಚನೆ ಮಾಡಲು, ಅರಗಿಸಿಕೊಳ್ಳಲು ಮತ್ತು ತಿದ್ದುಪಡಿಗಳನ್ನು ಸೂಚಿಸಲು ಸದಸ್ಯರಿಗೆ ಸಾಕಷ್ಟು ಸಮಯವನ್ನು ನೀಡಬೇಕು. ನಾವು ಜನವರಿ ಮೊದಲನೆಯ ವಾರದಲ್ಲಿ ಯಾವಾಗಲಾದರೂ ಸೇರಬಹುದು.

**ಮಾನ್ಯ ಅಧ್ಯಕ್ಷರು** : ನಾವು ಈವರೆಗೆ ವಿವಿಧ ಭಾಷಣಕಾರರ ಮಾತುಗಳನ್ನು ಮತ್ತು ಅವರ ಅಭಿಪ್ರಾಯಗಳನ್ನು ಕೇಳಿದ್ದೇವೆ. ಈ ಅಂಶಗಳನ್ನು ಪರಿಗಣಿಸಿದ ಅನಂತರ ನಾಳೆ ನಾವು ಯಾವುದಾದರೂ ನಿರ್ಣಯ ತೆಗೆದುಕೊಳ್ಳೋಣ. ಮಧ್ಯದ ಕಾಲದಲ್ಲಿ ನಾವು ನಮ್ಮ ಕಲಾಪದಲ್ಲಿ ಮುಂದೆ ಸಾಗೋಣ. ನಾವು ನಿರ್ಣಯ ಮತ್ತು ತಿದ್ದುಪಡಿಗಳ ಮೇಲಿನ ಚರ್ಚೆಯನ್ನು ಕೈಗೆತ್ತಿಕೊಳ್ಳೋಣ.

**ನಿರ್ಣಯ ಆರ್‌ಇ : ಗುರಿಗಳು ಮತ್ತು ಉದ್ದೇಶಗಳು (ಮುಂದುವರಿದದ್ದು)**

**ಗೌರವಾನ್ವಿತ ರೆವರೆಂಡ್ ಜೆ.ಜೆ.ಎಮ್. ನಿಕೊಲಸ್ ರಾಯ್** (ಅಸ್ಸಾಮ್ : ಸಾಮಾನ್ಯ) : ಮಾನ್ಯ ಅಧ್ಯಕ್ಷರೆ, ಈ ನಿರ್ಣಯವನ್ನು ಕುರಿತು ಮಾತನಾಡಲು ಈ ಅವಕಾಶವನ್ನು ನನಗೆ ಕೊಟ್ಟಿದ್ದಕ್ಕಾಗಿ ನಿಮಗೆ

ಕೃತಜ್ಞತೆಗಳು. ನನ್ನ ಅಧೀನದಲ್ಲಿರುವ ಎಲ್ಲ ಬಲವನ್ನು ಉಪಯೋಗಿಸಿ, ಪಂಡಿತ್ ನೆಹರು ಅವರು ಮಂಡಿಸಿದ ನಿರ್ಣಯವನ್ನು ಬೆಂಬಲಿಸಲು ನಾನು ಇಲ್ಲಿ ನಿಂತಿದ್ದೇನೆ. ಈ ಸದನದ ಮುಂದೆ ಮಂಡಿಸಬೇಕಾದ ಇಂತಹ ಒಂದು ನಿರ್ಣಯದಲ್ಲಿ ಖಚಿತವಾಗಿ ಪ್ರತಿಪಾದಿಸಬೇಕಾದ ಎಲ್ಲ ತತ್ತ್ವಗಳನ್ನೂ ಈ ನಿರ್ಣಯವು ಒಳಗೊಂಡಿದೆ. ಮೊಟ್ಟಮೊದಲನೆಯದಾಗಿ, ಭಾರತದಲ್ಲಿರುವ ನಮ್ಮೆಲ್ಲರ ಮನದಲ್ಲಿರುವ ಉದ್ದೇಶವನ್ನು ಅದು ಹೇಳಿದೆ. ಅದೆಂದರೆ, ಮುಂದೆ ಒಂದು ದಿನ ಭಾರತದ ಸ್ವಾತಂತ್ರ್ಯವನ್ನು ಘೋಷಿಸುವುದು. ಇಲ್ಲಿ ನಾವು ಒಂದು ನಿರ್ಧಾರವನ್ನಷ್ಟೇ ಮಾಡಿದ್ದೇವೆ. ಅದೆಂದರೆ ಭಾರತದ ಸ್ವಾತಂತ್ರ್ಯವನ್ನು ನಾವು ಘೋಷಿಸಬೇಕು. ಭಾರತದ ಸ್ವಾತಂತ್ರ್ಯವನ್ನು ಗಳಿಸಬೇಕೆಂಬ ದೃಢವಾದ ನಿರ್ಧಾರ ನಮ್ಮ ಮನಸ್ಸಿನಲ್ಲಿದೆ. ಅದು ಭಾರತದಲ್ಲಿರುವ ಪ್ರತಿಯೊಬ್ಬನ ಆಸೆ. ಭಾರತದ ಒಂದು ಕೊನೆಯಿಂದ ಇನ್ನೊಂದು ಕೊನೆಯವರೆಗೆ ಎಲ್ಲಿಯೇ ಹೋಗಲಿ ಆ ಬಗೆಯ ನಿರ್ಧಾರಕ್ಕೆ ವಿರುದ್ಧವಾಗಿರುವವರು ಯಾರಾದರೂ ಸಿಗುತ್ತಾರೆಯೇ ಎಂದು ನಾನು ಕಲ್ಪಿಸಿಕೊಳ್ಳಲಾರೆ. ಅನಂತರ ಅದು ಮತ್ತೂ ಘೋಷಿಸುವುದೇನೆಂದರೆ ನಾವು ರಚಿಸಲಿರುವ ಸಂವಿಧಾನವು ಒಂದು ಗಣತಂತ್ರವಾದಿ ಸ್ವರೂಪದ ಸರ್ಕಾರವಾಗಿರುತ್ತದೆ. ಒಂದು ಪ್ರಜಾಸತ್ತಾತ್ಮಕ ಸ್ವರೂಪದ ಸರ್ಕಾರವಾಗಿರುತ್ತದೆ,– ಜನರಿಂದ ಜನರಿಗಾಗಿ ಇರುವ ಸರ್ಕಾರವಾಗಿರುತ್ತದೆ. ಅದು ಖಂಡಿತವಾಗಿಯೂ ಭಾರತದ ಸಮಸ್ತ ಜನರ ಆಕಾಂಕ್ಷೆ. ಭಾರತದಲ್ಲಿ ಕೆಲವು ರಾಜ–ಪ್ರಭುತ್ವಗಳಿವೆ ಎನ್ನುವುದು ಸತ್ಯ. ಆದರೆ ಈ ಎಲ್ಲ ರಾಜಪ್ರಭುತ್ವಗಳೂ ಇಂಗ್ಲೆಂಡಿನ ರಾಜಪ್ರಭುತ್ವದಂತೆ ಕನಿಷ್ಠಪಕ್ಷ ಸಂಪೂರ್ಣ ಸಂವಿಧಾನಾತ್ಮಕ ರಾಜ ಪ್ರಭುತ್ವಗಳಾಗುವ ಕಾಲ ಬರುತ್ತದೆ ಎಂದು ನಾವು ಭಾವಿಸುತ್ತೇವೆ. ಅಷ್ಟೇ ಅಲ್ಲದೆ ಎಲ್ಲ ರಾಜ್ಯಗಳಲ್ಲಿರುವ ಜನರೂ ತಮ್ಮ ಭಾವಿಸುತ್ತೇವೆ. ಅಷ್ಟೇ ಅಲ್ಲದೇ ಎಲ್ಲ ರಾಜ್ಯಗಳಲ್ಲಿರುವ ಜನರೂ ತಮ್ಮ ರಾಜ್ಯದಲ್ಲಿ ಪ್ರಜಾಸತ್ತಾತ್ಮಕ ಸ್ವರೂಪದ ಸರ್ಕಾರ ಬರುತ್ತದೆಂದು ಕಲ್ಪಿಸಿಕೊಳ್ಳುತ್ತಿದ್ದಾರೆ ಎಂದು ನಾವು ನಂಬುತ್ತೇವೆ. ಆದ್ದರಿಂದ ಈ ನಿರ್ಣಯದಲ್ಲಿರುವ ಈ ಘೋಷಣೆಗಳನ್ನು ಕುರಿತಂತೆ ಯಾವ ಆಕ್ಷೇಪವೂ ಇರಲಾರದು. ಅನಂತರ ಅದು ಭಾರತದ ಒಕ್ಕೂಟದಲ್ಲಿ ಸೇರಿಸಲಾಗುವ ಎಲ್ಲ ಭೂಪ್ರದೇಶಗಳನ್ನು ಕುರಿತು ಮಾತನಾಡುತ್ತದೆ. ಅದು ಸಾಕಷ್ಟು ವ್ಯಾಪಕವಾಗಿದೆ. ಅನಂತರ ಮೂರನೆಯ ಕಂಡಿಕೆಯಲ್ಲಿ ಅದು ಸ್ವಯಮಾಧಿಕಾರದ ಘಟಕಗಳನ್ನು ಕುರಿತು ಮಾತನಾಡುತ್ತದೆ. ಈ ಸ್ವಯಮಾಧಿಕಾರದ ಘಟಕಗಳು ಪ್ರಸ್ತುತ ಸರಹದ್ದುಗಳ ಪ್ರಕಾರ ಸ್ವಯಮಾಧಿಕಾರಗಳು ಅಥವಾ ಮುಂದೆ ಅವು ಪಡೆಯಬಹುದಾದ ಸರಹದ್ದುಗಳ ಪ್ರಕಾರ ಆಗಬಹುದು. ಈ ಘಟಕಗಳು ಅಥವಾ ಪ್ರದೇಶಗಳು ಉಳಿಕೆಯ ಅಧಿಕಾರಗಳೊಡನೆ ಸ್ವಯಮಾಧಿಕಾರಗಳಾಗಿ ಉಳಿಯುತ್ತವೆ ಮತ್ತು ಸರ್ಕಾರ ಹಾಗೂ ಆಡಳಿತದ ಎಲ್ಲ ಅಧಿಕಾರಗಳು ಮತ್ತು ಕಾರ್ಯಭಾರಗಳನ್ನು ಚಲಾಯಿಸುತ್ತವೆ. ಇದಕ್ಕೆ ವಿನಾಯಿತಿಯೆಂದರೆ ಕೇಂದ್ರ ಸರ್ಕಾರಕ್ಕೆ ವಹಿಸಿಕೊಟ್ಟ ಅಧಿಕಾರಗಳು. ಇದು ನಮ್ಮ ಅಪೇಕ್ಷೆ. ಇದು ಈ ದೇಶದ ಎಲ್ಲ ಜನರ ಅಪೇಕ್ಷೆ ಪ್ರತಿಯೊಂದು ಪ್ರಾಂತ್ಯವೂ ಸ್ವಯಮಾಧಿಕಾರವಾಗಬೇಕು ಎನ್ನುವುದು ನಮ್ಮ ಮುಂದೆ ಇರುವ ಉದ್ದೇಶ. ಮಾನ್ಯರೆ, ಈ ವಿಚಾರವಾಗಿ ನಾನು ಹೇಳಲು ಬಯಸಿರುವುದೇನೆಂದರೆ ಸಂಪುಟ ನಿಯೋಗದ ಹೇಳಿಕೆಯಲ್ಲಿ ವಿಭಾಗದ ಪರಿಕಲ್ಪನೆಯನ್ನು ಸೇರಿಸಿರುವುದು ಬಹಳ ದುರದೃಷ್ಟಕರ. ಚಕ್ರವರ್ತಿಯ ಸರ್ಕಾರವು ಇತ್ತೀಚೆಗೆ ನೀಡಿದ ವ್ಯಾಖ್ಯಾನದ ಪ್ರಕಾರ ಒಂದು ಪ್ರಾಂತ್ಯವನ್ನು ಮೀರಿಸಿ ಇನ್ನೊಂದು ಪ್ರಾಂತ್ಯದ ಬಹುಸಂಖ್ಯಾತ ಮತದಾರರು ಮತದಾನವನ್ನು ಮಾಡಬಹುದು. ನಾನು ವಿಶೇಷವಾಗಿ 'ಸಿ' ವಿಭಾಗವನ್ನು ಕುರಿತು ಮಾತನಾಡುತ್ತಿದ್ದೇನೆ. ಅದು ಅಸ್ಸಾಮ್‌ಗೆ ಸಂಬಂಧಿಸಿದ್ದು. ಅಸ್ಸಾಮ್ ಒಂದು ಮುಸ್ಲಿಮೇತರ ಪ್ರಾಂತ್ಯ ಸಂವಿಧಾನ ರಚನಾಸಭೆಯಲ್ಲಿ ಅಸ್ಸಾಮನ್ನು ಪ್ರತಿನಿಧಿಸುವ ಏಳು ಜನ ಮುಸ್ಲಿಮೇತರ ಸದಸ್ಯರು ಮತ್ತು ಮೂರು ಜನ ಮುಸ್ಲಿಮ್ ಸದಸ್ಯರು ಇದ್ದಾರೆ. ನನ್ನ ಮುಸ್ಲಿಮ್ ಸ್ನೇಹಿತರು ಈ ಸಭೆಯಲ್ಲಿ ಉಪಸ್ಥಿತರಿಲ್ಲದಿರುವುದಕ್ಕೆ ನನಗೆ ವಿಷಾದವಾಗುತ್ತಿದೆ. ಅವರು ಇಲ್ಲಿ ಇರಬೇಕಾಗಿತ್ತು ಎಂದು ನಾನು ಆಶಿಸುತ್ತೇನೆ. ಮಾನ್ಯರೆ, ಬಂಗಾಳದಲ್ಲಿ ೨೭ ಜನ ಮುಸ್ಲಿಮೇತರರು ಮತ್ತು ೩೩ ಜನ ಮುಸ್ಲಿಮರು ಇದ್ದಾರೆ. ಇನ್ನು ವಿಭಾಗಗಳನ್ನು ನೋಡಿದರೆ ೩೬ ಜನ ಮುಸ್ಲಿಮರು ಮತ್ತು

೩೪ ಜನ ಮುಸ್ಲಿಮೇತರರು ಇರುತ್ತಾರೆ. ಆ ವಿಭಾಗದಲ್ಲಿ ಬಹುಮತವನ್ನು ಆಧರಿಸಿ ಮತದಾನ ನಡೆದರೆ, ಚಕ್ರವರ್ತಿಯ ಸರ್ಕಾರದ ವ್ಯಾಖ್ಯಾನದಂತೆ ಸರಳ ಬಹುಮತದಿಂದ ನಮ್ಮ ಸಂವಿಧಾನವು, ನಮ್ಮ ಅಸ್ಸಾಮ್ ಸಂವಿಧಾನವು ಬಂಗಾಳದ ಬಹು ಸಂಖ್ಯಾತರಿಂದ ಅಂದರೆ ಮುಸ್ಲಿಮ್ ಲೀಗ್‌ನಿಂದ ರಚಿತವಾಗುತ್ತದೆ. ಮಾನ್ಯರೆ, ಇದಕ್ಕಿಂತ ಅನ್ಯಾಯವನ್ನು ಬೇರೆ ಯಾವುದರಲ್ಲೂ ನಾವು ಕಲ್ಪಿಸಿಕೊಳ್ಳಲಾರೆವು. (ಹರ್ಷೋದ್ಗಾರಗಳು). ಈ ಸಂವಿಧಾನ ರಚನಾಸಭೆಯ ಎಲ್ಲ ಸದಸ್ಯರೂ ಪರಿಗಣಿಸಬೇಕಾದ ವಿಷಯ ಇದು. ಸಂಪುಟ ನಿಯೋಗವು ತನ್ನ ಹೇಳಿಕೆಯನ್ನು ನೀಡಿದಾಗ, ಅಸ್ಸಾಮ್‌ನಲ್ಲಿರುವ ನಾವು ಏನು ಯೋಚಿಸಿದೆವೆಂದರೆ ಅಂತಹ ವ್ಯಾಖ್ಯಾನವನ್ನು ಮುಂದೆ ನೀಡಲಾಗುತ್ತದೆ, ಆದರೆ ಮುಸ್ಲಿಮೇತರ ಪ್ರಾಂತ್ಯವಾದ ಅಸ್ಸಾಮನ್ನು ಮುಸ್ಲಿಮ್ ಪ್ರಾಂತ್ಯದಲ್ಲಿ ಇರಿಸುವಷ್ಟು ಸಂಪುಟ ನಿಯೋಗವು ವಿಚಾರಹೀನವಾಗಿರಲಾರದು ಎಂದು ಮತ್ತು ನಮ್ಮ ಸಂವಿಧಾನವನ್ನು ವಿಭಾಗದ ಬಹುಸಂಖ್ಯಾತರು ರಚಿಸುತ್ತಾರೆ ಎಂದು ಅಂದುಕೊಂಡಿದ್ದೆವು. ಅದು ಹೀಗಾಗುತ್ತದೆ ಎಂದು ನಾವು ಎಂದೂ ಯೋಚಿಸಿರಲಿಲ್ಲ. ಏಕೆಂದರೆ ಅಸ್ಸಾಮನ್ನು ಅಂತಹ ಪರಿಸ್ಥಿತಿಯಲ್ಲಿ ಇರಿಸುವುದು ಅಸ್ಸಾಮಿನ ಜನರಿಗೆ ಮಾಡುವ ಅನ್ಯಾಯ ಎಂದು ನಾವು ಪರಿಗಣಿಸಿದ್ದೆವು. ೧೯೪೬ರ ಜೂನ್ ತಿಂಗಳಿನಲ್ಲಿ ನಾವು ಷಿಲ್ಲಾಂಗ್‌ನಲ್ಲಿ ಒಂದು ಸಾರ್ವಜನಿಕ ಸಭೆಯನ್ನು ನಡೆಸಿದೆವು. ನಾನು ಆ ಸಭೆಯ ಅಧ್ಯಕ್ಷತೆಯನ್ನು ವಹಿಸಿದ್ದೆ. ಆ ಸಭೆಯಲ್ಲಿ ನಾವು ಸಂಪುಟ ನಿಯೋಗದ ಘೋಷಣೆಯನ್ನು ಕುರಿತು ಚರ್ಚಿಸಿದೆವು. ಆ ಸಭೆಯಲ್ಲಿ ನಾನು ಹೀಗೆ ಹೇಳಿದೆ :

"ಸಂಪುಟ ನಿಯೋಗದ ಘೋಷಣೆಯ ಕಂಡಿಕೆ ೧೫(೫) ರಿಂದ ನಾನು ಅರ್ಥಮಾಡಿಕೊಂಡಿದ್ದೇನೆಂದರೆ ಸಂಪುಟ ನಿಯೋಗವು ಸೂಚಿಸಿದಂತೆ ಪ್ರತಿ ಪ್ರಾಂತ್ಯವೂ ಒಂದು ಗುಂಪಾಗಿ ರೂಪುಗೊಳ್ಳುವ ಅಥವಾ ರೂಪುಗೊಳ್ಳದಿರುವ ಸ್ವಾತಂತ್ರ್ಯವನ್ನು ಹೊಂದಿದೆ. ಎರಡನೆಯದಾಗಿ, ಸ್ವತಂತ್ರ ಪ್ರಾಂತ್ಯಗಳಾಗಿ ಗುಂಪುಗೂಡುವುದು, ಗುಂಪು ವ್ಯವಹರಿಸಬೇಕಾದ ಯಾವ ಸಾಮಾನ್ಯ ವಿಷಯಗಳನ್ನು ಚರ್ಚೆಗೆ ಎತ್ತಿಕೊಳ್ಳಬಹುದು ಎನ್ನುವುದನ್ನು ನಿರ್ಧರಿಸುವುದಕ್ಕಾಗಿ. ಮೂರನೆಯದಾಗಿ, ಒಂದು ಪ್ರಾಂತ್ಯವು ತನ್ನ ಮೇಲೆ ಅತಿ ಮುಖ್ಯವಾಗಿ ಪರಿಣಾಮ ಬೀರುವಂತಹ ವಿಷಯಗಳನ್ನು ಒಪ್ಪಿಕೊಳ್ಳದಿದ್ದರೆ ಘೋಷಣೆಯ ಕಂಡಿಕೆ ೧೯(೫) ಶಿಫಾರಸು ಮಾಡಿರುವ ಗುಂಪಿನ ಸಂಯೋಜನೆ ಇರುವುದಿಲ್ಲ. ನಾಲ್ಕನೆಯದಾಗಿ, ಚರ್ಚೆಯಲ್ಲಿ ಗುಂಪಿನೊಳಗೆ ಒಂದು ಪ್ರಶ್ನೆಯನ್ನು ಇತ್ಯರ್ಥಗೊಳಿಸುವುದು ಅಸಾಧ್ಯ ಎಂದು ಕಂಡುಬಂದಾಗ ಇನ್ನೊಂದು ಪ್ರಾಂತ್ಯದ ಸದಸ್ಯರ ಬಹುಮತ ಮತದಾನದಿಂದ ಅದರ ಮೇಲೆ ಒತ್ತಡ ಹೇರಲಾಗುವುದಿಲ್ಲ. ಐದನೆಯದಾಗಿ, ಅಂತಿಮವಾಗಿ ನಿರ್ಣಯ ತೆಗೆದುಕೊಳ್ಳುವ ಅಧಿಕಾರವಿರುವ ಅಖಂಡ ಸಂವಿಧಾನ ರಚನಾಸಭೆಯ ಮುಂದೆ ಇಡೀ ಪ್ರಶ್ನೆಯನ್ನು ತರಲಾಗುವುದು."

ಸಂಪುಟ ನಿಯೋಗದ ಹೇಳಿಕೆಯಿಂದ ನಾವು ಅರ್ಥಮಾಡಿಕೊಂಡದ್ದು ಇದೇ ಮಾನ್ಯರೆ. ಆ ಸಮಯದಲ್ಲಿ ಕಾಂಗ್ರೆಸ್‌ನ ಅಭಿಪ್ರಾಯವೂ ಅದೇ ಆಗಿತ್ತು. ಚಕ್ರವರ್ತಿಯ ಸರ್ಕಾರದ ವ್ಯಾಖ್ಯಾನವನ್ನು ಇಲ್ಲಿಯವರೆಗೆ ಕಾಂಗ್ರೆಸ್ ಒಪ್ಪಿಕೊಂಡಿಲ್ಲ ಎಂದು ಆ ಹೊತ್ತು ಸರ್ದಾರ್ ವಲ್ಲಭಭಾಯಿ ಪಟೇಲರು ಮಾಡಿದ ಘೋಷಣೆಯಿಂದ ನನಗೆ ಬಹಳ ಸಂತೋಷವಾಗಿತ್ತು. ಮಾನ್ಯರೆ, ನಮ್ಮ ನಿಲುವು ಇನ್ನೂ ಅದೇ ಆಗಿದೆ. ಬ್ರಿಟಿಷ್ ಸಂಪುಟ ನಿಯೋಗವು ಭಾರತದಲ್ಲಿದ್ದಾಗ ಯಾವ ಮನೋಧರ್ಮವನ್ನು ಹೊಂದಿತ್ತೋ ಅದನ್ನು ಬದಲಾಯಿಸಿಕೊಂಡಿದೆ ಎಂದು ನನಗೆ ತೋರುತ್ತದೆ. ಅವರು ಭಾರತದಲ್ಲಿ ಇದ್ದಾಗ ಕೆಲವು ಸನ್ನಿವೇಶಗಳಲ್ಲಿ ಇದ್ದರು ಮತ್ತು ಆ ಸಮಯದಲ್ಲಿ ಈ ದೇಶದಲ್ಲಿದ್ದ ಅಭಿಪ್ರಾಯದಿಂದ ಪ್ರಭಾವಿತರಾಗಿದ್ದರು. ಅವರು ಇಂಗ್ಲೆಂಡಿಗೆ ಮರಳಿ ಹೋದಾಗ ಬೇರೆಯೇ ಸನ್ನಿವೇಶದಲ್ಲಿ ಅವರು ಇರುವಂತಾಯಿತು. ಅಲ್ಲಿನ ಕನ್ಸರ್ವೇಟಿವ್ ಪಕ್ಷದ ಪ್ರಭಾವಕ್ಕೆ ಒಳಗಾದರು. ಶ್ರೀ ಜಿನ್ನಾ ಅವರ ಬಲವನ್ನು ಅವರ ಮನಸ್ಸಿನ ಮೇಲೆ ಹೇರಲಾಯಿತು. ಅವರು ಸಂಪೂರ್ಣವಾಗಿ ತಮ್ಮ ಅಭಿಪ್ರಾಯವನ್ನು ಬದಲಾಯಿಸಿಕೊಂಡರು. ನನಗೆ ಹಾಗೆ ತೋರುತ್ತದೆ. ಸಂಪುಟ ನಿಯೋಗವು

ಭಾರತದಲ್ಲಿ ಇದ್ದಾಗ ವಾಸ್ತವವಾಗಿ ಅವರ ಮನಸ್ಸಿನಲ್ಲಿ ಈ ವಿಚಾರವಿತ್ತೇ ಎಂದು ನಾನು ಲಾರ್ಡ್ ಪಿಥಿಕ್
ಲಾರೆನ್ಸ್ ಅವರಿಂದ ತಿಳಿಯಲು ಬಯಸುತ್ತೇನೆ. ವಿಭಾಗಗಳಲ್ಲಿನ ಮತವು ಸರಳ ಬಹುಮತದ ಆಯ್ಕೆಯಾಗಿರುತ್ತದೆ
ಎಂದು ಅವರ ಯಾವುದೇ ಘೋಷಣೆಗಳಲ್ಲಾಗಲಿ, ಅವರ ಯಾವುದೇ ಬರವಣಿಗೆಯಲ್ಲಾಗಲಿ ಇಲ್ಲ.
ಮುಸ್ಲಿಮೇತರವಾದ ಒಂದು ಪ್ರಾಂತ್ಯವನ್ನು ಒಂದು ಮುಸ್ಲಿಮ್ ಪ್ರಾಂತ್ಯದ ಅಡಿಯಲ್ಲಿ ಬರುವಂತೆ ಬಲಾತ್ಕಾರವಾಗಿ
ತಳ್ಳುವುದು ಸಂಪೂರ್ಣವಾಗಿ ತಪ್ಪು. ಚಕ್ರವರ್ತಿಯ ಸರ್ಕಾರವು ನಮ್ಮ ಪ್ರಾಂತ್ಯಕ್ಕೆ ಈ ಮಹಾನ್ ಅನ್ಯಾಯವನ್ನು
ಮಾಡುವಂತೆ ಶ್ರೀ ಜಿನ್ನಾ ಅವರು ಒತ್ತಾಯ ಮಾಡಿದ್ದಾರೆ. ಮಾನ್ಯರೆ, ಈ ಗೌರವಾನ್ವಿತ ಸಭೆಯ ಅನುಕಂಪ
ಮತ್ತು ಬೆಂಬಲ ನಮಗೆ ಬೇಕು ಎಂದು ನಾವು ಭಾವಿಸುತ್ತೇವೆ. ನಮ್ಮ ಪ್ರಾಂತ್ಯವನ್ನು ಅಂತಹ ಶೋಚನೀಯ
ಪರಿಸ್ಥಿತಿಗೆ ತಳ್ಳಬಾರದೆಂದು ಕೋರುತ್ತೇವೆ. ಶ್ರೀ ಜಿನ್ನಾ ಮತ್ತು ಅವರ ಲೀಗ್ ಸದಸ್ಯರು ಇಲ್ಲಿರಬೇಕೆಂದು
ನಾನು ಬಯಸುತ್ತೇನೆ. ಅವರು ಇಲ್ಲಿಗೆ ಬಂದು ಭಾರತದ ಸಂವಿಧಾನದ ರಚನೆಯಲ್ಲಿ ಪಾಲ್ಗೊಳ್ಳಬೇಕೆಂದು
ನಾನು ಬಯಸುತ್ತೇನೆ. ಅವರು ಮತ್ತು ಎಲ್ಲ ಇತರರು ನಿಷ್ಪಕ್ಷಪಾತವಾಗಿರಬೇಕೆಂದು ನಾನು ನಿರೀಕ್ಷಿಸುತ್ತೇನೆ.
ಅವರು ಸಜ್ಜನರಂತೆ ವರ್ತಿಸಬೇಕು ಮತ್ತು ನಿಷ್ಪಕ್ಷಪಾತವಾಗಿರಬೇಕು ಎನ್ನುವುದನ್ನು ಹೊರತುಪಡಿಸಿ ಬೇರೇನನ್ನೂ
ನಾನು ಅಪೇಕ್ಷಿಸುವುದಿಲ್ಲ. ಚಕ್ರವರ್ತಿಯ ಸರ್ಕಾರವು ಇತ್ತೀಚೆಗೆ ಮಾಡಿದ ವ್ಯಾಖ್ಯಾನದಿಂದ ನಾವು ಈಗ
ಇರುವಂತಹ ಸ್ಥಿತಿಗೆ ಬಲಾತ್ಕಾರದಿಂದ ತಳ್ಳಿರುವುದು ಅನ್ಯಾಯ, ಇದು ಎಲ್ಲರಿಗೂ ಗೊತ್ತು. ನಾವು ಒಂದು
ಸ್ವಯಮಾಧಿಕಾರದ ಪ್ರಾಂತ್ಯವಾಗಿದ್ದೇವೆ ಮತ್ತು ಒಂದು ಮುಸ್ಲಿಮೇತರ ಪ್ರಾಂತ್ಯವಾಗಿದ್ದೇವೆ. ಮತದಾನದಲ್ಲಿ
ಅಸ್ಸಾಮ್ ಪ್ರಾಂತ್ಯವನ್ನು ಮೀರಿಸುವಂತಹ ಮತ್ತು ಕೃತಕವಾಗಿ ಸೃಷ್ಟಿಸಲಾದ ಬಹುಮತದ ಅಪೇಕ್ಷೆಗೆ
ಅನುಗುಣವಾಗಿ ಸಂವಿಧಾನವನ್ನು ರಚಿಸುವಂತಹ ಒಂದು ವಿಭಾಗಕ್ಕೆ ಹೋಗುವಂತೆ ನಮ್ಮನ್ನೇಕೆ
ಬಲಾತ್ಕರಿಸಬೇಕು? ಈಗ, ಮಾನ್ಯರೆ, ಇದು ಈ ಕೂಡಲೇ ಬ್ರಿಟಿಷ್ ಸರ್ಕಾರ ಮತ್ತು ಈ ಸಂವಿಧಾನ ರಚನಾ
ಸಭೆಯ ನಡುವೆ ಒಂದು ಸಂಘರ್ಷವನ್ನು ತರುತ್ತದೆ ಎಂದು ಹೇಳಬಹುದು. ಇದು ಹೀಗೆ ಆಗಬೇಕಾದ
ಅಗತ್ಯವಿಲ್ಲ. ಮೇ ೧೬ರ ಘೋಷಣೆಯ ನಾಲ್ಕು ಗೋಡೆಗಳಿಂದ ದಿಕ್ಚ್ಯುತಿಗೊಳ್ಳುವುದು ಮತ್ತು ಬೇರೆಯದೇ
ಆದ ಒಂದು ವ್ಯಾಖ್ಯಾನವನ್ನು ಕೊಡುವುದು ಕ್ರಾಂತಿಕಾರಕವಾಗುತ್ತದೆ ಎಂದು ಯಾರೋ ಒಬ್ಬರು ಹೇಳಿದರು.
ಈ ಸಂವಿಧಾನ ರಚನಾಸಭೆಯು ಆ ನಿಲುವನ್ನು ಅಂಗೀಕರಿಸಿಬೇಕಾದ ಅಗತ್ಯವೇ ಇಲ್ಲ. ನಾವು
ಸ್ನೇಹಪೂರ್ಣವಾದ ನಿಲುವನ್ನು ಅಳವಡಿಸಿಕೊಳ್ಳಬಹುದೆಂದು ನಾನು ನಂಬಿದ್ದೇನೆ. ನಾವು ಬ್ರಿಟಿಷ್ ಸರ್ಕಾರಕ್ಕೆ
ಹೀಗೆ ಹೇಳೋಣ : "ಹಿಂದೂಗಳು ಮತ್ತು ಮುಸ್ಲಿಮರ ನಡುವೆ ಒಂದು ರಾಜಿಯನ್ನು ಏರ್ಪಡಿಸಲು ನೀವು
ಮಾಡಿದ ಉತ್ತಮ ಪ್ರಯತ್ನಕ್ಕೆ ನಾವು ನಿಮಗೆ ಕೃತಜ್ಞತೆ ಸಲ್ಲಿಸುತ್ತೇವೆ. ನೀವು ನಮಗೆ ಉತ್ತಮ ಸಲಹೆ ಮತ್ತು
ಉತ್ತಮ ಶಿಫಾರಸುಗಳನ್ನು ನೀಡುತ್ತಿದ್ದೀರಿ. ನೀವು ಶಾಂತಿಯ ನಿರ್ಮಾತರಾಗಿ ವರ್ತಿಸಿದ್ದೀರಿ. ನಾವು ಸಾಧ್ಯವಾದ
ಮಟ್ಟಿಗೂ ನಿಮ್ಮ ಶಿಫಾರಸುಗಳನ್ನು ಅನುಷ್ಠಾನಗೊಳಿಸುತ್ತೇವೆ. ಆದರೆ ನಾವು ಜವಾಬ್ದಾರಿಯುತ ವ್ಯಕ್ತಿಗಳಾಗಿ,
ನಿಮ್ಮ ಯಾವುದೇ ಶಿಫಾರಸುಗಳನ್ನು ಅಕ್ಷರಶಃ ಅನುಷ್ಠಾನಕ್ಕೆ ತರುವುದು ಕಾರ್ಯಸಾಧ್ಯವಲ್ಲ ಮತ್ತು
ನ್ಯಾಯಸಮ್ಮತವಲ್ಲ ಎಂದು ಯಾವಾಗ ನಮಗೆ ತೋರುತ್ತದೆಯೋ ಆಗ ಅವುಗಳನ್ನು ಬಿಟ್ಟು ಬೇರೆ ಕಡೆಗೆ
ತಿರುಗಲು ಸ್ವತಂತ್ರರಾಗಿದ್ದೇವೆ. ಎಲ್ಲ ಅಲ್ಪಸಂಖ್ಯಾತರಿಗೂ ನ್ಯಾಯ ಸಲ್ಲಿಸುವ ಒಂದು ಸಂವಿಧಾನವನ್ನು
ನಾವು ರಚಿಸುತ್ತೇವೆ ಮತ್ತು ನಾವು ಯಾವ ಸಮುದಾಯವನ್ನೂ ನಿರ್ಲಕ್ಷಿಸುವುದಿಲ್ಲ. ಮುಸ್ಲಿಮ್ ಲೀಗ್‌ನ
ಸದಸ್ಯರು ಸಹಕರಿಸಿದರೆ ನಾವು ಅವರನ್ನು ಹೃತ್ಪೂರ್ವಕವಾಗಿ ಸ್ವಾಗತಿಸೋಣ. ಈ ಸಂವಿಧಾನದ ರಚನೆಯನ್ನು
ನಾವು ಪೂರ್ಣಗೊಳಿಸಿದ ಮೇಲೆ, ಈ ಸಂವಿಧಾನ ರಚನಾಸಭೆಯು ಎಂತಹ ಸಂವಿಧಾನವನ್ನು ರಚಿಸಿದೆ
ಎಂದು ನೋಡುವ ಅವಕಾಶವನ್ನು ಇಡೀ ಭಾರತವು ಪಡೆಯುತ್ತದೆ. ಬ್ರಿಟಿಷ್ ಸಜ್ಜನರೆ, ಭಾರತದಲ್ಲಿ
ಕ್ರಾಂತಿಕಾರಿ ಚಟುವಟಿಕೆಗಳನ್ನು ಪ್ರೇರಿಸುವಂತಹ ಭಾಷಣಗಳನ್ನು ನಿಮ್ಮ ಸಂಸತ್ತಿನಲ್ಲಿ ಮಾಡಬೇಡಿ ಎಂದು
ನಿಮ್ಮಲ್ಲಿ ಪ್ರಾರ್ಥಿಸುತ್ತೇವೆ. ನಾವು ನಮ್ಮ ಕೆಲಸವನ್ನು ಮುಗಿಸುವವರೆಗೆ ನಮ್ಮೊಡನೆ ದಯವಿಟ್ಟು ಶಾಂತಿಯಿಂದ

ಸಹಕರಿಸಿ, ಅನಂತರ ನಮ್ಮ ಕೆಲಸವನ್ನು ತೀರ್ಮಾನಿಸಿ." ಆಗ ಮಾತ್ರ ಈ ಸಭೆಯು ಯಾವ ಬಗೆಯ ಒಂದು ಸಂವಿಧಾನವನ್ನು ರಚಿಸಿದೆ ಎಂದು ನೋಡುವ ಅವಕಾಶ ಬ್ರಿಟಿಷ್ ಸರ್ಕಾರಕ್ಕೆ ದೊರೆಯುತ್ತದೆ. ಅದಕ್ಕೆ ಮೊದಲು ಅಲ್ಲ, ಆಗ ಮಾತ್ರ ಈ ಸಂವಿಧಾನ ರಚನಾಸಭೆಯು ಒಂದು ನಿರ್ದಿಷ್ಟವಾದ ಸಮುದಾಯಕ್ಕೆ ಅಥವಾ ಮುಸ್ಲಿಮರಿಗೆ ನ್ಯಾಯವನ್ನು ಸಲ್ಲಿಸಿದೆಯೇ ಅಥವಾ ಅನ್ಯಾಯ ಮಾಡಿದೆಯೇ ಎಂದು ಅವರು ಹೇಳಬಲ್ಲರು. ಮುಸ್ಲಿಮ್ ಸಮುದಾಯದವರು ಇಲ್ಲಿಗೆ ಬಂದು ಭಾರತದ ಸಂವಿಧಾನದ ರಚನೆಯಲ್ಲಿ ಸಹಕರಿಸುತ್ತಾರೆ ಎಂದು ನಾವು ನಿರೀಕ್ಷಿಸುತ್ತೇವೆ. ಅವರ ಉಪಸ್ಥಿತಿಯನ್ನು ಇಲ್ಲಿ ಬಯಸುವವರಲ್ಲಿ ನನಗಿಂತ ಹೆಚ್ಚು ಬೇರೆ ಯಾರೂ ಇರಲಾರರು. ಮುಸ್ಲಿಮ್ ಲೀಗ್ ಸದಸ್ಯರಲ್ಲಿ ನನ್ನ ಅನೇಕ ಅತ್ಯುತ್ತಮ ಗೆಳೆಯರು ಇದ್ದಾರೆ. ಅವರು ಇಲ್ಲಿಗೆ ಬಂದು ಈ ಸಭೆಯಲ್ಲಿ ಸಹಕರಿಸುವುದನ್ನು ನೋಡಲು ನಾನು ಬಯಸುತ್ತೇನೆ.

ಈಗ ನಾನು ಈ ನಿರ್ಣಯದ ಇನ್ನೊಂದು ಅಂಶದ ಕಡೆಗೆ ತಿರುಗುತ್ತೇನೆ. ಅದೆಂದರೆ ಕಂಡಿಕೆ ೫. ಅದಕ್ಕೆ ಮೊದಲು ನಾನು ಇನ್ನೊಂದು ಸಂಗತಿಯನ್ನು ತೋರಿಸಬೇಕು. ಸ್ವಯಮಾಧಿಕಾರದ ಪ್ರಾಂತ್ಯಗಳಲ್ಲಿ ಸ್ವಯಮಾಡಳಿತ ನಡೆಸುತ್ತಿರುವ ಘಟಕಗಳಿರುತ್ತವೆ, ಮತ್ತು ಅವು ಒಂದು ಪ್ರಾಂತ್ಯದೊಡನೆ ಸಂಪರ್ಕ ಹೊಂದಿರುತ್ತವೆ. ಅಸ್ಸಾಮ್‌ನಂತಹ ಒಂದು ಪ್ರಾಂತ್ಯದಲ್ಲಿ ಇದು ಅಗತ್ಯ ಎಂದು ಭಾವಿಸುತ್ತೇನೆ.

ಈಗ ಕಂಡಿಕೆ ೫ಕ್ಕೆ ತಿರುಗೋಣ. ಈ ಕಂಡಿಕೆಯಲ್ಲಿ ನ್ಯಾಯ ಮತ್ತು ಸ್ವಾತಂತ್ರ್ಯ, ಸಾಮಾಜಿಕ ನ್ಯಾಯ, ಆರ್ಥಿಕ ಮತ್ತು ರಾಜಕೀಯ ಕ್ಷೇತ್ರಗಳಲ್ಲಿ ನ್ಯಾಯಗಳಿಗೆ ಸಂಬಂಧಿಸಿದಂತೆ ಉಪಬಂಧಗಳಿವೆ. ಇವನ್ನು ಎಲ್ಲರಿಗೂ ಭರವಸೆ ಕೊಡಲಾಗಿದೆ. ರಾಜಕೀಯ ನ್ಯಾಯವೆಂದರೆ, ಪ್ರತಿಯೊಂದು ಸಮುದಾಯಕ್ಕೂ ಶಾಸನಸಭೆಗಳಲ್ಲಿ ಮತ್ತು ದೇಶದ ಆಡಳಿತದಲ್ಲಿ ಪ್ರಾತಿನಿಧ್ಯ ದೊರೆಯುತ್ತದೆ ಎಂಬ ಅರ್ಥ ಎನ್ನುವುದರಲ್ಲಿ ಯಾವ ಅನುಮಾನವೂ ಇಲ್ಲ. ಆದ್ದರಿಂದ ಈ ಸಂವಿಧಾನ ರಚನಾಸಭೆಯು ತಮ್ಮ ಹಿತಾಸಕ್ತಿಗಳನ್ನು ಗಮನಿಸುವುದಿಲ್ಲ ಎಂಬ ಭೀತಿ ಯಾವ ಸಮುದಾಯದ ಮನಸ್ಸಿನಲ್ಲೂ ಇರಬೇಕಾದ ಅಗತ್ಯವಿಲ್ಲ.

ಅನಂತರ ಅಲ್ಲಿ ಆಲೋಚನೆ, ಅಭಿವ್ಯಕ್ತಿ, ನಂಬಿಕೆ, ಶ್ರದ್ಧೆ ಮತ್ತು ಪೂಜಿಸುವ ಸ್ವಾತಂತ್ರ್ಯವನ್ನು ಕುರಿತು ಪ್ರಸ್ತಾವವಿದೆ. ಕೆಲವು ಪಕ್ಷಗಳು ಈ ದೇಶದಲ್ಲಿ ಪ್ರಚಾರ ಮಾಡಿರುವುದೇನೆಂದರೆ, ಭಾರತದಲ್ಲಿ ಸ್ವರಾಜ್ಯ ಬಂದಾಗ ಕೆಲವು ಧರ್ಮಶ್ರದ್ಧೆಗಳಿಗೆ ತಮ್ಮ ಧರ್ಮಶ್ರದ್ಧೆಯನ್ನು ವೃದ್ಧಿಮಾಡಲು ಅವಕಾಶ ಕೊಡಲಾಗುವುದಿಲ್ಲ. ಇದು ನಿಜವಾಗಿಯೂ ಮಿಥ್ಯಾ ಪ್ರಚಾರ. ಪರಿಸ್ಥಿತಿಯು ಹೀಗಿರುವುದಿಲ್ಲ ಎಂದು ಈ ನಿರ್ಣಯವು ಘೋಷಿಸಿದೆ. ಭಾರತದ ಸಂವಿಧಾನದಲ್ಲಿ ಎಲ್ಲ ಧರ್ಮಶ್ರದ್ಧೆಗಳ ಸ್ವಾತಂತ್ರ್ಯಕ್ಕೆ ಮತ್ತು ಅವರ ಅಪೇಕ್ಷೆಗೆ ತಕ್ಕಂತೆ ಅವನ್ನು ವೃದ್ಧಿಮಾಡಿಕೊಳ್ಳಲು ಅವಕಾಶವಿರುತ್ತದೆ. ಕಾನೂನು ಮತ್ತು ಸಾರ್ವಜನಿಕ ನೈತಿಕತೆಗೆ ಬದ್ಧವಾಗಿ ಒಂದು ಸಮಾನ ಉದ್ದೇಶಕ್ಕಾಗಿ ಜತೆಗೂಡುವುದು ಮತ್ತು ಕಾರ್ಯಪ್ರವೃತ್ತರಾಗುವುದನ್ನು ಕುರಿತು ಈ ಕಂಡಿಕೆಯು ಹೇಳುತ್ತಿರುವುದಕ್ಕೆ ನನಗೆ ವಿಶೇಷವಾದ ಸಂತೋಷವಾಗಿದೆ. ಸರ್ಕಾರವು ಸಾರ್ವಜನಿಕ ನೈತಿಕತೆಯನ್ನು ಸಂರಕ್ಷಿಸುವ ಅಗತ್ಯವಿದೆ ಮತ್ತು ಧರ್ಮಶೀಲತೆಯನ್ನು ಔನ್ನತ್ಯಕ್ಕೆ ಏರಿಸುವ ಅಗತ್ಯವಿದೆ. "ಧರ್ಮಶೀಲತೆಯು ಒಂದು ರಾಷ್ಟ್ರವನ್ನು ಔನ್ನತ್ಯಕ್ಕೆ ಏರಿಸುತ್ತದೆ ಮತ್ತು ಪಾಪವು ಯಾವುದೇ ಜನಾಂಗಕ್ಕೆ ನಿಂದನೀಯವಾಗಿದೆ."

ನಾನು ಈ ನಿರ್ಣಯದ ಇತರ ಅಂಶಗಳನ್ನು ಕುರಿತು ಮಾತನಾಡಲು ಬಯಸುತ್ತೇನೆ. ಆದರೆ ಅವುಗಳನ್ನು ಕುರಿತು ನಾನು ವಿಸ್ತಾರವಾಗಿ ಮಾತನಾಡುವ ಅಗತ್ಯವಿಲ್ಲವೆಂದು ಭಾವಿಸುತ್ತೇನೆ. ನಮ್ಮ ಮುಂದೆ ಕಷ್ಟಗಳು ಮತ್ತು ಅಡಚಣೆಗಳು ಇವೆ. ಈ ಸ್ವರೂಪದ ಕಷ್ಟಗಳಿಗೆ ಭಾರತವು ವಿನಾಯಿತಿಯೇನಲ್ಲ. ಕೆನಡಾ, ಆಸ್ಟ್ರೇಲಿಯ ಮತ್ತು ಸಂಯುಕ್ತ ಸಂಸ್ಥಾನಗಳು ಕೂಡ ತಮ್ಮ ಸಂವಿಧಾನಗಳನ್ನು ರಚಿಸುವ ಕಾರ್ಯದಲ್ಲಿ ಮಗ್ನವಾಗಿದ್ದಾಗ ಈ ಬಗೆಯ ಕಷ್ಟಗಳು ಎದುರಾಗಿದ್ದವು. ಆ ದೇಶಗಳ ಕೆಲವು ಭಾಗಗಳು ಪ್ರಾರಂಭದಲ್ಲಿ ಸಂವಿಧಾನದ ರಚನೆಗೆ ಬರಲಿಲ್ಲ. ಆದರೆ ಆಮೇಲೆ ಬಂದವು. ಅದೇ ಸಂಗತಿಯು ಇಲ್ಲಿ ಭಾರತದಲ್ಲಿಯೂ ಪುನರಾವರ್ತನೆಯಾಗಬಹುದು. ನಾವು ಸಂವಿಧಾನದ ರಚನೆಯನ್ನು ಮಾಡುತ್ತಾ ಹೋಗಬೇಕು. ಅನಂತರ

ಅದನ್ನು ಈ ಜಗತ್ತಿನ ಮುಂದೆ ಮತ್ತು ಈ ದೇಶದ ಮುಂದೆ ಮಂಡಿಸಿದಾಗ, ಆಗ ಮಾತ್ರ ಇಂಗ್ಲೆಂಡಿನ ಜನರು ಅಥವಾ ಬ್ರಿಟಿಷ್ ಸರ್ಕಾರ ಅವರ ಘೋಷಣೆಗೆ ಅನುಗುಣವಾದ ಸಂವಿಧಾನ ಅದು ಅಲ್ಲ ಎಂದು ಹೇಳಲು ಸೂಕ್ತ ಸಮಯವಾಗಿರುತ್ತದೆ. ಅದು ಆಗುವ ಮೊದಲು, ಈ ಸಂವಿಧಾನ ರಚನಾಸಭೆಯು ಏನು ಮಾಡುತ್ತದೆ ಎಂದು ಪೂರ್ವ ತೀರ್ಮಾನ ಕೊಡಲು ಮತ್ತು ತನ್ಮೂಲಕ ಅದರ ಕೆಲಸಕ್ಕೆ ಅಡಚಣೆಯೊಡ್ಡಲು ಪ್ರಯತ್ನಿಸಬಾರದು.

**ಮಾನ್ಯ ಅಧ್ಯಕ್ಷರು :** ಗೌರವಾನ್ವಿತ ಸದಸ್ಯರು ತಮ್ಮ ಸಮಯದ ಮಿತಿಯನ್ನು ಮೀರಿದ್ದಾರೆ.

**ಗೌರವಾನ್ವಿತ ರೆವರೆಂಡ್ ಜೆ.ಜೆ.ಎಮ್. ನಿಕೊಲಸ್ ರಾಯ್ :** ನಾನು ಇನ್ನು ಒಂದೇ ಅಂಶವನ್ನು ಕುರಿತು ಮಾತನಾಡಲು ಬಯಸುತ್ತೇನೆ. ಹೌಸ್ ಆಫ್ ಲಾರ್ಡ್ಸ್‌ನಲ್ಲಿ ವೈಕೌಂಟ್ ಸೈಮನ್ ಮಾಡಿದ ಭಾಷಣದಿಂದ ಅದು ನನ್ನ ಮೇಲೆ ಪ್ರಭಾವ ಬೀರಿದೆ. ವೈಕೌಂಟ್ ಸೈಮನ್ ಹೀಗೆ ಹೇಳಿದ್ದಾರೆ. "ಈ ಸಂವಿಧಾನ ರಚನಾಸಭೆಯು, ಭಾರತಕ್ಕೆ ಒಂದು ಸಂವಿಧಾನವನ್ನು ರಚಿಸುವ ಕಾರ್ಯವನ್ನು ಕೈಗೊಂಡರೆ, ಅದು 'ಹಿಂದೂ ರಾಜ್' ಒಡನೆ ಭಾರತಕ್ಕೆ 'ಭೀತಿ'ಯನ್ನೊಡ್ಡುತ್ತದೆ." ಇಂದು ಬೆಳಗ್ಗೆ ಒಂದು ಸುದ್ದಿಪತ್ರಿಕೆಯಲ್ಲಿ ಈ ಮಾತುಗಳನ್ನು ನೋಡಿದಾಗ ನನಗೆ ಬಹಳ ಆಶ್ಚರ್ಯವಾಯಿತು. ನಾನು ಪಾಶ್ಚಾತ್ಯ ದೇಶಗಳಲ್ಲಿದ್ದಾಗ – ಇಂಗ್ಲೆಂಡಿನಲ್ಲಿ ಮತ್ತು ಅಮೆರಿಕದಲ್ಲಿ ಕೂಡ – ಆ ದೇಶಗಳಲ್ಲಿನ ಕೆಲವು ಜನರು, ಹಿಂದೂ ಎಂದರೆ ತನ್ನ ಜಾತಿಪದ್ಧತಿಯಲ್ಲಿ ಆಳವಾಗಿ ಮುಳುಗಿರುವವನು ಮತ್ತು ಗೋವನ್ನು ಪೂಜೆ ಮಾಡುವವನು ಎಂಬ ಕಲ್ಪನೆ ಇಟ್ಟುಕೊಂಡಿರುವುದನ್ನು ನೋಡಿ ಗಾಢವಾದ ಪರಿಣಾಮಕ್ಕೊಳಗಾದೆ. 'ಹಿಂದೂರಾಜ್' ಎಂದು ಉಲ್ಲೇಖಿಸುವಾಗ ವೈಕೌಂಟ್ ಸೈಮನ್‌ಗೆ ಈ ಕಲ್ಪನೆ ಇದ್ದಿದ್ದರೆ, ಅಂದರೆ ಭಾರತದ ಜನಗಳು ಜಾತಿಪದ್ಧತಿಯನ್ನು ಶಾಶ್ವತಗೊಳಿಸಲು ಮತ್ತು ಗೋವುಗಳನ್ನು ಪೂಜಿಸಲು ಬಲಾತ್ಕಾರಕ್ಕೆ ಈಡಾಗುತ್ತಾರೆ ಎಂದು ಭಾವಿಸಿದ್ದರೆ, ಆಗ ಅವರು ಸಂಪೂರ್ಣವಾಗಿ ತಪ್ಪು ತಿಳಿದುಕೊಂಡಿದ್ದಾರೆ ಎಂದು ಅರ್ಥ. ಇಲ್ಲಿ ಸೇರಿರುವ ಜನರು ಅವರು ಹಿಂದೂಗಳಾಗಿರಲಿ, ಮುಸ್ಲಿಮರಾಗಿರಲಿ ಅಥವಾ ಕ್ರೈಸ್ತರಾಗಿರಲಿ ಅಥವಾ ಬೇರೆ ಯಾವುದೇ ಧರ್ಮದಲ್ಲಿ ಶ್ರದ್ಧೆಯನ್ನಿಟ್ಟುಕೊಂಡಿರಲಿ– ಒಂದು ಪ್ರಜಾಸತ್ತಾತ್ಮಕವಾದ ಮತ್ತು ಎಲ್ಲರಿಗೂ ನ್ಯಾಯಸಲ್ಲಿಸುವ ಸಂವಿಧಾನವನ್ನು ರಚಿಸಿದರೆ, ಅದನ್ನು ಏಕೆ ಹಿಂದೂ ರಾಜ್ ಎಂದು ಕರೆಯಬೇಕು? 'ಹಿಂದೂ' ಎಂಬ ಶಬ್ದದಿಂದ ಭಾರತದಲ್ಲಿ ವಾಸಮಾಡುವ ಜನರು ಎಂಬ ಅರ್ಥ ಮೂಡಿದರೆ ಖಂಡಿತವಾಗಿಯೂ ಭಾರತದಲ್ಲಿರುವ ಜನರಿಗಾಗಿ ನಾವು ಸಂವಿಧಾನವನ್ನು ಹೊಂದಬೇಕು. ನಮಗೆ ಕರಾರುವಾಕ್ಕಾಗಿ ಬೇಕಾದದ್ದು ಅದೇ: ಭಾರತದ ಜನರಿಂದ ರಚಿತವಾದ ಒಂದು ಸಂವಿಧಾನವು ನಮಗೆ ಬೇಕು. ಆದರೆ ಭಾರತದಲ್ಲಿನ ಕೆಲವು ಜನರು ಸದ್ಯಃ ಸಂವಿಧಾನದೊಳಕ್ಕೆ ಬರಲು ಇಷ್ಟಪಡದಿದ್ದರೆ. ಅವರು ಆಮೇಲೆ ಬರುತ್ತಾರೆ. ಅವರು ಈ ಸಂವಿಧಾನದೊಳಕ್ಕೆ ಪ್ರವೇಶಿಸುವುದನ್ನು, ಭಾರತವನ್ನು ಒಂದು ಸಂಯುಕ್ತರಾಷ್ಟ್ರವನ್ನಾಗಿ ಮಾಡುವುದನ್ನು ಮತ್ತು ಪ್ರಜಾಸತ್ತಾತ್ಮಕ ಸ್ವರೂಪದ ಸರ್ಕಾರವನ್ನು ಹೊಂದಿರುವ ಕಾಲವನ್ನು ನಾನು ಕಲ್ಪಿಸಿಕೊಳ್ಳುತ್ತೇನೆ. ದೇವರಲ್ಲಿ ಪ್ರಾರ್ಥಿಸಿಕೊಳ್ಳುವ ಮೂಲಕ ಈ ಎಲ್ಲ ಅಡಚಣೆಗಳನ್ನು ನಿವಾರಿಸಿಕೊಳ್ಳಬಹುದು ಎಂಬ ಶ್ರದ್ಧೆ ನನ್ನದು. ನಾವು ಮಹಾತ್ಮ ಗಾಂಧೀಜಿ – ನಮ್ಮ ಬಾಪೂಜಿ – ಅವರ ಉದಾಹರಣೆಯನ್ನು ಅನುಸರಿಸೋಣ ಮತ್ತು ದೇವರಲ್ಲಿ ಪ್ರಾರ್ಥಿಸೋಣ. ನಮ್ಮ ಹಾದಿಗೆ ಅಡ್ಡಲಾಗಿರುವ ಎಲ್ಲ ಅಡಚಣೆಗಳು ನಿವಾರಣೆಯಾಗಲಿ ಮತ್ತು ನಮ್ಮ ಇಡೀ ದೇಶಕ್ಕೆ ಒಂದು ಅನುಗ್ರಹವಾಗಲಿರುವ ಒಂದು ಸಂವಿಧಾನವನ್ನು ರಚಿಸುವ ಕಾರ್ಯದಲ್ಲಿ ಮುಂದುವರಿಯಲು ನಾವು ಸಮರ್ಥರಾಗಲಿ ಎಂದು ನಾವು ದೇವರಲ್ಲಿ ಪ್ರಾರ್ಥಿಸೋಣ.

**ಶ್ರೀ ಆರ್.ಕೆ. ಸಿಧ್ವಾ** (ಸಿ.ಪಿ. ಮತ್ತು ಬೇರಾರ್ : ಸಾಮಾನ್ಯ) : ಮಾನ್ಯ ಅಧ್ಯಕ್ಷರೆ, ಸ್ವತಂತ್ರ ಭಾರತಕ್ಕಾಗಿ ಒಂದು ಸಂವಿಧಾನವನ್ನು ರಚಿಸಬೇಕೆಂಬ ಭಾರತದ ರಾಷ್ಟ್ರೀಯ ಕಾಂಗ್ರೆಸ್‌ನ ಹಕ್ಕೊತ್ತಾಯವು ಈಗ ಒಂದು ಈಡೇರಿದ ವಾಸ್ತವವಾಗಿದೆ. ನಾವು ಇಲ್ಲಿ ಭಾರತಕ್ಕೆ ಒಂದು ಸಂವಿಧಾನವನ್ನು ರಚಿಸಲು ಸೇರಿದ್ದೇವೆ.

ಮುಸ್ಲಿಮ್ ಲೀಗ್ ಸ್ನೇಹಿತರನ್ನು ನಾವು ಸ್ವಾಗತಿಸುತ್ತೇವೆ. ಭಾಷಣಕಾರರ ಮೇಲೆ ಭಾಷಣಕಾರರು ಅವರ ಅನುಪಸ್ಥಿತಿಯ ಬಗೆಗೆ ವಿಷಾದ ವ್ಯಕ್ತಪಡಿಸಿದ್ದಾರೆ. ಅವರು ಒಳಗೆ ಬರಲಿ ಅಥವಾ ಬರದಿರಲಿ, ನಾನು ಹೇಳುವುದೇನೆಂದರೆ, ಹೌಸ್ ಆಫ್ ಕಾಮನ್ಸ್ ಮತ್ತು ಹೌಸ್ ಆಫ್ ಲಾರ್ಡ್ಸ್ ಸಭೆಗಳಲ್ಲಿ ಕಳೆದ ನಾಲ್ಕೈದು ದಿನಗಳಿಂದ ಬ್ರಿಟಿಷರು ನಮ್ಮತ್ತ ತೂರಿದ ಎಲ್ಲ ಬೆದರಿಕೆಗಳ ನಡುವೆಯೂ ನಾವು ನಮ್ಮ ಕಾರ್ಯಕಲಾಪಗಳನ್ನು ಮುಂದುವರಿಸಬೇಕು ಮತ್ತು ಎಂತಹ ಒಂದು ಸಂವಿಧಾನವನ್ನು ರಚಿಸಬೇಕೆಂದರೆ ಅದನ್ನು ಅನುಷ್ಠಾನಗೊಳಿಸಲು ತಿರಸ್ಕರಿಸುವ ಧೈರ್ಯವನ್ನು ಅವರು ಮಾಡಬಾರದು. ಈ ವಿಷಯದಲ್ಲಿ ನನಗೆ ಖಚಿತವಾಗಿದೆ. ಅನುಷ್ಠಾನಗೊಳಿಸಬೇಕಾದ ಸಂದರ್ಭ ಅವರಿಗೆ ಬಂದಾಗ ಹಾಗೆ ಮಾಡದಿರುವುದನ್ನು ಅವರು ಆಯ್ಕೆ ಮಾಡಿಕೊಂಡರೆ, ಆಗ ಅದನ್ನು ಹೇಗೆ ಅನುಷ್ಠಾನಗೊಳಿಸಬೇಕೆಂದು ನಮಗೆ ಗೊತ್ತು. ಮಾನ್ಯರೆ, ಭಾರತದಿಂದ ಬಡತನವನ್ನು ನಿರ್ಮೂಲಮಾಡಬೇಕೆಂದರೆ ಮತ್ತು ಈ ದೇಶದಲ್ಲಿ ಮಾನವರಿಗೆ ಸಂತೋಷವನ್ನು ತರಬೇಕೆಂದರೆ ನಮ್ಮ ಸಂವಿಧಾನವು ಸಮಾಜವಾದಿ ತತ್ತ್ವಗಳ ಮೇಲೆ ಆಧರಿಸಿರಬೇಕು. ಅಂತಹ ಸಂವಿಧಾನವು ಪೂರ್ಣವಾದಾಗ ಈ ದೇಶದಲ್ಲಿರುವ ಎಲ್ಲರಿಂದ ಮತ್ತು ಈ ದೇಶದ ಹೊರಗಿರುವವರಿಂದಲೂ ಸ್ವಾಗತಿಸಲ್ಪಡುತ್ತದೆ. ಅಲ್ಪಸಂಖ್ಯಾತರ ಪ್ರಶ್ನೆಯನ್ನು ಕುರಿತು ಅನೇಕ ಸಲ ಅನಗತ್ಯವಾದ ಮಹತ್ತ್ವವನ್ನು ಕೊಟ್ಟು ಮಾತನಾಡಲಾಗಿದೆ. ಮಾನ್ಯರೆ, ಈ ಸಂವಿಧಾನವನ್ನು ರಚಿಸುವಾಗ ಎಲ್ಲ ಔಚಿತ್ಯಪೂರ್ಣವಾದ ಸುರಕ್ಷತೆಗಳನ್ನು ಮತ್ತು ಎಲ್ಲ ಹಿತಾಸಕ್ತಿಗಳನ್ನು ಔಚಿತ್ಯಪೂರ್ಣವಾಗಿಯೇ ಪರಿಗಣಿಸಲಾಗುತ್ತದೆ. ಆದರೆ ಈ ಪ್ರಶ್ನೆಯನ್ನು ಏಕೆ ಮುಂಚೂಣಿಗೆ ತರಲಾಗಿದೆ ಎಂದೂ ನನಗೆ ಅರ್ಥವಾಗುತ್ತಿಲ್ಲ. ಈ ನಿರ್ಣಯದಲ್ಲೇ, ಕಂಡಿಕೆ ೩ರಲ್ಲಿ, ಯಾರೂ ನಮಗೆ ಹೇಳದೆಯೂ ಅಲ್ಪಸಂಖ್ಯಾತರ ಹಿತಾಸಕ್ತಿಗಳನ್ನು ಹೇಗೆ ಸಂರಕ್ಷಿಸಲಾಗಿದೆ ಎಂದು ನೀವು ನೋಡುತ್ತೀರಿ. ಕಂಡಿಕೆ ೪ ಉಳಿಕೆ ಅಧಿಕಾರಕ್ಕೆ ಸಂಬಂಧಿಸಿದ್ದಾಗಿದೆ. ಅದನ್ನು ನಾವು ಒಪ್ಪಿಕೊಂಡಿದ್ದೇವೆ. ಆದರೆ ಬ್ರಿಟಿಷ್ ನಿಯೋಗವು ನಾವು ಹಾಗೆ ಮಾಡಲು ಬಯಸಿತು ಎಂಬ ಕಾರಣಕ್ಕಲ್ಲ. ಮಾನ್ಯರೆ, ತಮಗೆ ತಿಳಿದಿರುವಂತೆ ಕಳೆದ ಅನೇಕ ವರ್ಷಗಳಿಂದ ಈ ವಿಷಯವು ಕಾಂಗ್ರೆಸ್‌ನ ಗಂಭೀರ ಪರಿಗಣನೆಯನ್ನು ಪಡೆಯುತ್ತಿತ್ತು, ಮತ್ತು ಮುಸ್ಲಿಮ್ ಲೀಗ್‌ನವರ ಭಯವನ್ನು ಕಡಿಮೆ ಮಾಡಲು ಪ್ರಾಂತ್ಯಗಳಲ್ಲಿ ಉಳಿಕೆ ಅಧಿಕಾರ ಇರಬೇಕು ಎಂಬ ನಿರ್ಧಾರಕ್ಕೆ ಆಗಸ್ಟ್ ೧೯೪೨ರಲ್ಲಿ ನಾವು ಬಂದೆವು. ಇಂದಿಗೂ ಕೂಡ ನಮ್ಮಲ್ಲಿ ಅನೇಕರಿಗೆ ಉಳಿಕೆ ಅಧಿಕಾರಗಳನ್ನು ಪ್ರಾಂತ್ಯಗಳಿಗೆ ವಹಿಸಿಕೊಡುವುದು ಇಷ್ಟವಿಲ್ಲ. ನಾವು ಒಂದು ಬಲಿಷ್ಠವಾದ ಕೇಂದ್ರ ಸರ್ಕಾರವನ್ನು ಬಯಸುತ್ತೇವೆ. ಈ ಸದನದಲ್ಲಿ ಅಥವಾ ಈ ದೇಶದಲ್ಲಿ ಮುಕ್ತ ಮತವನ್ನು ತೆಗೆದುಕೊಂಡರೆ, ಉಳಿಕೆ ಅಧಿಕಾರಗಳನ್ನು ಪ್ರಾಂತ್ಯಗಳಿಗೆ ವಹಿಸಿಕೊಡುವುದನ್ನು ಅವರು ವಿರೋಧಿಸುತ್ತಾರೆ. ಆದರೆ, ಕಾಲ್ಪನಿಕವೋ ಅಥವಾ ವಾಸ್ತವಿಕವೋ ಆದ ಮುಸ್ಲಿಮ್ ಲೀಗ್‌ನ ಭಯವನ್ನು ಕಡಮೆ ಮಾಡುವ ಸರಳ ಕಾರಣದಿಂದಾಗಿ ನಾವು ಅವರ ಭಾವನೆಗಳಿಗೆ ಗೌರವ ಕೊಟ್ಟೆವು ಮತ್ತು ಉಳಿಕೆ ಅಧಿಕಾರಗಳು ಪ್ರಾಂತ್ಯಗಳಲ್ಲಿ ಇರಬೇಕು ಎಂದು ಒಪ್ಪಿಕೊಂಡೆವು. ಅಲ್ಪಸಂಖ್ಯಾತರ ಹಿತಾಸಕ್ತಿಗಳನ್ನು ಸಂರಕ್ಷಿಸಲು ಯಾರು ಮುಂದೆ ಬಂದರು ಎಂದು ನಾನು ಕೇಳಬಹುದೆ? ಪ್ರಾಂತ್ಯಗಳಿಗೆ ಉಳಿಕೆ ಅಧಿಕಾರಗಳು ಇರಬೇಕು ಎಂದು ಹೇಳಿದ್ದು ಕಾಂಗ್ರೆಸ್ ಮತ್ತು ಬಹುಸಂಖ್ಯಾತ ಸಮುದಾಯದವರು. ಲೀಗ್‌ನವರು ಇಲ್ಲಿ ಇರಲಿ ಅಥವಾ ಇಲ್ಲದಿರಲಿ, ಗೌರವಾನ್ವಿತ ಕಾಂಗ್ರೆಸಿಗರಾಗಿ ನಾವು ಆ ತೀರ್ಮಾನಕ್ಕೆ ಬದ್ಧರಾಗಿದ್ದೇವೆ. ಮುಸ್ಲಿಮ್ ಲೀಗ್‌ನವರು ಆ ಪ್ರತಿಜ್ಞಾವಚನದ ಮೇಲೆ ಗೈರುಹಾಜರಾಗಲು ಆಯ್ಕೆ ಮಾಡಿಕೊಂಡರೂ ಕೂಡ ನಾವು ಹಿಂದೆ ಸರಿಯಲು ಇಷ್ಟಪಡುವುದಿಲ್ಲ; ಅದನ್ನು ನಾವು ಇಷ್ಟಪಡದಿದ್ದರೂ ಅನುಷ್ಠಾನಗೊಳಿಸುತ್ತೇವೆ. ಅಲ್ಪಸಂಖ್ಯಾತರ ಹಿತಾಸಕ್ತಿಗಳನ್ನು ಸಂರಕ್ಷಿಸುವಲ್ಲಿ ತಾವು ಹೇಗೆ ಸ್ವತಃ ಜಾಗ್ರತರಾಗಿದ್ದಾರೆ ಎಂದು ನಮಗೆ ಹೇಳುವ ಬ್ರಿಟಿಷರಿಗೆ ತೋರಿಸಲು ಇದು ಒಂದು ಪ್ರಸಂಗವಷ್ಟೆ ಎಂದು ನಾನು ಹೇಳಲು ಬಯಸುತ್ತೇನೆ. ಆದರೆ ನೀವು ಔಚಿತ್ಯಪೂರ್ಣವಲ್ಲದ ತಗಾದೆಗಳನ್ನು ಮಾಡಿದರೆ ಬಹುಸಂಖ್ಯಾತರು ಅಲ್ಪ ಸಂಖ್ಯಾತರಾಗಿ ಪರಿವರ್ತಿತರಾಗುವುದು ಸಾಧ್ಯವಿಲ್ಲ. ಇದೇ ಕಂಡಿಕೆಯಲ್ಲಿ ಪ್ರಾಂತ್ಯಗಳ ಪುನರ್ವಿತರಣೆಗೆ

ಸಂಬಂಧಿಸಿದಂತೆ ಒಂದು ಉಲ್ಲೇಖವಿದೆ. ಪ್ರಸಕ್ತ ಪ್ರಾಂತ್ಯಗಳ ಪುನರ್ವಿತರಣೆಯಲ್ಲಿ ಒಬ್ಬ ದೃಢ ವಿಶ್ವಾಸ ಉಳ್ಳವನು ನಾನು (ಕೇಳಿ, ಕೇಳಿ!). ಪ್ರಸ್ತುತ ಸಾಮಂಜಸ್ಯವಿಲ್ಲದ ರೀತಿಯಲ್ಲಿ ಯಾವುದೇ ಯೋಚನೆಯಿಲ್ಲದೆ ಅಥವಾ ಯಾವುದೇ ವಿವೇಕವಿಲ್ಲದೆ ಈ ಪ್ರಾಂತ್ಯಗಳನ್ನು ರೂಪಿಸಲಾಗಿದೆ. ಕೂಡಲೇ ಅದರ ಪುನರವಲೋಕನದ ಅಗತ್ಯವಿದೆ. ಸಿಂಧ್ ಪ್ರಾಂತ್ಯದಿಂದ ಬಂದಿರುವ ನಾನು ತಿಳಿದಿರುವಂತೆ, ಹತ್ತು ವರ್ಷಗಳ ಹಿಂದೆ ಬಾಂಬೆಯಿಂದ ನಾವು ಪ್ರತ್ಯೇಕಗೊಂಡಾಗ ಭಾರತ ಸರ್ಕಾರಕ್ಕೆ ೨೨ ಕೋಟಿ ರೂಪಾಯಿಗಳ ಸಾಲವನ್ನು ತೀರಿಸಬೇಕಾಗಿತ್ತು. ಏಳು ವರ್ಷಗಳಲ್ಲಿ ನಾವು ಅದನ್ನು ಚುಕ್ತಾಮಾಡಿದೆವು. ಪ್ರತ್ಯೇಕಗೊಂಡಿದ್ದರಿಂದ ನಮಗೆ ಲಭಿಸಿದ ಅನುಕೂಲಗಳೇನು ಎನ್ನುವ ವಿವರಕ್ಕೆ ಹೋಗಲು ನಾನು ಬಯಸುವುದಿಲ್ಲ.

ಆದರೆ ನಾನು ಹೇಳಬಹುದಾದದ್ದು ಏನು ಎಂದರೆ, ಮುಸಲ್ಮಾನರ ಭಾವನೆಗಳನ್ನು ಗೌರವಿಸುವಂತೆ ಈ ಕಂಡಿಕೆಯನ್ನು ಎಷ್ಟು ಎಚ್ಚರಿಕೆಯಿಂದ ರಚಿಸಲಾಗಿದೆಯೆಂದರೆ ಪ್ರಸಕ್ತ ಪಾಂತ್ಯಗಳನ್ನು ವಿಭಾಗಗಳಿಗೆ ಹೋಗುವಂತೆ ಪರಿಗಣನೆಗೆ ತೆಗೆದುಕೊಳ್ಳಲಾಗಿದೆ. ನನಗೇನಾದರೂ ಸ್ವಾತಂತ್ರ್ಯವನ್ನು ಕೊಟ್ಟರೆ ನಾನು ಒಂದು ತಿದ್ದುಪಡಿಯನ್ನು ಸೂಚಿಸುತ್ತೇನೆ. ಅದೇನೆಂದರೆ ಪ್ರಾಂತ್ಯಗಳನ್ನು ನೇರವಾಗಿ ಪುನರ್ವಿತರಣೆ ಮಾಡಬೇಕು. ಗಡಿ ಆಯೋಗವನ್ನು ಕೂಡಲೇ ನೇಮಿಸಬೇಕು. ಅನಂತರ ಸಂವಿಧಾನವನ್ನು ರಚಿಸಬೇಕು. ಆದರೆ ಇಲ್ಲೂ ಕೂಡ ಮೇ ೧೬ರ ಘೋಷಣೆಯ ಚೌಕಟ್ಟಿನೊಳಗೇ ವಿಭಾಗಗಳೊಳಕ್ಕೆ ಪ್ರವೇಶಿಸುವ ನಮ್ಮ ಭರವಸೆಯನ್ನು ಉಳಿಸಿಕೊಳ್ಳುತ್ತೇವೆ. ಹೌಸ್ ಆಫ್ ಕಾಮನ್ಸ್ ಮತ್ತು ಹೌಸ್ ಆಫ್ ಲಾರ್ಡ್ಸ್‌ಗಳಲ್ಲಿ ದಿನಂಪ್ರತಿ ನೀಡುತ್ತಿರುವ ಯಾವುದೇ ಹಸ್ತಕ್ಷೇಪ ಅಥವಾ ನಿರಂಕುಶಾಜ್ಞೆ ಅಥವಾ ಉಪದೇಶಗಳಿಂದ ಕೂಡಿದ ಕುಚೋದ್ಯದ ಹೇಳಿಕೆಗಳು ಮತ್ತು ಕುಚೋದ್ಯದ ಭಾಷಣಗಳನ್ನು ಬ್ರಿಟಿಷರಿಂದ ಕೇಳುತ್ತಿದ್ದರೂ, ಇಂದು ನಾವು ನ್ಯಾಯಬದ್ಧವಾದ ಕರ್ತವ್ಯವನ್ನು ಮಾಡುತ್ತಿದ್ದೇವೆ. ಅಲ್ಪಸಂಖ್ಯಾತರ ಪ್ರಶ್ನೆಯನ್ನು ಸುಳ್ಳುಸುಳ್ಳೆ ಮೇಲೆತ್ತಿದ ಮತ್ತು ಕೋಮುವಾರು ಗಲಭೆಯ ಪೊಳ್ಳುಭೀತಿಯನ್ನು ಬಿತ್ತಿದ ಅಂತಹ ಪ್ರಚಾರವನ್ನು ನಾವು ಸಹಿಸಲಾರೆವು. ಆಯೋಗವು ಬಂದಾಗ ಅವರು ಬೇರೆಯದೇ ಆದ ಮನೋಧರ್ಮದಲ್ಲಿದ್ದರು. ಏಕೆಂದರೆ ರಾಜಕೀಯ ದೊಂಬಿಗಳು ನಡೆಯುತ್ತಿದ್ದವು. ಅವರು ಬರುವುದಕ್ಕೆ ಮೊದಲು ಭೂಸೇನೆ, ನೌಕಾಸೇನೆ ಮತ್ತು ವಾಯುಸೇನೆಗಳು ದಂಗೆ ಎದ್ದಿದ್ದವು. ಅದು ಒಂದು ರಾಜಕೀಯ ದೊಂಬಿಯಾಗಿತ್ತು. ಈಗ, ಮಾನ್ಯರೆ, ಭಾರತದಲ್ಲಿರುವ ಸೇನಾಪಡೆಗಳು ತಮ್ಮ ಕಾಲ ಮುಗಿಯುತ್ತಾ ಬಂದಿದೆ ಎಂದು ಭಾವಿಸಿದವು. ಅವು ಕೋಮುವಾರು ಗಲಭೆಗಳಿಂದ ಗರಿಷ್ಠ ಪ್ರಯೋಜನ ಪಡೆದುಕೊಳ್ಳಲಾರಂಭಿಸಿದವು. ಈಗ ಕೋಮುವಾರು ಉದ್ವಿಗ್ನತೆ ಇದ್ದುದರಿಂದ ಬ್ರಿಟಿಷ್ ಸಂಪುಟವು ಇಲ್ಲಿ ಬಂದಿದ್ದಾಗ ಏನು ಹೇಳಿತ್ತೋ ಆದರಿಂದ ಹಿಂದೆ ಸರಿಯಲು ಬಯಸಿತು. ೧೫ನೇ ಖಂಡದ ಅವರ ವ್ಯಾಖ್ಯಾನದ ಪ್ರಕಾರ ನಾವು ಸಂವಿಧಾನವನ್ನು ರಚಿಸದೆ ಹೋದರೆ ಅಲ್ಪಸಂಖ್ಯಾತರ ಸಮುದಾಯದ ಮೇಲೆ ಅದನ್ನು ಬಲಾತ್ಕಾರವಾಗಿ ಹೊರಿಸಲಾಗುವುದಿಲ್ಲ ಎಂದು ಬ್ರಿಟಿಷ್ ಸರ್ಕಾರವು ನಮಗೆ ಹೇಳಿತ್ತು. ನಾನು ಒಂದು ಅಲ್ಪಸಂಖ್ಯಾತರ ಸಮುದಾಯದಿಂದ ಬಂದವನು. ತುಲನಾತ್ಮಕವಾಗಿ ಅದು ಬಹಳ ಸಣ್ಣ ಅಲ್ಪಸಂಖ್ಯಾತರ ಸಮುದಾಯ. ತೀರ ನಗಣ್ಯವಾದ ಸಂಖ್ಯೆಯದು. ಆದರೂ ಆ ಸಮುದಾಯವು, ಕೇವಲ ಒಂದು ಲಕ್ಷ ಪಾರ್ಸಿಗಳು ಇದ್ದರೂ, ಜಗತ್ತಿನಾದ್ಯಂತ ಪ್ರಸಿದ್ಧವಾಗಿದೆ. ಈ ನಿರ್ಣಯವನ್ನು ಅನುಮೋದಿಸುತ್ತಾ ಬಾಬು ಪುರುಷೋತ್ತಮ ದಾಸ್ ಟಂಡನ್ ಅವರು ಹೇಳಿದಂತೆ, ಈ ದೇಶದ ಇತಿಹಾಸದ ಆರಂಭಕಾಲದಲ್ಲಿ, ಈ ದೇಶದೊಳಕ್ಕೆ ಬರುವವರು ಎಲ್ಲರನ್ನೂ ಸ್ವಾಗತಿಸಲಾಗುತ್ತಿತ್ತು. ಇತಿಹಾಸವು ಹೇಳುವಂತೆ ೧೩೦೦ ವರ್ಷಗಳ ಹಿಂದೆ ಇರಾನ್‌ನಿಂದ ನಮ್ಮನ್ನು ಓಡಿಸಿದಾಗ ನಾವು ಸಮುದ್ರದಲ್ಲಿ ಮೂರು ತಿಂಗಳ ಕಾಲ ಅಲೆದಾಡುತ್ತಿದ್ದೆವು. ಗುಜರಾತಿನಲ್ಲಿನ ಸಂಜನ್‌ನ ಜಾಧ್ವ ರಾಣಾ ಹೊರತು ಬೇರೆ ಯಾರೂ ನಮಗೆ ಒಂದು ಆಶ್ರಯವನ್ನು ಕೊಡಲಿಲ್ಲ. ನಾವು ಅವರಿಗೆ ಕೃತಜ್ಞರಾಗಿದ್ದೇವೆ. ನಾವು ಇಲ್ಲಿ ಇರುವಷ್ಟು ಕಾಲದಿಂದಲೂ ಹಿಂದೂಗಳ ವಿರುದ್ಧ ನಮಗೆ ಯಾವುದೇ ಅಸಮಾಧಾನ ಇದ್ದಿರಲಿಲ್ಲ. ರಾಜಕಾರಣದಲ್ಲಿ, ಸಾಮಾಜಿಕ

ಮತ್ತು ಕೈಗಾರಿಕಾ ಉದ್ಯಮಗಳಲ್ಲಿ ಪ್ರಮುಖವಾದ ಪಾತ್ರವನ್ನು ಪಾರ್ಸಿಗಳು ವಹಿಸಿದ್ದಾರೆ. ಭಾರತೀಯ ಕಾಂಗ್ರೆಸ್‌ನ ಸಂಸ್ಥಾಪಕರಲ್ಲಿ ಆ ಮಹಾಪುರುಷ ದಾದಾಭಾಯ್ ನವರಾಜಿ ಒಬ್ಬರಾಗಿದ್ದರು. (ಹರ್ಷೋದ್ಗಾರ). ೧೯೦೬ನೇ ಇಸವಿಯಲ್ಲಿ ಕೋಲ್ಕತ್ತದ ತಮ್ಮ ಅಧ್ಯಕ್ಷ ಭಾಷಣದಲ್ಲಿ ಅವರು 'ಸ್ವರಾಜ್' ಎಂಬ ಶಬ್ದವನ್ನು ಟಂಕಿಸಿದರು. ಹಡಗು ನಿರ್ಮಾಣ ಮತ್ತು ವಸ್ತ್ರೋದ್ಯಮದ ಕೈಗಾರಿಕೆಯಲ್ಲಿ ಪಾರ್ಸಿಗಳು ಪಥ ನಿರ್ಮಾಪಕರು. ಮಹಿಳಾ ಶಿಕ್ಷಣವನ್ನು ಪ್ರಾರಂಭಿಸುವಲ್ಲಿ ಅವರು ಮೊದಲಿಗರು. ಹಾಗೆಯೇ ಜಾತಿಮತಗಳ ಭೇದವಿಲ್ಲದೆ ಎಲ್ಲರಿಗೂ ಮುಕ್ತವಾದ ಆಸ್ಪತ್ರೆಗಳಂತಹ ಧರ್ಮಾರ್ಥದ ಸಂಸ್ಥೆಗಳನ್ನು ಸ್ಥಾಪಿಸುವುದರಲ್ಲೂ ಮೊದಲಿಗರು. ಇತ್ತೀಚೆಗೆ ಅಂದರೆ ೩೦ ವರ್ಷಗಳ ಹಿಂದೆ ಜಗತ್ತಿನಲ್ಲಿಯೇ ಎರಡನೆಯ ಅತ್ಯಂತ ದೊಡ್ಡ ಕಬ್ಬಿಣ ಮತ್ತು ಉಕ್ಕಿನ ಕಾರ್ಖಾನೆಯನ್ನು ಪ್ರಾರಂಭಿಸಿದವರು ಟಾಟಾ ಕುಟುಂಬದವರು. ನಮ್ಮ ಸಮುದಾಯವನ್ನು ಪ್ರಶಂಸಿಸಲು ನಾನು ಇದನ್ನೆಲ್ಲ ಹೇಳುತ್ತಿಲ್ಲ. ಬಹುಸಂಖ್ಯಾತರ ಸಮುದಾಯವು ನಮ್ಮನ್ನು ಎಂದೂ ಮರೆಯಲಿಲ್ಲ ಎಂದು ತೋರಿಸುವುದಷ್ಟೇ ನನ್ನ ಉದ್ದೇಶವಾಗಿದೆ. ಭಾಗವಹಿಸುವುದರಲ್ಲಿ ನಾವು ಕೂಡ ಹಿಂದೆ ಬೀಳಲಿಲ್ಲ. ಪ್ರತ್ಯೇಕ ಚುನಾಯಕ ಗಣಕ್ಕಾಗಿ ಕೇಳುವಂತೆ ಬ್ರಿಟಿಷರು ನಮ್ಮ ಮೇಲೆ ಒತ್ತಡ ಹೇರಿದರು. ನಾವು ಅದನ್ನು ನಿರಾಕರಿಸಿದೆವು. ಸಾಮಾನ್ಯ ಚುನಾಯಕ ಗಣದಲ್ಲಿ ನಮ್ಮ ಹಿತಾಸಕ್ತಿಗಳು ಸಂಪೂರ್ಣವಾಗಿ ಸುರಕ್ಷಿತವಾಗಿವೆ. ೩೦ ವರ್ಷಗಳ ಹಿಂದಿನ ಪ್ರಸಂಗವೊಂದು ನೆನಪಾಗುತ್ತಿದೆ. ಈ ದೇಶದಲ್ಲಿ ಬ್ರಿಟಿಷರ ಆಳ್ವಿಕೆಯನ್ನು ಎತ್ತಿಹಿಡಿಯುವ ಉದ್ದೇಶದಿಂದ ಒಂದು ಪ್ರತ್ಯೇಕವಾದ ಪ್ರಾತಿನಿಧ್ಯವನ್ನು ಕೋರುವಂತಹ ಕುಚೋದ್ಯವನ್ನು ನಮ್ಮ ಮೇಲೆ ಹೇರಲಾಯಿತು. ಸಿಂಧ್‌ನಲ್ಲಿನ ಸ್ಥಳೀಯ ಸಂಸ್ಥೆಗಳಲ್ಲಿ ಯಾವುದೇ ರೀತಿಯ ಕೋಮುವಾರು ಪ್ರಾತಿನಿಧ್ಯವಿಲ್ಲದೆ ಸಾಮಾನ್ಯ ಪ್ರಾತಿನಿಧ್ಯವನ್ನು ನಾವು ಹೊಂದಿದ್ದೆವು. ಆಗ್ ಸಿಂಧ್‌ನ ಆಯುಕ್ತರಾಗಿದ್ದವರು ಕೆಲವು ಮುಸಲ್ಮಾನರನ್ನು ಸರ್ಕಾರದ ಕಚೇರಿಗೆ ಕರೆಸಿಕೊಂಡು ಅವರಿಗೆ ರಹಸ್ಯವಾಗಿ ಹೀಗೆ ಹೇಳಿದರು: "ಪ್ರತ್ಯೇಕವಾದ ಚುನಾಯಕ ಗಣಕ್ಕಾಗಿ ಹಕ್ಕೊತ್ತಾಯ ಮಾಡಿ ನಮಗೆ ಒಂದು ಮನವಿಯನ್ನು ಕೊಡಿ. ನಾನು ಬಾಂಬೆ ಸರ್ಕಾರಕ್ಕೆ ಶಿಫಾರಸು ಮಾಡುತ್ತೇನೆ." ಅಂತಹ ಮನವಿಯನ್ನು ಕೊಡಲಾಯಿತು ಮತ್ತು ಅಂದಿನಿಂದ ನಮ್ಮ ಸಿಂಧ್ ಪುರಸಭೆಯಲ್ಲಿ ಪ್ರತ್ಯೇಕ ಚುನಾಯಕ ಗಣಗಳಿವೆ. ಹೀಗೆ ಒಂದು ಸಮುದಾಯದ ವಿರುದ್ಧ ಇನ್ನೊಂದು ಸಮುದಾಯವನ್ನು ಒಡೆಯುವ ಕುಚೋದ್ಯವನ್ನು ಬ್ರಿಟಿಷರು ಹೇಗೆ ಆಡುತ್ತಿದ್ದಾರೆ ಎನ್ನುವುದನ್ನು ನಾವು ಕಣ್ಣಾರೆ ಕಂಡಿದ್ದೇವೆ. ಪ್ರತ್ಯೇಕ ಚುನಾಯಕ ಗಣಕ್ಕಾಗಿ ಹಕ್ಕೊತ್ತಾಯ ಮಾಡುವಂತೆ ಪಾರ್ಸಿಗಳನ್ನು ಅನೇಕ ಬಾರಿ ಕೇಳಲಾಗಿದೆ. ನಾವು ಅದನ್ನು ನಿರಾಕರಿಸಿ ಹೀಗೆ ಉತ್ತರಿಸಿದ್ದೇವೆ: "ನಮ್ಮ ಬಹುಸಂಖ್ಯಾತ ಸಮುದಾಯದವರೊಡನೆ ನಾವು ಸಂಪೂರ್ಣವಾಗಿ ಸುರಕ್ಷಿತರಾಗಿದ್ದೇವೆ." ಈ ಸಭೆಯಲ್ಲಿರುವ ಬಹುಸಂಖ್ಯಾತ ಸಮುದಾಯದವರ ಸದ್ಗುಣವನ್ನೇ ನೋಡಿ. ಅವರ ಮತಗಳಿಂದಲೇ ಈವರೆಗೆ ನಾವೆಲ್ಲ ಚುನಾಯಿತರಾಗಿರುವುದು. ಸ್ವಾತಂತ್ರ್ಯವನ್ನು ಗಳಿಸಬೇಕೆಂಬ ನಮ್ಮ ನೆಚ್ಚಿನ ಗುರಿಯನ್ನು ವಿರೋಧಿಸುವವರು ನಮ್ಮ ಗುರಿಯನ್ನೇ ವಿರೋಧಿಸುತ್ತಿದ್ದಾರೆ ಎಂದು ನಾನು ಹೇಳಬಹುದೆ? ಏಕೆಂದರೆ, ಅವರೂ ಕೂಡ ಬಹುಸಂಖ್ಯಾತರ ಮತಗಳಿಂದಲೇ ಚುನಾಯಿತರಾಗಿದ್ದಾರೆ. ನಮ್ಮ ನೆಚ್ಚಿನ ಅಭಿಪ್ರಾಯಗಳನ್ನು ಅಥವಾ ನೆಚ್ಚಿನ ಹಕ್ಕೊತ್ತಾಯವನ್ನು ವಿರೋಧಿಸಿರಬಹುದಾದ ಯಾರನ್ನೂ ನಾವು ಶತ್ರುಗಳೆಂದು ಪರಿಗಣಿಸುವುದಿಲ್ಲ. ನಾನು ಆಂಗ್ಲೊ ಇಂಡಿಯನ್ನರನ್ನು ಕುರಿತು ಹೇಳುತ್ತಿದ್ದೇನೆ. ಅಷ್ಟಾದರೂ ಅವರನ್ನು ನಾವು ಚುನಾಯಿಸಿದ್ದೇವೆ. ಈ ಹೃದಯ ವೈಶಾಲ್ಯವನ್ನು ನಾವು ಮೆಚ್ಚಬೇಕು. ಮಾಮೂಲಿನ ಹಳೆಯ ಕುಚೋದ್ಯವನ್ನು ಸೃಷ್ಟಿಸುವುದಲ್ಲದೆ ಯಾವ ಬಗೆಯ ಸುರಕ್ಷತೆ ಬ್ರಿಟಿಷರಿಗೆ ಬೇಕು? ಆದರೆ ಬ್ರಿಟಿಷ್ ಸರ್ಕಾರಕ್ಕೆ ನಾನು ಹೇಳುತ್ತೇನೆ. ಸಂವಿಧಾನ ರಚನಾಸಭೆಯ ಕೆಲಸವನ್ನು ವಿಚಲಿತಗೊಳಿಸಲು ಉದ್ದೇಶಪೂರ್ವಕವಾಗಿ ಇಂದು ನಡೆಸುತ್ತಿರುವ ಈ ಕುಚೋದ್ಯದ ಪ್ರಚಾರ ಅವರಿಗೆ ನೆರವು ನೀಡಲಾಗದಂತಹ ಸಮಯ ಬಂದಿದೆ. ನಮ್ಮ ಕೆಲಸದಲ್ಲಿ ನಾವು ಮುಂದುವರಿಯೋಣ. ಎಲ್ಲ ಕಾಲದಲ್ಲೂ, ಅದರಲ್ಲೂ ವಿಶೇಷವಾಗಿ ಈ ಸಮಯದಲ್ಲಿ ಏನೇ ಕಷ್ಟಗಳು, ಅಡಚಣೆಗಳು ಮತ್ತು ಒಳಸಂಚುಗಳನ್ನು

ಒಡ್ಡಿದರೂ ನಮ್ಮ ಕೆಲಸದಲ್ಲಿ ನಾವು ಮುಂದುವರಿಯೋಣ. ಸರ್ ಸ್ಟ್ಯಾಫರ್ಡ್ ಕ್ರಿಪ್ಸ್ ಅಥವಾ ರಾಜ್ಯ ಕಾರ್ಯದರ್ಶಿಯವರು ಒಳಸಂಚಿನ ಬದಲು ಶ್ರೀ ಜಿನ್ನಾಗೆ ಹೇಳಲಿ, "ನೀವು ಬಯಸಿದ ಪ್ರಕಾರ ಒಂದು ನಿರ್ದಿಷ್ಟವಾದ ಖಂಡಕ್ಕೆ ವ್ಯಾಖ್ಯಾನವನ್ನು ಪಡೆದಿರಿ. ಈಗ ನೀವು ಪಾಕಿಸ್ತಾನ ಕುರಿತ ಪ್ರಚಾರವನ್ನು ನಿಲ್ಲಿಸಬೇಕು." ಸಂಪುಟ ನಿಯೋಗವು ಚರ್ಚೆಮಾಡಿ, ತನಿಖೆಮಾಡಿ ಒಂದು ನಿರ್ಣಯಕ್ಕೆ ಬಂದಿದೆ. ಅದೇನೆಂದರೆ ಪಾಕಿಸ್ತಾನವು ವ್ಯವಹಾರ್ಯವಲ್ಲ, ಕಾರ್ಯಸಾಧ್ಯವಲ್ಲ ಅಥವಾ ಯುಕ್ತವಾದುದಲ್ಲ. ಆದ್ದರಿಂದ ಆ ಪ್ರಶ್ನೆಯನ್ನು ಆಖೈರಾಗಿ ಹೂತುಹಾಕಲಾಗಿದೆ. ಆದರೂ ಕೂಡ ಸಂಸತ್ತಿನಲ್ಲಿ ಇತ್ತೀಚೆಗೆ ಚರ್ಚೆ ನಡೆದಾಗ ಶ್ರೀ ಜಿನ್ನಾ ಪಾಕಿಸ್ತಾನದ ಪರವಾಗಿ ವಿನಾಶಕರವಾದ, ವಿಷಪೂರ್ಣವಾದ ಪ್ರಚಾರದಿಂದ ಕೂಡಿದ ಭಾಷಣಗಳನ್ನು ಮಾಡುವುದನ್ನು ನಿಲ್ಲಿಸಲಿ ಎಂದು ನೀವು ಒಂದು ಮಾತನ್ನಾದರೂ ಹೇಳಿದ್ದೀರಾ? ಶ್ರೀ ಜಿನ್ನಾ ಹಗಲೂ ರಾತ್ರಿ ಎಲ್ಲಿಗೇ ಹೋಗಲಿ, ಅದು ಸುದ್ದಿಗೋಷ್ಠಿಯಾಗಿರಬಹುದು ಅಥವಾ ಹೇಳಿಕೆಗಳಾಗಿರಬಹುದು, ಪಾಕಿಸ್ತಾನದ ಕಥೆಯನ್ನು ಮತ್ತೆ ಮತ್ತೆ ಹೇಳುತ್ತಲೇ ಇರುತ್ತಾರೆ. ಆದ್ದರಿಂದ ಮೇ ೧೬ರ ಹೇಳಿಕೆಯಲ್ಲಿ ಬ್ರಿಟಿಷ್ ನಿಯೋಗವು ನಿರ್ಣಯವನ್ನು ಕೊಟ್ಟಿದ್ದರೂ ಕೂಡ ಅವರು ಏನನ್ನು ಬಯಸುತ್ತಾರೆ ಎಂದು ನಮಗೆ ಗೊತ್ತಿಲ್ಲ.

ಬ್ರಿಟಿಷ್ ಸರ್ಕಾರವು ತನ್ನ ಮಾತಿನಿಂದ ಹಿಂದೆ ಸರಿಯುವುದಿಲ್ಲ ಎಂದಾದರೆ, ಈ ಪ್ರಚಾರವನ್ನು ನಿಲ್ಲಿಸಬೇಕೆಂದು, ದೇಶದಲ್ಲಿ ಕೋಮುವಾರು ಗಲಭೆಯನ್ನು ಉಂಟುಮಾಡುವಂತೆ ಮನುಷ್ಯರ ಮನಸ್ಸುಗಳನ್ನು ವಿಷಯುಕ್ತಗೊಳಿಸುವುದನ್ನು ನಿಲ್ಲಿಸಬೇಕು ಎಂದು ಶ್ರೀ ಜಿನ್ನಾ ಅವರಿಗೆ ಹೇಳಬೇಕು. ಅವರಿಗೆ ಹಾಗೆ ಹೇಳುವ ಬದಲು ಅಲ್ಪಸಂಖ್ಯಾತರ ಸಮುದಾಯಕ್ಕೆ ಸಲಹೆ ನೀಡುವ ನಾಚಿಕೆಯಿಲ್ಲದ ಧಾರ್ಷ್ಟ್ಯವನ್ನು ತೋರುತ್ತಿದ್ದಾರೆ. ಅವರಿಗೆ ನಿಜವಾಗಲೂ ಏನು ಬೇಕು ಮತ್ತು ಅವರ ಮನಸ್ಸಿನಲ್ಲಿ ಏನು ಕ್ರಿಯೆ ನಡೆಯುತ್ತಿದೆ ಎಂದು ನಾವು ಅರ್ಥಮಾಡಿಕೊಳ್ಳಲಾರವು. ಡಿಸೆಂಬರ್ ೯ ರಂದು ನಾವು ಇಲ್ಲಿ ಸಭೆಸೇರುವ ಹಿನ್ನೆಲೆಯಲ್ಲಿರುವ ಉದ್ದೇಶವನ್ನು ಭಂಗಗೊಳಿಸಲು ಅವರು ಮುಸ್ಲಿಮ್ ಲೀಗನ್ನು ಲಂಡನ್ನಿಗೆ ಆಹ್ವಾನಿಸಿದರೆ? ಆದರೆ ನಮ್ಮ ನಾಯಕರಿಗೆ ಎಲ್ಲ ಗೌರವಗಳೂ ಸಲ್ಲಬೇಕು. ಗೌರವಾನ್ವಿತ ಪಂಡಿತ್ ನೆಹರು ಹಿಂದಿನ ವಾರ ಇಂಗ್ಲೆಂಡಿಗೆ ಹೋಗಬೇಕಾಗಿತ್ತು. ಡಿಸೆಂಬರ್ ೯ ರಂದು ಸಂವಿಧಾನ ರಚನಾಸಭೆಯ ಉದ್ಘಾಟನಾ ಸಮಾರಂಭದಲ್ಲಿ ಭಾಗವಹಿಸಲು ಅಂದೇ ಮರಳಿಬರುವುದಾಗಿ ಅವರು ಭರವಸೆಕೊಟ್ಟು ಹೋಗಿದ್ದರು; ನಮ್ಮ ನಾಯಕರು ಸಂವಿಧಾನ ರಚನಾಸಭೆಯ ಮೊದಲನೆಯ ಸಭೆಯನ್ನು ಡಿಸೆಂಬರ್ ೯ ರಂದೇ ಇಟ್ಟುಕೊಳ್ಳುವ ತಮ್ಮ ನಿರ್ಧಾರಕ್ಕೆ ಬದ್ಧವಾಗಿದ್ದರು. ಅನೇಕ ರೀತಿಯಲ್ಲಿ ನಮಗೆ ಅಡ್ಡಗಾಲನ್ನು ಹಾಕಲಾಗಿದೆ. ಅವರು ನಮ್ಮ ಕೆಲಸವನ್ನು ನಿಲ್ಲಿಸಬೇಕೆಂದು ಬಯಸಿದ್ದರು. ಸಂಸತ್ತಿನಲ್ಲಿ ಮಾಡಿದ ಭಾಷಣಗಳಿಂದ ಅದು ಸ್ಪಷ್ಟವಾಗಿದೆ. ಒಂದು ದಿನದ ಹಿಂದೆ, "ನೀವು ಫೆಡರಲ್ ನ್ಯಾಯಾಲಯಕ್ಕೆ ಹೋಗಬಹುದು ಮತ್ತು ಶೀಘ್ರವೇ ನಿರ್ಣಯವನ್ನು ತೆಗೆದುಕೊಳ್ಳಬಹುದು" ಎಂದು ನಮಗೆ ಹೇಳಲಾಯಿತು. ಮರುದಿನ ರಾಜ್ಯ ಕಾರ್ಯದರ್ಶಿಯವರು ಹೇಳಿದರು. "ನೀವು ಫೆಡರಲ್ ನ್ಯಾಯಾಲಯಕ್ಕೆ ಹೋಗಬಹುದು; ಆದರೆ ನ್ಯಾಯಾಲಯ ತೆಗೆದುಕೊಳ್ಳುವ ಯಾವುದೇ ನಿರ್ಧಾರಕ್ಕೆ ನಾವು ಬದ್ಧರಲ್ಲ." ನಾವು ಈ ಸಭೆಯಲ್ಲಿ ಇಷ್ಟು ದೊಡ್ಡ ಸಂಖ್ಯೆಯಲ್ಲಿ ಸೇರಿಲ್ಲವೆ? ನಾವು ನಮ್ಮ ಕೆಲಸವನ್ನು ಮುಂದುವರಿಸಿಕೊಂಡುಹೋಗೋಣ. ಉದ್ಭವಿಸುವ ಯಾವುದೇ ಕಷ್ಟವನ್ನು ನಾವು ಎದುರಿಸೋಣ ಮತ್ತು ಹಿಂದೆ ಮಾಡಿದಂತೆ ಅದನ್ನು ಪರಿಹರಿಸಿಕೊಳ್ಳಲು ಪ್ರಯತ್ನಿಸೋಣ. ಪ್ರಮುಖ ಸಮುದಾಯಕ್ಕೆ ಮಾಡಲಾಗುತ್ತಿದ್ದ ಮಹಾನ್ ಹಾನಿಯನ್ನು ನಾವು ಈಗಾಗಲೇ ತಡೆಗಟ್ಟಿದ್ದೇವೆ. ಅದನ್ನು ನಾವು ಹಿಂದೆ ಮಾಡಿದ್ದೇವೆ ಮತ್ತು ಒಗ್ಗಟ್ಟನ್ನು ತರಲು ಹಾಗೂ ಈ ದೇಶದಿಂದ ಬ್ರಿಟಿಷ್ ಜನರನ್ನು ಹೊಡೆದೋಡಿಸಲು ಅದನ್ನು ನಾವು ಮತ್ತೆ ಮಾಡೋಣ. ಅದನ್ನು ನಾವು ಮಾಡಬಲ್ಲೆವು.

ಆದರೆ ಮುಸ್ಲಿಮ್ ಲೀಗ್ ಏಕೆ ಹೊರಗೆ ಉಳಿದಿದೆ ಎಂದು ಕೇಳಲು ನಾನು ಬಯಸುತ್ತೇನೆ. ನಾವು ಇಲ್ಲಿ ಸಭೆ ಸೇರಿ ಒಂದು ಸಂವಿಧಾನವನ್ನು ರಚಿಸಿದರೂ ಅದನ್ನು ಅವರು ಅನುಷ್ಠಾನಗೊಳಿಸುವುದಿಲ್ಲ

ಎಂದು ಬ್ರಿಟಿಷರು ನಮಗೆ ಹೇಳಬೇಕೆಂದು ಅವರು ಬಯಸುತ್ತಾರೆಯೆ? ಹಾಗೆ ಅವರು ಹೇಳಲಿ. ನಾವು ಒಂದು ಸಂವಿಧಾನವನ್ನು ರಚಿಸಿ ಜನತಾ ನ್ಯಾಯಾಲಯದ ಅಭಿಪ್ರಾಯದ ಮುಂದೆ ಮಂಡಿಸೋಣ. ಈ ಜಗತ್ತಿನಲ್ಲಿ ಪೂರ್ವಾಗ್ರಹರಹಿತ ಮನಸ್ಸುಗಳ ಪೂರ್ವಾಗ್ರಹರಹಿತ ದೇಶಗಳಿವೆ. ಅವರು ನಮ್ಮ ಕ್ರಿಯೆಗಳನ್ನು ಯುಕ್ತವಾಗಿ, ನ್ಯಾಯಯುತವಾಗಿ ಮತ್ತು ಸತ್ಯವಾಗಿ ನಿರ್ಣಯಿಸುತ್ತಾರೆ. ಕಾಮಾಲೆ ಕಣ್ಣಿಗೆ ಮಾತ್ರ ಪ್ರತಿಯೊಂದೂ ಹಳದಿಯಾಗಿ ಮತ್ತು ತಪ್ಪಾಗಿ ಕಾಣುತ್ತದೆ. ದಕ್ಷಿಣ ಆಫ್ರಿಕದ ವಿವಾದದಲ್ಲಿ ವಿಶ್ವ ಸಂಸ್ಥೆಯ ಪ್ರತಿನಿಧಿಗಳು ನಮ್ಮ ನ್ಯಾಯಸಮ್ಮತ ಕಾರಣವನ್ನು ಬೆಂಬಲಿಸಿದರಾದರೂ ಬ್ರಿಟಿಷರು ನಮ್ಮನ್ನು ವಿರೋಧಿಸಿದರು. ನಮ್ಮ ಕಾರಣವು ನ್ಯಾಯಸಮ್ಮತವಾದದ್ದು. ನಾವು ನಮ್ಮ ಕಾರ್ಯವನ್ನು ಮುಂದುವರಿಸೋಣ ಮತ್ತು ನಾವು ಹೆಮ್ಮೆ ತಾಳುವಂತಹ ಒಂದು ಸಂವಿಧಾನವನ್ನು ಸಿದ್ಧಪಡಿಸೋಣ. (ಚಪ್ಪಾಳೆ).

**ಶ್ರೀ ಬಿಶ್ವನಾಥ್ ದಾಸ್** (ಒರಿಸ್ಸಾ) : ಮಾನ್ಯರೆ, ಒರಿಸ್ಸಾ ಪ್ರತಿನಿಧಿಗಳ ಪರವಾಗಿ ನಾನು ಈ ನಿರ್ಣಯವನ್ನು ಬೆಂಬಲಿಸುತ್ತೇನೆ. ಗೌರವಾನ್ವಿತ ಪಂಡಿತ್ ಜವಾಹರಲಾಲ್ ನೆಹರು ಮಂಡಿಸಿದ ನಿರ್ಣಯವು ನಾಲ್ಕು ಭಾಗಗಳಾಗಿ ವಿಭಜಿತವಾಗಿದೆ. ಮೊದಲನೆಯ ಭಾಗವು ಪ್ರಮುಖ ಉದ್ದೇಶವನ್ನು ಒಳಗೊಂಡಿದೆ. ಅದಕ್ಕಾಗಿಯೇ ನಾವು ಬಡಿದಾಡುತ್ತಿದ್ದೇವೆ. ಎರಡನೆಯ ಭಾಗವು ನೆಲ, ಜಲ ಮತ್ತು ಆಕಾಶವನ್ನೂ ಒಳಗೊಂಡಂತೆ ಮುಕ್ತವಾದ, ಸ್ವತಂತ್ರವಾದ ಭಾರತದ ಗಣರಾಜ್ಯದ ಅಧಿಕಾರ ವ್ಯಾಪ್ತಿಯ ಪ್ರದೇಶವನ್ನು ಕುರಿತು ಉಲ್ಲೇಖಿಸುತ್ತದೆ. ಮೂರನೆಯದು ಜನರಿಂದ ನಮಗೆ ನಿಷ್ಪನ್ನವಾಗುವ ಅಧಿಕಾರ ಮತ್ತು ವಿಧಾಯಕ ಶಕ್ತಿಯನ್ನು ಕುರಿತ ಘೋಷಣೆಯಾಗಿದೆ. ನಾಲ್ಕನೆಯದು ಬಹಳ ಅಗತ್ಯವಾದದ್ದು ಮತ್ತು ಮಹತ್ತ್ವಪೂರ್ಣವಾದದ್ದು. ಅದು ವೈಯಕ್ತಿಕ ಸ್ವಾತಂತ್ರ್ಯದಿಂದ ಪ್ರಾರಂಭವಾಗಿ ಬುಡಕಟ್ಟು ಪ್ರದೇಶಗಳು ಮತ್ತು ಇತರೆಯವನ್ನೂ ಒಳಗೊಳ್ಳುತ್ತದೆ.

ಮಾನ್ಯರೆ, ಇವು ಯಾವುದೇ ಸಂವಿಧಾನಕ್ಕೆ ಅತ್ಯಾವಶ್ಯಕವಾದ ಪೂರ್ವಭಾವಿ ಅಂಶಗಳು. ಆದ್ದರಿಂದ ಪ್ರಾರಂಭದಲ್ಲಿಯೇ ಈ ಸಮಸ್ಯೆಯನ್ನು ನಾವು ಎದುರಿಸದಿದ್ದರೆ ಅದು ಯುಕ್ತವಲ್ಲ ಮತ್ತು ಅನಪೇಕ್ಷಣೀಯ. ಈ ನಿರ್ಣಯಕ್ಕೆ ವಿರೋಧವೇನೂ ಇಲ್ಲ. ರೈಟ್ ಆನರಬಲ್ ಡಾ. ಜಯಕರ್ ಮಂಡಿಸಿದ ತಿದ್ದುಪಡಿಯು ಅದರ ಪರಿಗಣನೆಯನ್ನು ಒಂದು ತಿಂಗಳ ಕಾಲ ಮುಂದೂಡಬೇಕೆಂದು ಕೋರುತ್ತಿದೆಯಷ್ಟೆ. ಈ ಗೌರವಾನ್ವಿತ ಸದಸ್ಯರು ಈ ನಿರ್ಣಯದ ವಸ್ತು ವಿಷಯವನ್ನು ಸಂಪೂರ್ಣವಾಗಿ ಸಮ್ಮತಿಸುವುದಾಗಿ ಒಪ್ಪಿಕೊಂಡಿದ್ದಾರೆ. ಒಂದು ತಿಂಗಳ ಮುಂದೂಡಿಕೆಯು ಹೇಗೆ ಏನಾದರೂ ವ್ಯತ್ಯಾಸವನ್ನು ತರಬಲ್ಲದು ಎಂದು ಅರ್ಥಮಾಡಿಕೊಳ್ಳುವಲ್ಲಿ ನಾನು ವಿಫಲನಾಗಿದ್ದೇನೆ.

ಮಾನ್ಯರೆ, ಈ ಚರ್ಚೆಗೆ ಗಣನೀಯ ಕೊಡುಗೆಯನ್ನು ನನ್ನ ಮಿತ್ರರಾದ ಡಾ. ಅಂಬೇಡ್ಕರ್ ನೀಡಿದ್ದಾರೆ. 'ಗುಂಪುಗೂಡಿಸುವುದು' ಎಂಬ ಶಬ್ದವನ್ನು ಬಿಟ್ಟಿರುವ ೩ನೇ ಕಂಡಿಕೆಯನ್ನು ಹೊರತುಪಡಿಸಿ ಈ ನಿರ್ಣಯದ ಬೇರೆ ಕಂಡಿಕೆಗಳನ್ನು ಕುರಿತು ತಮ್ಮ ಆಕ್ಷೇಪವೇನೂ ಇಲ್ಲ ಎಂದು ಅವರು ಹೇಳಿದ್ದಾರೆ. ಮಾನ್ಯರೆ, ಈ ವಿಚಾರವಾಗಿ ನಾನು ಅವರಲ್ಲಿ, ಒಂದು ಮನವಿಯನ್ನು ಮಾಡಿಕೊಳ್ಳಬೇಕಾಗಿದೆ. 'ಗುಂಪುಗೂಡಿಸುವುದು' ಎಂಬ ಶಬ್ದವನ್ನು ಕೈಬಿಟ್ಟಿರುವುದಕ್ಕೆ ಮಾಡಿರುವ ಆಕ್ಷೇಪವನ್ನು ಗಂಭೀರವಾಗಿ ತೆಗೆದುಕೊಳ್ಳಬೇಕಾಗಿಲ್ಲ. ಏಕೆಂದರೆ, ನಾವು ಈ ನಿರ್ಣಯದಲ್ಲಿ ಗುಂಪುಗೂಡಿಸುವುದಕ್ಕೆ ವಿರುದ್ಧವಾದುದನ್ನು ಏನನ್ನೂ ಹೇಳಿಲ್ಲ. ಈ ಸಂಗತಿಯೇ ಗುಂಪುಗೂಡಿಸುವ ವಿಚಾರವನ್ನು ಮುಕ್ತವಾಗಿಟ್ಟಿದೆ. ಸಂಪೂರ್ಣವಾಗಿ ಮುಕ್ತವಾಗಿಟ್ಟಿದೆ. ಈ ಹಂತದಲ್ಲಿ ನಾನು ಮಿತ್ರರಾದ ಡಾ. ಅಂಬೇಡ್ಕರ್ ಅವರನ್ನು ಸಂಪುಟ ನಿಯೋಗದ ಯೋಜನೆಯ ಕಂಡಿಕೆ ೧೯(೫) ಅನ್ನು ನೋಡಬೇಕೆಂದು ಹೇಳುತ್ತೇನೆ. ಅದರಲ್ಲಿ ವಿಶೇಷವಾಗಿ ನಮೂದಿಸಿರುವುದೇನೆಂದರೆ ವಿಭಾಗಗಳು, ಗುಂಪುಗಳ ನಿಯೋಜನೆಯನ್ನು ಮಾಡಬೇಕೆ ಎಂದು ನಿರ್ಧರಿಸುತ್ತವೆ. ಮಾನ್ಯರೆ, ನಮಗೆಲ್ಲ ತಿಳಿದಿರುವಂತೆ ಭಾರತದ ರಾಷ್ಟ್ರೀಯ ಕಾಂಗ್ರೆಸ್‌ನ ಕಾರ್ಯಕಾರಿ ಸಮಿತಿಯು ಈ ವಿಚಾರವಾಗಿ ಒಂದು ಪರ್ಯಾಯ ಪ್ರಸ್ತಾವವನ್ನು ಮುಂದಿಟ್ಟಿದೆ. ಸಂಪುಟ ನಿಯೋಗವು ಕಾರ್ಯಕಾರಿ ಸಮಿತಿಯ ಈ ಪ್ರಸ್ತಾವವನ್ನು ಟೀಕಿಸಿದೆ

ಮತ್ತು ಅವರ ಟಿಪ್ಪಣಿಗಳು ಕಂಡಿಕೆ ೧೪(೨)ರಲ್ಲಿ ಇವೆ. ಈ ಯೋಜನೆಯ ಅಡಿಯಲ್ಲಿ, ಪ್ರಾಂತ್ಯಗಳು ಬೃಹತ್ ಪ್ರಮಾಣದಲ್ಲಿ ಆರ್ಥಿಕ ಮತ್ತು ಆಡಳಿತಾತ್ಮಕ ಆಯೋಜನೆಯಲ್ಲಿ ಪಾಲ್ಗೊಳ್ಳಬೇಕೆಂದರೆ ಕೇಂದ್ರ ಐಚ್ಛಿಕ ವಿಷಯಗಳ ಜೊತೆಗೆ ಅವು ಪ್ರಸ್ತಾವಿಸಿದ ಕಡ್ಡಾಯ ವಿಷಯಗಳಿಗೂ ಸಮ್ಮತಿಸಬೇಕು. ಭಾರತದ ರಾಷ್ಟ್ರೀಯ ಕಾಂಗ್ರೆಸ್‌ನ ಕಾರ್ಯಕಾರಿ ಸಮಿತಿಯು ತಾಳಿದ ನಿಲುವನ್ನು ಕುರಿತು ಹೇಳಿದ ಸಂಪುಟ ಆಯೋಗವು ತನ್ನ ಅಭಿಪ್ರಾಯಗಳನ್ನು ನೀಡಿದೆ. ಒಂದು ಕೇಂದ್ರೀಯ ಕಾರ್ಯಾಂಗ ಮತ್ತು ಶಾಸಕಾಂಗವನ್ನು ರೂಪಿಸುವುದು ಬಹಳ ಕಷ್ಟವಾಗುತ್ತದೆ ಎಂದು ನಿಯೋಗವು ಹೇಳುತ್ತದೆ. ಅದರಲ್ಲಿ ಕೆಲವು ಮಂತ್ರಿಗಳು ಕಡ್ಡಾಯ ವಿಷಯಗಳನ್ನು ಕುರಿತು ವ್ಯವಹರಿಸುತ್ತಿದ್ದು ಇಡೀ ಭಾರತಕ್ಕೆ ಹೊಣೆಗಾರರಾಗಿರುತ್ತಾರೆ. ಇತರ ಮಂತ್ರಿಗಳು ಐಚ್ಛಿಕ ವಿಷಯಗಳನ್ನು ಕುರಿತು ವ್ಯವಹರಿಸುತ್ತಿದ್ದು ಆಯಾ ಪ್ರಾಂತ್ಯಗಳಿಗೆ ಮಾತ್ರ ಹೊಣೆಗಾರರಾಗಿರುತ್ತಾರೆ. ಮಾನ್ಯರೆ, ಈ ಆಕ್ಷೇಪದೊಂದಿಗೆ ಸಂಪುಟ ನಿಯೋಗವು ಕಾರ್ಯಕಾರಿ ಸಮಿತಿಯ ಮುಂದಿಟ್ಟ ಸಲಹೆಯನ್ನು ನಿರಾಕರಿಸಿತು. ಕೇಂದ್ರದ ಮಾರ್ಗದರ್ಶನವಿಲ್ಲದಿದ್ದರೆ ಚಿಕ್ಕ ಪ್ರಾಂತ್ಯಗಳು ತಮ್ಮ ಪೂರ್ಣ ಔನ್ನತ್ಯಕ್ಕೆ ಏರುವುದು ಅಸಾಧ್ಯವಲ್ಲವಾದರೂ ಬಹಳ ಕಷ್ಟ. ಈ ವಿಚಾರವಾಗಿ ನಾನು 'ಬಿ' ಮತ್ತು 'ಸಿ' ವಿಭಾಗಗಳನ್ನು ಉಲ್ಲೇಖಿಸುತ್ತಿಲ್ಲ. ಒರಿಸ್ಸಾ, ಬಿಹಾರ್, ಸಿ.ಪಿ., ಮದ್ರಾಸ್ ಮತ್ತು ಸಂಬಂಧಪಟ್ಟ ಇತರೆಯವು ಇರುವಂತಹ ಪ್ರಾಂತ್ಯಗಳನ್ನು ಹೊಂದಿರುವ 'ಎ' ವಿಭಾಗವನ್ನು ಉಲ್ಲೇಖಿಸುತ್ತಿದ್ದೇನೆ. ಮಾನ್ಯರೆ, ಭಾಷಾವಾರು ಪ್ರಾಂತ್ಯಗಳಾಗಿ ಭಾರತವನ್ನು ವಿಭಜಿಸಲು ಕಾಂಗ್ರೆಸ್ ಒಪ್ಪಿಕೊಂಡಿರುವುದರ ಅರ್ಥವೆಂದರೆ ಅನೇಕ ಚಿಕ್ಕ ಚಿಕ್ಕ ಪ್ರಾಂತ್ಯಗಳ ಸೃಷ್ಟಿ. ಒರಿಸ್ಸಾ, ಕೇರಳ, ಕರ್ನಾಟಕ ಮತ್ತು ಅಂತಹ ಅನೇಕ ಚಿಕ್ಕ ಚಿಕ್ಕ ಪ್ರಾಂತ್ಯಗಳು ತಮ್ಮ ಆಡಳಿತ ಮತ್ತು ಆರ್ಥಿಕ ಯೋಜನೆಗಳನ್ನು ತಾವೇ ಮಾಡಿಕೊಳ್ಳಬೇಕೆಂದರೆ ದೊಡ್ಡ ತೊಂದರೆಗೆ ಸಿಕ್ಕಿಹಾಕಿಕೊಳ್ಳುತ್ತವೆ. ಇಂತಹ ಸನ್ನಿವೇಶಗಳಲ್ಲಿ ಈ ಪ್ರಾಂತ್ಯಗಳು ಎಲ್ಲ ಸಂಬಂಧಿತ ಅಧಿಕಾರಗಳನ್ನು ಕೇಂದ್ರಕ್ಕೆ ಒಪ್ಪಿಸಿಬಿಡುತ್ತವೆ. ಅನಂತರ ಯಾವುದೇ ಆಕ್ಷೇಪಕ್ಕೂ ಯಾವ ಕಾರಣವೂ ಇರುವುದಿಲ್ಲ. ಇವು ಮತ್ತು ಇಂತಹ ಅನೇಕ ಪರಿಗಣನೆಗಳು ಮುಂದೆ ವಿಭಾಗಗಳಲ್ಲಿ ತಲೆಯೆತ್ತಬಹುದು. ಬಾಗಿಲನ್ನು ಮುಚ್ಚದೆ ತೆರೆದಿಡುವುದು ಏಕೆಂದರೆ, ಅಂತಹ ಪ್ರಸ್ತಾವಗಳನ್ನು ಮಾಡಬಹುದು ಎಂದು. ಇಂತಹ ಸನ್ನಿವೇಶಗಳಲ್ಲಿ 'ಗುಂಪು' ಎಂಬ ಶಬ್ದವನ್ನು ಕೈಬಿಟ್ಟಿರುವುದಕ್ಕೆ ಯಾವ ಅಗೋಚರ ಉದ್ದೇಶವೂ ಇರಲಿಲ್ಲ ಎಂದು ನನ್ನ ಗೌರವಾನ್ವಿತ ಮಿತ್ರರಾದ ಡಾ. ಅಂಬೇಡ್ಕರ್ ಅವರು ನೋಡುತ್ತಾರೆ ಎಂದು ನಾನು ನಂಬುತ್ತೇನೆ. 'ಎ' ಗುಂಪಿನ ಅಡಿಯಲ್ಲಿ ಬರುವ ಆ ಪ್ರಾಂತ್ಯಗಳಿಗೆ ಅವಕಾಶ ಕೊಡುವುದಕ್ಕಾಗಿ ಅದನ್ನು ಮಾಡಲಾಗಿದೆ. ಈ ವಿವರಣೆಯು ಡಾ. ಅಂಬೇಡ್ಕರ್ ಅವರನ್ನು ಸಂತುಷ್ಟಗೊಳಿಸುತ್ತದೆ ಮತ್ತು 'ಗುಂಪು' ಎಂಬ ಶಬ್ದವನ್ನು ಕೈ ಬಿಟ್ಟಿರುವುದಕ್ಕೆ ಅವರ ಆಕ್ಷೇಪವೇನೂ ಇರುವುದಿಲ್ಲ ಎಂದು ನಾನು ನಂಬುತ್ತೇನೆ.

ಮಂಡಿಸಲಾದ ಈ ನಿರ್ಣಯದಲ್ಲಿ ಗೌರವಾನ್ವಿತ ಮಂಡನೆಕಾರರು ಬಹಳ ಬಿಚ್ಚುಮನಸ್ಸಿನಿಂದ ಎಲ್ಲವನ್ನೂ ಪ್ರಕಟಿಸಿಬಿಟ್ಟಿದ್ದಾರೆ. ಇಲ್ಲಿ ಯಾವ ಕಣ್ಣಾಮುಚ್ಚಾಲೆಯೂ ಇಲ್ಲ. ರಾಜ್ಯಗಳು ಮತ್ತು ಪ್ರಾಂತ್ಯಗಳು ಒಂದೇ ನೋಟದಲ್ಲಿ ನೋಡಲು ಅನುಕೂಲವಾಗುವಂತೆ ಎಲ್ಲ ಅಂಶಗಳನ್ನೂ ಮುಂದಿರಿಸಲಾಗಿದೆ. ಮಾನ್ಯರೆ, ರಾಜ್ಯಗಳ ಸಂವಿಧಾನ ಸಮಿತಿಯ ಕಾರ್ಯದರ್ಶಿ ಅವರು ಈ ನಿರ್ಣಯವನ್ನು ಆಕ್ಷೇಪಿಸಿ ಒಂದು ಹೇಳಿಕೆಯನ್ನು ನೀಡಿದ್ದಾರೆ ಎನ್ನುವುದನ್ನು ನಾನು ಗಮನಿಸಿದ್ದೇನೆ. ಅವರ ಆಕ್ಷೇಪಗಳು ಎರಡು ಅಂಶಗಳ ಮೇಲೆ ಆಧರಿಸಿವೆ. ಮೊದಲನೆಯದಾಗಿ ಅವರು 'ಸ್ವತಂತ್ರ ಸಾರ್ವಭೌಮ ಗಣರಾಜ್ಯ' ಎಂಬ ಪರಿಭಾಷೆಗೆ ಆಕ್ಷೇಪ ಮಾಡಿದ್ದಾರೆ. ಎರಡನೆಯದಾಗಿ, ಜನರಿಂದ ಅಧಿಕಾರವು ನಿಷ್ಪನ್ನವಾಗುತ್ತದೆ ಎಂಬ ಅಂಶದ ಸುತ್ತ ಅವರ ಆಕ್ಷೇಪವು ಕೇಂದ್ರೀಕೃತವಾಗಿದೆ. ಭಾರತೀಯ ರಾಜ್ಯಗಳಲ್ಲಿ ಜನರಿಂದ ಅಧಿಕಾರವು ನಿಷ್ಪನ್ನವಾಗುತ್ತದೆ ಎನ್ನುವುದನ್ನು ಅವರು ಒಪ್ಪಿಕೊಳ್ಳುವುದಿಲ್ಲ. ಮಾನ್ಯರೆ, ಸಂಪುಟ ನಿಯೋಗದ ಹೇಳಿಕೆಯ ೧೪ನೇ ಕಂಡಿಕೆಯು ವಿಧಿಸುವುದೇನೆಂದರೆ ಬ್ರಿಟಿಷರು ಹಿಂದೆ ಹೋದ ಮೇಲೆ, ಪರಮಾಧಿಕಾರವು ಕಣ್ಮರೆಯಾಗುತ್ತದೆ. ಗ್ರೇಟ್

ಬ್ರಿಟನ್‌ನಲ್ಲಿ ಶಾಸನಗಳು ಮನ್ನಿಸುವುದೇನೆಂದರೆ ಅಧಿಕಾರವು ಜನರಿಂದ ಹೊರಹೊಮ್ಮುತ್ತದೆ. ಸಂಸತ್ತು ಜನರಿಂದ ತನ್ನ ಅಧಿಕಾರವನ್ನು ನಿಷ್ಪನ್ನಗೊಳಿಸಿಕೊಳ್ಳುತ್ತದೆ ಮತ್ತು ಅದೇ ಸಂಸತ್ತು ಪರಮಾಧಿಕಾರವನ್ನು ಪ್ರಯೋಗಿಸುತ್ತದೆ. ಪರಿಸ್ಥಿತಿ ಹೀಗಿರುವಾಗ, ರಾಜ್ಯಗಳ ದೊರೆಗಳು ಮತ್ತು ಅವರ ಪ್ರತಿನಿಧಿಗಳು ಈ ಅಭಿವ್ಯಕ್ತಿಗಳಿಗೆ ಏಕೆ ಆಕ್ಷೇಪ ವ್ಯಕ್ತಪಡಿಸುತ್ತಾರೋ ಎಂದು ನನಗೆ ಯಾವ ಕಾರಣವೂ ಕಾಣುತ್ತಿಲ್ಲ. ಮಾನ್ಯರೆ, ಬ್ರಿಟಿಷರು ನಿರ್ಗಮಿಸಿದ ಮೇಲೆ ಭಾರತವು ಗಣರಾಜ್ಯದ ಹೊರತಾಗಿ ಬೇರೆ ಯಾವುದೇ ಸ್ವರೂಪದ ರಾಷ್ಟ್ರವನ್ನು ಕುರಿತು ಯೋಚಿಸಬಹುದು ಎಂದು ಯಾರಾದರೂ ಭಾವಿಸುವುದಕ್ಕೆ ಕಾರಣವೇ ಇಲ್ಲ. ಗಣರಾಜ್ಯವೆಂದರೆ ರಾಜ್ಯಗಳನ್ನು ಅಳಿಸಿಹಾಕಿಬಿಡುವುದು ಎಂದು ಅರ್ಥ ಮಾಡಿಕೊಳ್ಳಬೇಕಾದ ಅಗತ್ಯವಿಲ್ಲ. ಅಂತಹ ಭೀತಿ ನಿರಾಧಾರವಾದದ್ದು. ಈ ವಿಚಾರಗಳು ಸಂಧಾನಕ್ಕೆ ಬಿಟ್ಟವು ಎಂದು ಸಂಪುಟ ನಿಯೋಗದ ಹೇಳಿಕೆಯು ವಿಧಿಸುತ್ತದೆ. ನೇರವಾಗಿ ಹೇಳುವುದಾದರೆ, ಯಾವುದೇ ಭಯಗಳಿಗೆ ಯಾವ ಕಾರಣವೂ ಇಲ್ಲ. ಅವರು ಅವರ ಸಂಧಾನ ಸಮಿತಿಯನ್ನು ನೇಮಿಸಿದ್ದಾರೆ. ನಾವು ನಮ್ಮ ಸಂಧಾನ ಸಮಿತಿಯನ್ನು ನೇಮಕ ಮಾಡಬೇಕು. ಈ ರೀತಿಯಲ್ಲಿ ಇಡೀ ಸಂಗತಿಯನ್ನು ಸಂಧಾನಕ್ಕೆ ಬಿಡಲಾಗಿದೆ.

ಈ ನಿರ್ಣಯವನ್ನು ಕುರಿತು ಇಷ್ಟೆಲ್ಲಾ ಮಾತನಾಡಿದ ಮೇಲೆ ಹೌಸ್ ಆಫ್ ಕಾಮನ್ಸ್‌ನಲ್ಲಿ ಮಾಡಲಾದ ಕೆಲವು ಹೇಳಿಕೆಗಳ ಪ್ರಶ್ನೆಗೆ ನಾನು ಬರುತ್ತೇನೆ. ಮಾನ್ಯರೆ, ತಮಗೆ ತಿಳಿದಿರುವಂತೆ ಬ್ರಿಟಿಷ್ ಸಂಸತ್ತಿನಲ್ಲಿ ಭಾರತವನ್ನು ಕುರಿತ ಚರ್ಚೆಗೆ ಒತ್ತುಕೊಟ್ಟಿದ್ದು ಕನ್ಸರ್ವಟಿವ್ ಪಕ್ಷ. ಆ ಪಕ್ಷದ ನಾಯಕರು ಮತ್ತು ಆ ಪಕ್ಷದ ಇತರ ಅನೇಕ ಪ್ರಮುಖ ನಾಯಕರು ಈ ಚರ್ಚೆಗೆ ಕೊಡುಗೆ ನೀಡಿದರಾದರೂ ಈ ಹಂತದಲ್ಲಿ ಚರ್ಚೆ ನಡೆಸುವುದು ದುರದೃಷ್ಟಕರ ಎಂದು ಲೇಬರ್ ಮತ್ತು ಲಿಬರಲ್‌ಗಳು ಹೇಳಿದರು. ಮಾನ್ಯರೆ, ಕನ್ಸರ್ವಟಿವ್ ಪಕ್ಷದ ಪ್ರಮುಖ ನಾಯಕರು ಇದು ಜಾತ್ಯಸ್ಥ ಹಿಂದೂಗಳ ಸಂವಿಧಾನ ರಚನಾಸಭೆ ಎಂದು ಹೇಳಿದರು. ಭಾರತದಲ್ಲಿನ ಅಲ್ಪಸಂಖ್ಯಾತ ಸಮುದಾಯಗಳ ಪ್ರತಿನಿಧಿಗಳು ಈ ಅಸಮರ್ಥನೀಯ ಸೂಚನೆಗೆ ಆಗಲೇ ತಮ್ಮ ಉತ್ತರವನ್ನು ಕೊಟ್ಟಿರುವುದಕ್ಕೆ ನನಗೆ ಬಹಳ ಸಂತೋಷವಾಗಿದೆ. ಸ್ವದೇಶಿ ಬಳಕೆಗೆ ಮತ್ತು ವಿದೇಶದ ಬಳಕೆ ಮತ್ತು ಪ್ರಚಾರಕ್ಕೆ ತಯಾರಿಸಲಾದ ಈ ಸಲಹೆಗೆ ಅಲ್ಪಸಂಖ್ಯಾತರ ಇತರ ಪ್ರತಿನಿಧಿಗಳು ತಮ್ಮ ಭಾಷಣಗಳ ಮೂಲಕ ಒಂದು ಯೋಗ್ಯವಾದ ಅಂತ್ಯ ಸಂಸ್ಕಾರ ಮಾಡುತ್ತಾರೆ ಎಂದು ನಾನು ನಿರೀಕ್ಷಿಸುತ್ತೇನೆ. ಮಾನ್ಯರೆ, ಈ ಮಹಾನ್ ಸಭೆಯಲ್ಲಿ ಹಿಂದೂ ಬಹುಸಂಖ್ಯಾತರಿರುವ ಪ್ರಾಂತ್ಯಗಳ ಹಿಂದೂ ಜನಾಂಗದ ಪ್ರತಿನಿಧಿಗಳಷ್ಟೇ ಅಲ್ಲದೆ ಮುಸ್ಲಿಮರು ಬಹುಸಂಖ್ಯಾತರಿರುವ ಪ್ರಾಂತ್ಯಗಳು ಹಿಂದೂ ಅಲ್ಪ ಸಂಖ್ಯಾತರ ಪ್ರತಿನಿಧಿಗಳೂ ಇದ್ದಾರೆ. ಅಲ್ಲದೆ ನಾವು ಅನುಸೂಚಿತ ಜಾತಿಗಳು, ಕ್ರೈಸ್ತರು, ಸಿಖ್ಖರು, ಪಾರ್ಸಿಗಳು, ಆಂಗ್ಲೋ ಇಂಡಿಯನ್ನರು ಮತ್ತು ಬುಡಕಟ್ಟು ಜನಾಂಗದವರು ಹಾಗೂ ಭಾಗಶಃ ಹೊರಚ್ಚಾಗಿರುವ ಪ್ರದೇಶಗಳ ಪ್ರತಿನಿಧಿಗಳನ್ನೂ ಹೊಂದಿದ್ದೇವೆ. ಅಲ್ಲದೆ ಮುಸ್ಲಿಮ್ ಲೀಗ್‌ನ ನಾಯಕರನ್ನು ಹೊರತುಪಡಿಸಿ ಮಹಾನ್ ಮುಸ್ಲಿಮ್ ಸಮುದಾಯದ ಪ್ರತಿನಿಧಿಗಳನ್ನೂ ನಮ್ಮೊಡನೆ ಹೊಂದಿದ್ದೇವೆ. ಇಂತಹ ಸನ್ನಿವೇಶದಲ್ಲಿ ಈ ಮಹಾನ್ ಸಭೆಯನ್ನು, ಮಹಾನ್ ಭಾರತ ದೇಶದ ಪ್ರತಿನಿಧಿಗಳನ್ನು ಜಾತ್ಯಸ್ಥ ಹಿಂದೂಗಳ ಸಂಸ್ಥೆ ಎಂದು ಕರೆಯುವುದು ಅತ್ಯಂತ ಆಯುಕ್ತವಾದದ್ದು ಮತ್ತು ದುರದೃಷ್ಟಕರವಾದದ್ದು. ಮತ್ತು ಇದಕ್ಕಾಗಿ ಬ್ರಿಟಿಷ್ ಸಂಸತ್ತಿನ ವೇದಿಕೆಯನ್ನು ವಿದೇಶ ಪ್ರಚಾರಕ್ಕೆ ಬಳಸಿಕೊಂಡಿದ್ದು ಮತ್ತಷ್ಟು ಅನ್ಯಾಯ. ಸಂಸತ್ತಿನ ಉಪನ್ಯಾಸಗಳಲ್ಲಿ ಅಲ್ಪಸಂಖ್ಯಾತರ ವಿಷಯವಾಗಿ ಸಾಕಷ್ಟು ಮಾತನಾಡಲಾಗಿದೆ. ಅಲ್ಪಸಂಖ್ಯಾತರಿಲ್ಲದ ದೇಶ ಯಾವುದು ಎಂದು ನಾನು ತಿಳಿಯಲು ಬಯಸುತ್ತೇನೆ. ಇಂಗ್ಲೆಂಡಿನಲ್ಲಿ ಕೂಡ ತನ್ನದೇ ಆದ ಅಲ್ಪಸಂಖ್ಯಾತರಿದ್ದಾರೆ. ವೆಲ್ಷರು ಅಲ್ಪಸಂಖ್ಯಾತರಲ್ಲವೆ? ಸ್ಕಾಟರು ಕೂಡ ಅಷ್ಟೇ. ವೆಲ್ಷ್ ಜನರು ವಿಭಿನ್ನ ಜನಾಂಗ ಮತ್ತು ಭಾಷೆಗೆ ಸೇರಿದವರು ಮತ್ತು ಅವರು ಬ್ರಿಟಿಷರಿಗಿಂತ ಖಂಡಿತವಾಗಿ ಪ್ರತ್ಯೇಕವಾದವರು. ಅಮೆರಿಕದಲ್ಲಿ ಭಾಷಿಕ ಮತ್ತು ಜನಾಂಗೀಯವಾದ ಅಲ್ಪಸಂಖ್ಯಾತರಿದ್ದಾರೆ. ರಷ್ಯಾದಲ್ಲಿ ಕೂಡ ಹೀಗೆಯೇ. ಇಂತಹ ಸನ್ನಿವೇಶಗಳಲ್ಲಿ

ಇಂಗ್ಲೆಂಡಿನಲ್ಲಿರುವ ಕನ್ಸರ್ವಟಿವ್ ನಾಯಕರು ಈ ದೇಶದ ವಿರುದ್ಧ ಮತ್ತು ಈ ಸಂವಿಧಾನ ರಚನಾಸಭೆಯ ವಿರುದ್ಧ ಪ್ರಚಾರ ಮಾಡುತ್ತಿರುವುದು ಅನ್ಯಾಯ. ಶ್ರೀ ಜಿನ್ನಾ ಮತ್ತು ಶ್ರೀ ಚರ್ಚಿಲ್ ಅವರು ವಿಚಿತ್ರವಾದ ಗೆಳೆಯರಾಗಿದ್ದಾರೆ ಎನ್ನುವುದು ಸ್ಪಷ್ಟವಾಗಿ ಗೋಚರವಾಗುತ್ತದೆ. ಶ್ರೀ ಜಿನ್ನಾ ಅಂತಹ ಮುತ್ಸದ್ದಿ ಕನ್ಸರ್ವಟಿವ್ ಅವರ ಬಲೆಗೆ ಅದರಲ್ಲೂ ವಿಶೇಷವಾಗಿ ಶ್ರೀ ಚರ್ಚಿಲ್ ಅವರ ಬಲೆಗೆ ಬಿದ್ದಿರುವುದು ನನಗೆ ಅತ್ಯಂತ ಆಶ್ಚರ್ಯಕರವಾಗಿದೆ. ಪ್ರತಿಯೊಂದು ಅವಲಂಬಿತ ದೇಶದಲ್ಲೂ ಕನ್ಸರ್ವಟಿವ್ ಪಕ್ಷವು ವ್ಯಕ್ತಿಗಳು ಮತ್ತು ಸಂಸ್ಥೆಗಳನ್ನು ಹೇಗೆ ಬಳಸಿಕೊಂಡಿದೆ ಎಂದು ಪ್ರತಿಯೊಬ್ಬರಿಗೂ ಗೊತ್ತು ಮತ್ತು ಇತಿಹಾಸವು ಬಯಲುಮಾಡಿದೆ. ಪರಿಸ್ಥಿತಿ ಹೀಗಿರುವಾಗ ಶ್ರೀ ಜಿನ್ನಾ ಅವರಿಗೆ ತಮ್ಮನ್ನು ಹಾಗೂ ಲೀಗ್ ಅನ್ನು ಬ್ರಿಟಿಷ್ ಕನ್ಸರ್ವಟಿವ್ ಅವರು ಹೇಗೆ ಬಳಸಿಕೊಂಡಿದ್ದಾರೆ ಎಂದು ಮನಗಾಣುವುದು ಸುಲಭ. ಆದ್ದರಿಂದ ಯಾರನ್ನು ಯಾರು ಎಷ್ಟರಮಟ್ಟಿಗೆ ಬಳಸಿಕೊಳ್ಳುತ್ತಾರೆ ಎಂದು ನೋಡುವುದು ನಮ್ಮ ಪಾಲಿಗೆ ಉಳಿದಿದೆ. ಕಟ್ಟಕಡೆಗೆ ಶ್ರೀ ಜಿನ್ನಾ ವಿವೇಕಿಯಾಗಿ ಮತ್ತು ಸ್ತಿಮಿತತೆಯಿಂದ ಹೊರಬರುತ್ತಾರೆ ಎನ್ನುವುದನ್ನು ಆಶ್ಚರ್ಯಚಕಿತರಾಗಿ ನೋಡಿ ಕನ್ಸರ್ವಟಿವ್‌ಗಳೇ ತೆರಬೇಕಾಗುತ್ತದೆ ಎಂದು ನಾವು ನಿರೀಕ್ಷಿಸೋಣ.

**ಗೌರವಾನ್ವಿತ ಪಂಡಿತ್ ಹೃದಯನಾಥ್ ಕುಂಜ್ರು** (ಸಂಯುಕ್ತ ಪ್ರಾಂತ್ಯಗಳು : ಸಾಮಾನ್ಯ) : ಮಾನ್ಯ ಅಧ್ಯಕ್ಷರೆ, ಈ ಸದನದಲ್ಲಿ ಮಾಡಲಾದ ಕೆಲವು ಭಾಷಣಗಳಿಂದ ತೀರ್ಮಾನಿಸುವುದಾದರೆ, ಸದನದ ಮುಂದಿರುವ ಈ ತಿದ್ದುಪಡಿಯನ್ನು ದ್ವೇಷದ ಮನೋಭಾವನೆಯಿಂದ ಸ್ಫೂರ್ತಗೊಂಡದ್ದು ಎಂದು ಕೆಲವು ಭಾಷಣಕಾರರು ಭಾವಿಸಿರುವಂತೆ ತೋರುತ್ತದೆ. ಆದರೆ, ನನ್ನ ದೃಷ್ಟಿಯಲ್ಲಿ ಅದರ ಉದ್ದೇಶವು ತಡೆಯನ್ನುಂಟುಮಾಡುವುದಲ್ಲ. ಬದಲಿಗೆ ಈ ಸಭೆಯ ಕೆಲಸವನ್ನು ಸುಗಮಗೊಳಿಸುವುದು. ಆದರ ಉದ್ದೇಶವು ನಮ್ಮ ಮುಂದೆ ನಾವು ಇಟ್ಟುಕೊಂಡಿರುವ ಮಹಾನ್ ಗುರಿಯನ್ನು ಕ್ಷಿಪ್ರವಾಗಿ ಮತ್ತು ಸರಾಗವಾಗಿ ಅರ್ಥಮಾಡಿಕೊಳ್ಳಲು ನಮ್ಮನ್ನು ಸಮರ್ಥರನ್ನಾಗಿಸುವ ವಾತಾವರಣವನ್ನು ನಿರ್ಮಿಸುವುದು. ಡಾ. ಜಯಕರ್ ಮಂಡಿಸಿದ ತಿದ್ದುಪಡಿಯ ಬಗೆಗೆ ಸಹಾನುಭೂತಿಯುಳ್ಳ ಜನರು ಈ ಸದನದ ಪ್ರತಿಯೊಂದು ಮೂಲೆಯಲ್ಲೂ ಇದ್ದಾರೆ ಎಂದು ಹೇಳಿದರೆ ನಾನು ಅಂಥಾ ತಪ್ಪನ್ನೇನೂ ಮಾಡಿದಂತಾಗುವುದಿಲ್ಲ ಎಂದು ಭಾವಿಸುತ್ತೇನೆ. ಈ ತಿದ್ದುಪಡಿಯ ಉದ್ದೇಶವು ನಮ್ಮ ದಾರಿಯಲ್ಲಿ ಅನಗತ್ಯವಾದ ಅಡಚಣೆಗಳನ್ನು ಇರಿಸುವುದಲ್ಲ ಬದಲಿಗೆ ನಿಶ್ಚಿತವಾದ ಯಶಸ್ಸಿನತ್ತ ದಾರಿಯನ್ನು ಸುಗಮಗೊಳಿಸುವುದು ಎಂದು ಪ್ರತಿಯೊಬ್ಬ ಪೂರ್ವಾಗ್ರಹರಹಿತ ವ್ಯಕ್ತಿಯನ್ನೂ ಮನಗಾಣಿಸಲು ಈ ನಿಜ ಸಂಗತಿಯೇ ಸಾಕು. ನಾನು ಇನ್ನೂ ಮುಂದುವರಿದು ಹೇಳುವುದಾದರೆ, ಸುದ್ದಿಪತ್ರಿಕೆಗಳ ವರದಿಗಳು ನಿಜವಾಗಿದ್ದರೆ. ಈ ಸಭೆಯ ಮುಂದಿನ ಅಧಿವೇಶನವು ಜನವರಿಯ ಕಡೆಯ ಭಾಗದಲ್ಲಿ ನಡೆಯಲಿದ್ದು, ಮನೋವೈಜ್ಞಾನಿಕ ಆಧಾರಗಳ ಮೇಲೆ ಹೇಳುವುದಾದರೆ, ಪ್ರಮುಖ ಪ್ರಶ್ನೆಗಳ ಮೇಲಿನ ತೀರ್ಮಾನವನ್ನು ಮುಂದೂಡಬೇಕೆಂದು ಸದನವು ಭಾವಿಸುತ್ತದೆ ಎಂದು ಕಂಡುಬರುತ್ತದೆ. ಅಂತಹ ನಡೆಯ ಉದ್ದೇಶ ಒಂದೇ. ನಾವು ತೆಗೆದುಕೊಳ್ಳುವ ಯಾವುದೇ ನಿರ್ಣಯಗಳಿಂದ ಯಾರ ಹಿತಸಕ್ತಿಗಳ ಮೇಲೆ ಪರಿಣಾಮವಾಗುವುದೋ ಅಂತಹವರಿಗೆ ಆ ನಿರ್ಣಯಗಳನ್ನು ತೆಗೆದುಕೊಳ್ಳುವ ಮುನ್ನ ತಮ್ಮ ಅಭಿಪ್ರಾಯಗಳನ್ನು ಅಭಿವ್ಯಕ್ತಿಸಲು ಒಂದು ಅವಕಾಶವನ್ನು ಕೊಡುವುದನ್ನು ಖಚಿತಪಡಿಸುವುದು. ಈ ನಿರ್ಧಾರಕ್ಕೆ ಕಾರಣರಾದವರನ್ನೆಲ್ಲ ನಾನು ಅಭಿನಂದಿಸುತ್ತೇನೆ. ನಮ್ಮ ಇಚ್ಛೆಯನ್ನು ಯಾವುದೇ ಭಾಗ ಅಥವಾ ಸಮುದಾಯದ ಮೇಲೆ ಹೇರಲು ನಾವು ಬಯಸುವುದಿಲ್ಲ ಎಂದು ಭಾರತದ ಜನರ ಪ್ರತಿಯೊಂದು ಭಾಗಕ್ಕೂ ಮನಗಾಣುವಂತೆ ಮಾಡುವುದು ನಮ್ಮ ಬುದ್ಧಿವಂತಿಕೆಯ ನಡೆಯಾಗುತ್ತದೆ. ಆದರೆ ನಾವು ಕೈಗೊಳ್ಳಲಿರುವ ಅಂತಹ ನಿರ್ಧಾರಗಳು ಸಮೂಹ ಚರ್ಚೆಯ ಫಲವಾಗಿರುತ್ತವೆ. ಅವುಗಳ ಏಕಮೇವ ಉದ್ದೇಶವು ಭಾರತವನ್ನು ತನ್ನ ಸ್ವಾತಂತ್ರ್ಯವನ್ನು ಗಳಿಸಲು ಸಮರ್ಥವನ್ನಾಗಿಸುವುದು ಮತ್ತು ಅಲ್ಪಸಂಖ್ಯಾತರು ಹಾಗೂ ಹಿಂದುಳಿದ ವರ್ಗಗಳ ನ್ಯಾಯಸಮ್ಮತವಾದ ಹಕ್ಕುಗಳನ್ನು ಸಂರಕ್ಷಿಸುವುದು. ನಾನು ಈಗಾಗಲೇ ಉಲ್ಲೇಖಿಸಿದ ನಿರ್ಧಾರಕ್ಕೆ ಕಾರಣರಾದವರಿಗಿಂತ

ಹೆಚ್ಚಿನದೇನನ್ನೂ ಮಾಡಲು ಈ ತಿದ್ದುಪಡಿಯು ಉದ್ದೇಶಿಸಿಲ್ಲ. ಸರ್ ರಾಧಾಕೃಷ್ಣನ್ ತಮ್ಮ ಪ್ರೇರಕವಾದ ಭಾಷಣದಲ್ಲಿ ನಿರರ್ಗಳವಾಗಿ ಪ್ರತಿಪಾದಿಸಿದ ಆ ಗ್ರಹಣಶಕ್ತಿಗಾಗಿ ಮಾತ್ರ ಅದು ನಿವೇದಿಸಿಕೊಳ್ಳುತ್ತದೆ. ಪ್ರಾಚೀನ ಭಾರತದ ನಾಗರಿಕತೆಯಲ್ಲಿ ಅದು ಪ್ರಮುಖ ಗುಣಲಕ್ಷಣಗಳಲ್ಲಿ ಒಂದಾಗಿದೆ ಎಂದೂ ಅವರು ಹೇಳಿದ್ದಾರೆ.

ಮಾನ್ಯರೆ, ಡಾ. ಶ್ಯಾಮಪ್ರಸಾದ್ ಮುಖರ್ಜಿ ನಿನ್ನೆ ನಮ್ಮನ್ನು ಕೇಳಿದರು: ತಿದ್ದುಪಡಿಯಲ್ಲಿ ಅಡಕವಾಗಿರುವ ಅಭಿಪ್ರಾಯವನ್ನು ಈ ಸದನವು ಅಂಗೀಕರಿಸಿದರೆ, ಅದು ದೀರ್ಘಕಾಲ ಏನನ್ನಾದರೂ ಮಾಡಲು ಸಮರ್ಥವಾಗುತ್ತದೆಯೆ? ಉದಾಹರಣೆಗೆ, ಒಕ್ಕೂಟದ ಸಂವಿಧಾನದ ಕರಡನ್ನು ರಚಿಸುವ ಕಾರ್ಯದಲ್ಲಿ ರಾಜ್ಯಗಳ ಪ್ರತಿನಿಧಿಗಳು ಭಾಗವಹಿಸಲು ಸಮರ್ಥರಾಗುವವರೆಗೆ ಅದು ಏನಾದರೂ ಮಾಡಲು ಸಾಧ್ಯವಾಗುತ್ತದೆಯೆ? ಈ ಆಕ್ಷೇಪಕ್ಕೆ ಏನಾದರೂ ಬಲವಿದೆಯೇ ಎಂದು ನನಗೆ ವೈಯಕ್ತಿಕವಾಗಿ ಅನ್ನಿಸುತ್ತಿಲ್ಲ. ಈ ಸದನದ ಮುಂದಿರುವ ನಿರ್ಣಯದಲ್ಲಿ ಯಾವ ಉದ್ದೇಶದ ಮೇಲೆ ಒತ್ತುಹೇರಲಾಗಿದೆಯೋ ಅದು ಈಡೇರಬೇಕೆಂದರೆ ಅದು ವ್ಯಾಪಕ ಪ್ರಮಾಣದಲ್ಲಿ ಸಾಧ್ಯವಾಗುವುದು ಒಕ್ಕೂಟದ ಸಂವಿಧಾನವನ್ನು ರಚಿಸಲಿರುವ ಒಕ್ಕೂಟದ ಸಂವಿಧಾನ ರಚನಾಸಭೆಯಿಂದ ಮಾತ್ರ.

ಈ ನಿರ್ಣಯವು ಕೆಲಮಟ್ಟಿಗೆ ವಿಭಾಗ ಸಮಿತಿಗಳಿಗೆ ಮಾರ್ಗದರ್ಶನ ಮಾಡುತ್ತದೆ. ಆದರೆ ವಿಭಾಗ ಸಮಿತಿಗಳು ಕೂಡ ಮುಂದಿನ ಏಪ್ರಿಲ್ ಅಥವಾ ಮೇ ತಿಂಗಳಿಗಿಂತ ಮುಂಚೆ ಸೇರುವ ಸಂಭವವಿಲ್ಲ. ಏನೇ ಆಗಲಿ ಈ ನಿರ್ಣಯದಲ್ಲಿ ಅಳವಡಿಸಲಾಗಿರುವ ನಿರ್ದೇಶನದಿಂದ ಮಾರ್ಗದರ್ಶನ ಪಡೆಯುವ ಪ್ರಮುಖ ಸಂಸ್ಥೆಯು ಒಕ್ಕೂಟದ ಸಂವಿಧಾನ ರಚನಾಸಭೆಯಾಗಿದ್ದು, ಅದು ಸೇರುವುದು ವಿಭಾಗ ಸಮಿತಿಗಳು ತಮ್ಮ ಕಾರ್ಯವನ್ನು ಮಾಡಿದ ಅನಂತರ ಮಾತ್ರ. ಆದ್ದರಿಂದ ಸ್ಪಷ್ಟವಾಗುವ ಸಂಗತಿಯೇನೆಂದರೆ ಪಂಡಿತ್ ಜವಾಹರಲಾಲ್ ನೆಹರು ಅವರ ನಿರ್ಣಯದ ಮೇಲಿನ ಚರ್ಚೆಯನ್ನು ಮುಂದೂಡುವುದು ಸಭೆಯ ಕಾರ್ಯವನ್ನು ಕಿಂಚಿತ್ತೂ ಕುಂಠಿತಗೊಳಿಸುವುದಿಲ್ಲ. ಅದರ ಪ್ರಮುಖ ಉದ್ದೇಶವು ಒಕ್ಕೂಟದ ಸಂವಿಧಾನ ರಚನಾಸಭೆಯ ನಡವಳಿಗಳಿಗೆ ಮಾರ್ಗದರ್ಶನ ನೀಡುವುದಾಗಿರುವುದರಿಂದ, ಅದರ ಮೇಲಿನ ಚರ್ಚೆಯನ್ನು ಸ್ವಲ್ಪ ಕಾಲ ಮುಂದೂಡುವುದರಿಂದ ಯಾವ ಹಾನಿಯೂ ಆಗುವುದಿಲ್ಲ. ಮುಂದೂಡಿದರೆ, ಈ ನಿರ್ಣಯದಿಂದ ಯಾವ ವಿಭಾಗಗಳ ಹಿತಾಸಕ್ತಿಗಳ ಮೇಲೆ ಪರಿಣಾಮವುಂಟಾಗುತ್ತದೆಯೋ ಅವುಗಳಿಗೆ ತಮ್ಮ ಅಭಿಪ್ರಾಯಗಳನ್ನು ವ್ಯಕ್ತಪಡಿಸಲು ಒಂದು ಅವಕಾಶವನ್ನು ಕೊಟ್ಟಂತಾಗುತ್ತದೆ. ಈ ಸಭೆಯು ಕೂಡಲೇ ಈ ನಿರ್ಣಯವನ್ನು ಅಂಗೀಕರಿಸಿರುವುದರ ವಿರುದ್ಧ ಕೆಲವು ರಾಜ್ಯಗಳ ಪ್ರತಿನಿಧಿಗಳು ಈಗಾಗಲೇ ಪ್ರತಿಭಟಿಸಿದ್ದಾರೆ. ಅವರ ಅಭಿಪ್ರಾಯ ಸರಿಯಾಗಿರಬಹುದು ಅಥವಾ ತಪ್ಪಾಗಿರಬಹುದು. ಅದು ನಮಗೆ ಸ್ವಲ್ಪವೂ ಸಂಬಂಧಿಸಿದ್ದಲ್ಲ. ನಮಗೆ ಸಂಬಂಧಿಸಬೇಕಾದದ್ದು ಏನೆಂದರೆ, ಈ ನಿರ್ಣಯವು ಕೂಡಲೇ ಅಂಗೀಕೃತವಾದರೆ ಅದು ಒಂದು ಏಕಪಕ್ಷೀಯವಾದ ತೀರ್ಮಾನವಾಗುತ್ತದೆ ಎನ್ನುವುದು. ಈ ನಿರ್ಣಯದಲ್ಲಿ ಸ್ಥೂಲವಾಗಿ ವಿವರಿಸಲಾದ ಉದ್ದೇಶಗಳನ್ನು ದೃಢೀಕರಿಸಲು ಈ ಸದನಕ್ಕೆ ಮುಂದೆ ಸಾಕಷ್ಟು ಅವಕಾಶ ದೊರೆಯುತ್ತದೆ. ಈ ನಿರ್ಣಯವನ್ನು ಮುಂದೂಡುವುದೆಂದರೆ ಅದರಲ್ಲಿ ಅಳವಡಿಸಲಾಗಿರುವ ಉದ್ದೇಶಗಳನ್ನು ಹೊಡೆದು ನಾಶಮಾಡುವುದು ಎಂದು ಅರ್ಥವಲ್ಲ. ದಿಟದಲ್ಲಿ, ಸ್ವಲ್ಪ ವಿಳಂಬವಾದರೆ ಈ ಪ್ರಮುಖ ವಿಷಯವನ್ನು ಕುರಿತು ವ್ಯವಹರಿಸಲು ನಮ್ಮ ಕೈಯನ್ನು ಬಲಪಡಿಸಿದಂತಾಗುತ್ತದೆ ಎಂದು ನಾನು ಭಾವಿಸುತ್ತೇನೆ.

ಮಾನ್ಯರೆ, ನಿನ್ನೆ ಡಾ. ಶ್ಯಾಮಪ್ರಸಾದ್ ಮುಖರ್ಜಿ ನಮ್ಮ ಮುಂದೆ ಇರಿಸಿದ ಇನ್ನೊಂದು ಸಾಕಷ್ಟು ಪ್ರಮುಖವಾದ ಪ್ರಶ್ನೆ ಇದೆ. ಈ ಸಭೆಯ ಕಾರ್ಯದಲ್ಲಿ ಭಾಗವಹಿಸಲು ಮುಸ್ಲಿಮರು ಒಪ್ಪುವವರೆಗೂ ಏನನ್ನೂ ಮಾಡಬಾರದು ಎಂಬ ನಿಲುವನ್ನು ನಾವು ಒಪ್ಪಿಕೊಂಡಿದ್ದೇವೆಯೇ ಎಂದು ಅವರು ನಮ್ಮನ್ನು ಕೇಳಿದರು. ತಿದ್ದುಪಡಿಯ ವಿರೋಧಕ್ಕೆ ನಿಜವಾದ ಕಾರಣವೆಂದರೆ ಡಾ. ಶ್ಯಾಮಪ್ರಸಾದ್ ಮುಖರ್ಜಿಯವರು ಧ್ವನಿ ನೀಡಿದ ಈ ಭಾವನೆಯೇ ಎಂದು ನಾನು ಭಾವಿಸುತ್ತೇನೆ. ಅದೆಂದರೆ ಈ ನಿರ್ಣಯವನ್ನು ಯಾವುದೇ

ರೀತಿಯಲ್ಲಿ ಮುಂದೂಡಿದರೂ ಈ ಸಭೆಯ ಕೆಲಸವು ಸ್ಥಗಿತಗೊಳ್ಳುತ್ತದೆ. ಇಂತಹ ಭಾವನೆಗಳನ್ನು ಇಟ್ಟುಕೊಂಡಿರುವ ಡಾ. ಜಯಕರ್ ಈ ಸಮಯದಲ್ಲಿ ಸಂವಿಧಾನ ರಚನಾಸಭೆಗೆ ಬರಲು ಒಪ್ಪಿಕೊಂಡಿದ್ದಾದರೂ ಹೇಗೆ ಎಂದು ಮುಖರ್ಜಿ ಅವರನ್ನು ಭಾವೋತ್ತೇಜಕವಾಗಿ ಪ್ರಶ್ನಿಸಿದ್ದಾರೆ. ಮಾನ್ಯರೆ, ಈ ಸಭೆಯನ್ನು ನಡೆಸುವುದನ್ನು ಅನಿರ್ದಿಷ್ಟಕಾಲ ಮುಂದೂಡಬೇಕೆಂಬ ಸಲಹೆಗೆ ಯಾವುದೇ ರೀತಿಯ ಅನುಮೋದನೆಯನ್ನು ನೀಡುವುದು ಅತ್ಯಂತ ಅವಿವೇಕದ ಕೆಲಸ ಎಂದು ನಾನು ಭಾವಿಸುತ್ತೇನೆ. ಈ ಸಭೆಯನ್ನು ಮೂಲತಃ ನಿಗದಿಪಡಿಸಿದ ದಿನಾಂಕದಂದೇ ನಡೆಸಬೇಕೆಂದು ವೈಸ್‌ರಾಯ್ ಅವರನ್ನು ಒತ್ತಾಯಪಡಿಸುವಲ್ಲಿ ನಾವು ಬಹಳಷ್ಟನ್ನು ಸಾಧಿಸಿದ್ದೇವೆ, ಎಂದು ನಾನು ಭಾವಿಸುತ್ತೇನೆ. ಸಭೆಯನ್ನು ಕರೆಯದೆ ಹೋಗಿದ್ದರೆ ಅದರ ಭವಿಷ್ಯವು ಕಾರ್ಯಾಂಗದ ವಿವೇಚನೆಯ ಮೇಲೆ ಅವಲಂಬಿಸಿರುತ್ತಿತ್ತು. ಆದರೆ ಆ ವಿವೇಚನೆಯು ಈಗ ವೈಸ್‌ರಾಯ್ ಕೈಯಿಂದ ದಾಟಿದೆ ಅಥವಾ ಬ್ರಿಟಿಷ್ ಸರ್ಕಾರದ ವ್ಯಾಪ್ತಿಯಿಂದಲೂ ಆಚೆಗೆ ದಾಟಿದೆ. ಈಗ ಅದು ಈ ಸಭೆಯ ಅಳವಿನಲ್ಲಿದೆ ಮತ್ತು ನಿಮ್ಮ ಕೈಯಲ್ಲಿದೆ ಮಾನ್ಯರೆ, ಇದರ ಮುಂದಿನ ಅಧಿವೇಶನವು ಯಾವಾಗ ನಡೆಯಬೇಕು ಅಥವಾ ಹೇಗೆ ಮತ್ತು ಯಾವ ಹಂತಗಳಲ್ಲಿ ಅದರ ಕೆಲಸಗಳನ್ನು ಮುಕ್ತಾಯದ ಹಂತಕ್ಕೆ ತರಬೇಕು ಎಂದು ನಿರ್ಧರಿಸುವವರು ನೀವು ಮತ್ತು ಈ ಸಭೆ. ಮಾನ್ಯರೆ, ಈ ಸಭೆಯು ಮುಸ್ಲಿಮರ ಅನುಪಸ್ಥಿತಿಯಲ್ಲಿ ಏನಾದರೂ ಕಾರ್ಯವನ್ನು ಮಾಡಬಹುದೇ ಎಂಬ ಪ್ರಶ್ನೆಗೆ ನನ್ನ ಉತ್ತರ ಸಂಕ್ಷಿಪ್ತವಾಗಿದೆ. ನಮ್ಮ ಮುಂದಿರುವ ನಿರ್ಣಯವನ್ನು ಕುರಿತ ಚರ್ಚೆಯಲ್ಲಿ ಮುಸ್ಲಿಮ್ ಲೀಗ್ ಮತ್ತು ಭಾರತದ ರಾಜ್ಯಗಳು ಭಾಗವಹಿಸುವ ಹಕ್ಕನ್ನು ನಾವು ಅಂಗೀಕರಿಸಿದರೆ ನಮ್ಮ ವಿಧಾಯಕ ಸಭೆಯ ಕಾರ್ಯಕ್ಕೆ ತಡೆಯೊಡ್ಡಲು ಅವರಿಗೆ ಸಂಪೂರ್ಣವಾದ ಅಧಿಕಾರವನ್ನು ಕೊಟ್ಟಂತಾಗುತ್ತದೆ ಎಂದು ಅನೇಕ ಭಾಷಣಕಾರರು ಭಾವಿಸಿಕೊಂಡಿದ್ದಾರೆ. ಇದು ಪ್ರಸ್ತುತ ಸ್ಥಿತಿಯ ತಪ್ಪು ತಿಳಿವಳಿಕೆಯನ್ನು ತೋರಿಸುತ್ತದೆ ಎಂದು ನಾನು ಭಾವಿಸುತ್ತೇನೆ. ಬ್ರಿಟಿಷ್ ಸರ್ಕಾರದ ವಕ್ತಾರರು ಹೌಸ್ ಆಫ್ ಕಾಮನ್ಸ್ ಮತ್ತು ಹೌಸ್ ಆಫ್ ಲಾರ್ಡ್ಸ್‌ಗಳಲ್ಲಿ ಮಾಡಿದ ಭಾಷಣಗಳಿಂದ ತೀರ್ಮಾನಿಸುವುದಾದರೆ, ಬ್ರಿಟಿಷ್ ಸರ್ಕಾರವು ಬಯಸುವುದೆಲ್ಲ ಪ್ರಾಂತೀಯ ಸಂವಿಧಾನ ಮತ್ತು ಗುಂಪುಗಳ ರಚನೆಗೆ ಸಂಬಂಧಿಸಿದಂತೆ ಅನುಸರಿಸಬೇಕಾದ ವಿಧಾನದಲ್ಲಿ ಸಹಮತವಿರಬೇಕು. ಮೇ ೧೬ರ ಹೇಳಿಕೆಯ ೧೯ನೇ ಕಂಡಿಕೆಯ ವ್ಯಾಖ್ಯಾನವೊಂದೇ ವಿವಾದದ ಅಂಶವಾಗಿದೆ. ಈ ವಿಷಯವನ್ನು ಅನತಿ ಕಾಲದಲ್ಲಿಯೇ ಫೆಡರಲ್ ನ್ಯಾಯಾಲಯಕ್ಕೆ ಸಲ್ಲಿಸಲಾಗುವುದು ಎಂದು ನನಗೆ ತಿಳಿದು ಬಂದಿದೆ. ಆದ್ದರಿಂದ ಕ್ಷಿಪ್ರದಲ್ಲಿಯೇ ಮುಸ್ಲಿಮ್ ಲೀಗ್‌ನವರು ಸಂವಿಧಾನ ರಚನಾಸಭೆಯಲ್ಲಿ ಭಾಗವಹಿಸಲು ಮಾರ್ಗವು ತೆರೆದುಕೊಳ್ಳುತ್ತದೆ ಎಂದು ನಾನು ನಿರೀಕ್ಷಿಸುತ್ತೇನೆ. ಹೇಗಾದರೂ ಮುಸ್ಲಿಮ್ ಲೀಗ್‌ನವರು ಸಭೆಯನ್ನು ಸೇರದೆ ಹೊರಗುಳಿದಿರುವುದಕ್ಕೆ ಇದು ಒಂದೇ ಆಧಾರವಲ್ಲ. ವಿಭಾಗ ಸಮಿತಿಗಳು ಅನುಸರಿಸಬೇಕಾದ ವಿಧಾನವನ್ನು ಕುರಿತು ಸಹಮತಕ್ಕೆ ಬಂದರೂ ಲೀಗ್ ಪ್ರತಿನಿಧಿಗಳು ಇಲ್ಲಿಗೆ ಬರುವುದಕ್ಕೆ ನಿರಾಕರಿಸುತ್ತಾರೆ. ಈ ಸಭೆಯ ನಡವಳಿಗಳನ್ನು ಅನಿರ್ದಿಷ್ಟ ಕಾಲದವರೆಗೆ ಮುಂದೂಡಬೇಕೆಂದು ಕೇಳಲು ಅವರಿಗೆ ಹಕ್ಕಿಲ್ಲ ಎಂದು ನಾನು ಭಾವಿಸುತ್ತೇನೆ.

ಡಿಸೆಂಬರ್ ೬ ರಂದು ಸಂಪುಟವು ಹೊರಡಿಸಿದ ಹೇಳಿಕೆಯ ಕೊನೆಯ ಕಂಡಿಕೆಯು ಸಾಕಷ್ಟು ಭೀತಿಯನ್ನು ಹುಟ್ಟಿಸಿದೆ. ಪ್ರಸ್ತುತ ರಾಜಕೀಯ ಸನ್ನಿವೇಶದಲ್ಲಿ ಸ್ಪಷ್ಟವಾದ ಸಂಗತಿ ಏನೆಂದರೆ ಈ ಸಭೆಯು ಸುಗಮವಾಗಿ ಕಾರ್ಯನಿರ್ವಹಿಸುವುದನ್ನು ಯಾರ ಹಿತಾಸಕ್ತಿಯಿಂದಾಗಿ ತಡೆಯಬೇಕು ಎನ್ನುವುದು ಉದ್ದೇಶವಾಗಿದೆಯೋ ಅವರಿಗೆ ಇದು ಅನುಕೂಲಕರವಾಗಿದೆ ಎಂದು ತೆಗೆದುಕೊಳ್ಳಬಹುದು. ಆದರೆ ಒಟ್ಟಾರೆಯಾಗಿ ನನಗೆ ತೋರುವುದೇನೆಂದರೆ ಹೌಸ್ ಆಫ್ ಕಾಮನ್ಸ್ ಮತ್ತು ಹೌಸ್ ಆಫ್ ಲಾರ್ಡ್ಸ್‌ಗಳಲ್ಲಿ ಮಾಡಲಾದ ಭಾಷಣಗಳು ಲೇಬರ್ ಸರ್ಕಾರದ ದುಷ್ಟ ಉದ್ದೇಶವನ್ನೇನೂ ಬಯಲು ಮಾಡಲಿಲ್ಲ. ಮೇ ೧೬ರ ಹೇಳಿಕೆಯಲ್ಲಿ ಇಲ್ಲದ ಯಾವುದೇ ಷರತ್ತಿಗೆ ಮುಸ್ಲಿಮರು ಒತ್ತಾಯ ಮಾಡಿದರೆ, ಅದನ್ನು ಒಪ್ಪಲು

ನಿರಾಕರಿಸಬೇಕು ಎಂಬ ಸರ್ದಾರ್ ವಲ್ಲಭಭಾಯಿ ಪಟೇಲರ ಅಭಿಪ್ರಾಯಕ್ಕೆ ನಾನು ಸಮ್ಮತಿಸುತ್ತೇನೆ. ಯಾವುದೇ ಪಕ್ಷದ ಹಠವಾದಿತನದಿಂದ ನಾವು ಆಶಾಭಂಗಗೊಳ್ಳುವುದಕ್ಕೆ ಅವಕಾಶ ಕೊಡಬಾರದು. ಅದರ ಎಲ್ಲ ಔಚಿತ್ಯಪೂರ್ಣವಾದ ಹಕ್ಕೊತ್ತಾಯಗಳನ್ನು ಗಣನೆಗೆ ತೆಗೆದುಕೊಳ್ಳಲು ನಾವು ಸಿದ್ಧರಾಗಿದ್ದೇವೆ. ಆದರೆ ಈ ಸಭೆಯ ಹಣೆಬರಹವನ್ನು ನಿರ್ಧರಿಸಲು ಅವರಿಗೆ ಅವಕಾಶ ಕೊಡುವುದನ್ನು ಯಾವ ಸಂದರ್ಭಗಳಲ್ಲೂ ನಾವು ಒಪ್ಪಿಕೊಳ್ಳಲಾರೆವು. ದುರದೃಷ್ಟವಶಾತ್ ಅಂತಹ ಸನ್ನಿವೇಶವು ಎದುರಾದರೆ ಬ್ರಿಟಿಷ್ ಸರ್ಕಾರಕ್ಕೆ, ಶ್ರೀ ಆ್ಯಟ್ಲೀ ನೀಡಿದ್ದ ಭರವಸೆಯನ್ನು ನೆನಪಿಸಲು ನಮಗೆ ಹಕ್ಕಿದೆ. ಅದೆಂದರೆ ದೇಶದ ಪ್ರಗತಿಗೆ ಅಲ್ಪ ಸಂಖ್ಯಾತರು ನಿರಾಕರಣಾಧಿಕಾರವನ್ನು (ವೀಟೋ) ಚಲಾಯಿಸಲು ಅವಕಾಶ ಕೊಡುವುದಿಲ್ಲ. ಭಾರತಕ್ಕೆ ಇರುವ ರಾಜ್ಯ ಕಾರ್ಯದರ್ಶಿಯವರು ಸ್ವತಃ ಈ ಪ್ರತಿಜ್ಞಾವಚನವನ್ನು ಪುನರುಚ್ಚರಿಸಿದ್ದಾರೆ. ಆದ್ದರಿಂದ, ನಾವು ಭಯಪಡಬೇಕಾದ ಅಗತ್ಯವಿಲ್ಲ. ಮೇ ೧೬ರ ಹೇಳಿಕೆಯ ೧೯ನೇ ಕಂಡಿಕೆಯ ವ್ಯಾಖ್ಯಾನಕ್ಕೆ ಸಂಬಂಧಿಸಿದಂತೆ ಒಂದು ಒಪ್ಪಂದಕ್ಕೆ ಬಂದಮೇಲೂ ಮುಸ್ಲಿಮ್ ಲೀಗ್ ಪ್ರತಿನಿಧಿಗಳು ಸಭೆಗೆ ಹಾಜರಾಗುವುದನ್ನು ಮುಂದೂಡಿದರೆ ಸಭೆಯ ಕಾರ್ಯವನ್ನು ತಡೆಹಿಡಿಯುವ ಅವರ ಹಠವಾದಿತನಕ್ಕೆ ಅವಕಾಶ ನೀಡಲಾಗುವುದಿಲ್ಲ. ಮಾನ್ಯರೆ, ಈ ಕಾರಣಗಳಿಂದ ನಾನು ನಮ್ಮ ಮುಂದೆ ಇರುವ ಈ ತಿದ್ದುಪಡಿಗೆ ಹೃತ್ಪೂರ್ವಕ ಬೆಂಬಲವನ್ನು ನೀಡುತ್ತೇನೆ. ಹೇಗಾದರೂ, ನನ್ನ ಬೆಂಬಲವನ್ನು 'ಗುಂಪುಗೂಡಿಸುವುದಕ್ಕೆ' ಸಂಬಂಧಿಸಿದ ಮೇ ೧೬ರ ಹೇಳಿಕೆಯಲ್ಲಿರುವ ಸಂಬಂಧಪಟ್ಟ ಖಂಡದ ಪರವಾಗಿ ನಾನು ಇದ್ದೇನೆಂದು ಸೂಚಿಸುತ್ತಿರುವುದಾಗಿ ತಪ್ಪಾಗಿ ಅರ್ಥಮಾಡಿಕೊಳ್ಳಬಾರದು. ಯಾವುದೇ ಒಂದು ಪ್ರಾಂತ್ಯವು ಒಂದು ಗುಂಪನ್ನು ಪ್ರವೇಶಿಸುವಂತೆ ಏಕೆ ಒತ್ತಾಯ ಮಾಡಬೇಕು ಎನ್ನುವುದಕ್ಕೆ ನನಗೆ ವೈಯಕ್ತಿಕವಾಗಿ ಯಾವ ಕಾರಣವೂ ಗೋಚರಿಸುತ್ತಿಲ್ಲ. ಯಾವುದೇ ಉದ್ದೇಶದಿಂದ ಅಸ್ಸಾಮನ್ನು ಬಂಗಾಳದೊಡನೆ ಸೇರಿಕೊಂಡು ಒಂದು ಸಾಮಾನ್ಯ ಸರ್ಕಾರವನ್ನು ರಚಿಸುವಂತೆ ಬಲಾತ್ಕರಿಸುವುದರಲ್ಲಿ ಯಾವುದೇ ರೀತಿಯ ವಿಶೇಷವಾದ ಸಮರ್ಥನೆಯನ್ನೂ ನಾನು ನೋಡುತ್ತಿಲ್ಲ. ನೌಖಾಲಿಯಲ್ಲಿ ಏನಾಯಿತು. ಇತ್ತೀಚೆಗೆ ಬಿಹಾರದಲ್ಲಿ ಸಂಭವಿಸಿದ ಶೋಚನೀಯ ಘಟನೆಗಳಿಗೆ ಯಾವುದು ಕಾರಣ ಎಂಬ ನೋಡಿದಾಗ ಅಸ್ಸಾಮಿನ ಜನರ ಭೀತಿಯ ಹೆಚ್ಚಳವು ಸಮರ್ಥನೀಯವಾಗಿದೆ. ಆದರೆ ಸಂಪುಟ ನಿಯೋಗವು ತನ್ನ ಹೇಳಿಕೆಯನ್ನು ಬಿಡುಗಡೆ ಮಾಡಿದ ದಿನದಿಂದಲೇ ಹೇಳುತ್ತಿರುವ ಗುಂಪುಗೂಡಿಸುವಿಕೆಯು ಅವರ ಯೋಜನೆಯ ಮುಖ್ಯವಾದ ಒಂದು ಲಕ್ಷಣವಾಗಿದೆ ಎಂದು ಹೇಳಬಹುದು. ಈ ವಿಷಯವನ್ನು ಒಪ್ಪದಿದ್ದರೆ, ಈ ಸ್ವರೂಪದ ಸಭೆಯು ತಾನು ಹೊಂದಿರಬೇಕಾದ ನೈತಿಕ ಅಧಿಕಾರವನ್ನು ಅನುಭವಿಸುವುದಿಲ್ಲ ಎಂದು ಅವರು ಒತ್ತಿಹೇಳುತ್ತಾರೆ. ನಮ್ಮ ದೃಷ್ಟಿಯಿಂದ ಇದು ತೃಪ್ತಿಕರವಲ್ಲ. ಅದರೆ ಮುಂದೆ ವಿಭಾಗ ಸಮಿತಿಗಳ ವರದಿಗಳು ನಮ್ಮ ಮುಂದೆ ಬಂದಾಗ, ಪ್ರಾಂತ್ಯಗಳ ಇಚ್ಛೆಗೆ ವಿರುದ್ಧವಾಗಿ ಗುಂಪುಗಳ ಸದಸ್ಯರಾಗಲು ಒತ್ತಾಯಮಾಡುತ್ತಿರುವ ಪರಿಸ್ಥಿತಿಯನ್ನು ಕುರಿತು ವ್ಯವಹರಿಸಲು ನಾವು ಸಮರ್ಥರಾಗುತ್ತೇವೆ. ಮಾನ್ಯರೆ, ನನ್ನ ವಶದಲ್ಲಿರುವ ಎಲ್ಲ ಶಕ್ತಿಯನ್ನು ಸೇರಿಸಿ ಮತ್ತೊಮ್ಮೆ ಹೇಳುತ್ತೇನೆ. ಇಚ್ಛೆ ಇಲ್ಲದ ಪ್ರಾಂತ್ಯಗಳನ್ನು ಗುಂಪಿನಲ್ಲಿ ಸೇರಲು ಬ್ರಿಟಿಷ್ ಸರ್ಕಾರವು ಒತ್ತಾಯಪಡಿಸುತ್ತಿರುವುದು ಸಂಪೂರ್ಣವಾಗಿ ನ್ಯಾಯಸಮ್ಮತವಲ್ಲ ಎಂದು ಸಹಜವಾಗಿಯೇ ಗೋಚರವಾಗುತ್ತದೆ. ಆದರೆ ಈಗಾಗಲೇ ನಾನು ಹೇಳದಂತೆ, ವಿಭಾಗ ಸಮಿತಿಗಳಿಂದ ಹೊರಹೊಮ್ಮುವ ಮತ್ತು ಮುಂದೆ ಒಕ್ಕೂಟದ ಸಂವಿಧಾನ ರಚನಾಸಭೆಯ ಸಂವಿಧಾನವನ್ನು ಪರಿಗಣಿಸಲು ನಮಗೆ ಸಮಯ ದೊರೆಯುತ್ತದೆ.

ಮಾನ್ಯರೆ, ಪ್ರಸ್ತುತ ನಮ್ಮ ಕಾಳಜಿ ಇರುವುದು ಈ ನಿರ್ಣಯವನ್ನು ಕುರಿತ ಚರ್ಚೆಯು ಈಗಲೇ ಮುಂದುವರಿಯಬೇಕೆ ಮತ್ತು ಅದನ್ನು ಮುಂದೂಡಿದರೆ ಏನಾದರೂ ಹಾನಿಯಾಗುತ್ತದೆಯೇ ಎನ್ನುವುದು. ಈ ಪ್ರಮುಖ ಪ್ರಶ್ನೆಯನ್ನು ಕುರಿತ ಚರ್ಚೆಯಲ್ಲಿ ಮುಸ್ಲಿಮ್ ಲೀಗ್ ಮತ್ತು ರಾಜ್ಯಗಳ ಪ್ರತಿನಿಧಿಗಳು ಭಾಗವಹಿಸಲು ಸಮರ್ಥರಾಗುವವರೆಗೆ ನಾವು ಕಾದರೆ ಯಾವುದೇ ರೀತಿಯ ಹಾನಿಯೂ ಸಂಭವಿಸುವುದಿಲ್ಲ ಎಂದು

ನಾನು ತೋರಿಸಿದ್ದೇನೆ. ಈ ನಿರ್ಣಯವನ್ನು ಈಗ ಅಂಗೀಕರಿಸಿದರೆ, ಈ ಆಸಕ್ತಿಗಳ ಪ್ರತಿನಿಧಿಗಳು, ಈ ನಿರ್ಣಯವನ್ನು ಅಂಗೀಕರಿಸುವ ಮೂಲಕ ಮೂಲಭೂತ ಪ್ರಶ್ನೆಗಳಿಗೆ ಸಮ್ಮತಿಕೊಟ್ಟ ಸಭೆಯಲ್ಲಿ ಮರುಪರಿಶೀಲನೆ ಮಾಡಬೇಕೆಂದು ಮುಂದೆ ಕೇಳಿದರೆ, ನೈತಿಕವಾಗಿ 'ಇಲ್ಲ' ಎಂದು ಹೇಳಲು ನಾವು ಸಮರ್ಥರಾಗಿರುತ್ತೇವೆಯೆ? ಮಾನ್ಯರೆ, ಅಂತಹ ಪರಿಸ್ಥಿತಿ ಉದ್ಭವಿಸಿದರೆ ಮುಸ್ಲಿಮ್ ಲೀಗ್ ಪ್ರತಿನಿಧಿಗಳು ಮತ್ತು ಭಾರತದ ರಾಜ್ಯಗಳ ಕೋರಿಕೆಯನ್ನು ನಿರಾಕರಿಸುವುದನ್ನು ನಮ್ಮ ಹೃದಯ ಒಪ್ಪುವುದಿಲ್ಲ ಎಂದು ನನಗೆ ಖಚಿತವಾಗಿದೆ.

ಮಾನ್ಯರೆ, ಇನ್ನೊಂದು ಮಾತು ಹೇಳಿ ನಾನು ಮುಕ್ತಾಯ ಮಾಡುತ್ತೇನೆ. ಭಾರತದಲ್ಲಿ ಮತ್ತು ಇಂಗ್ಲೆಂಡಿನಲ್ಲಿ ಎರಡು ಕಡೆಯೂ ನಮ್ಮ ಹಾದಿಯಲ್ಲಿ ಅಪಾರವಾದ ಕಷ್ಟಗಳು ಇವೆ. ಬ್ರಿಟಿಷರ ಅಧಿಕಾರವನ್ನು ಭಾರತದಲ್ಲಿ ಪುನಃ ದೃಢೀಕರಿಸಬಹುದು ಎಂದು ಭಾವಿಸುವ ಲಾರ್ಡ್ ಲಿನ್‌ಲಿತ್‌ಗೋ ಅಂತಹ ಜನರು ಇನ್ನೂ ಇದ್ದಾರೆ. ಅವರು ಒಂದು ಅಪಾಯಕಾರಿಯಾದ ಭ್ರಮೆಯಿಂದ ನರಳುತ್ತಿದ್ದಾರೆ. ಅಂತಹ ಜನರಿಂದ ಮಾರ್ಗದರ್ಶನಗೊಳ್ಳಲು ಇಂಗ್ಲೆಂಡ್ ತನಗೆ ತಾನೆ ಅವಕಾಶ ಕೊಟ್ಟುಕೊಂಡರೆ, ಅದು ಕಳೆದ ೨೪ ವರ್ಷಗಳಿಂದ ಎದುರಿಸುತ್ತಿರುವ ಪರಿಸ್ಥಿತಿಗಿಂತ ತೀರ ಹೆಚ್ಚು ಗಂಭೀರವಾದ ಪರಿಸ್ಥಿತಿಗೆ ಮುಖಾಮುಖಿಯಾಗಬೇಕಾಗುತ್ತದೆ. ಅದು ಒಂದು ಕ್ಷಣ, ಒಂದೇ ಒಂದು ಕ್ಷಣ ಮಾತ್ರ ಭಾರತವನ್ನು ಬಲಪ್ರಯೋಗದಿಂದ ಕೆಳಗಿರಿಸಲು ಸಮರ್ಥವಾಗಬಹುದು. ಆದರೆ ಅದನ್ನು ಒಂದು ದಿನ ಕೂಡ ಆಳಲು ಸಮರ್ಥವಾಗಲಾರದು. ಲೇಬರ್ ಸರ್ಕಾರವು ಇದನ್ನು ಮನಗಾಣುತ್ತದೆ ಮತ್ತು ಶ್ರೀ ಚರ್ಚಿಲ್ ಮತ್ತು ಲಾರ್ಡ್ ಲಿನ್‌ಲಿತ್‌ಗೋ ಅಥವಾ ಲಿಬರಲ್‌ಗಳ ವೇಷಧರಿಸಿದ ಕನ್ಸರ್ವಟಿವ್‌ಗಳಾದ ಲಾರ್ಡ್ ಸೈಮನ್ ಅಂತಹ ಜನರು ಕೊಡುವ ಸಲಹೆಯನ್ನು ಸ್ವೀಕರಿಸುವ ಉದ್ದೇಶವನ್ನು ಹೊಂದಿಲ್ಲ ಎಂದು ನನಗೆ ಖಚಿತವಾಗಿದೆ. ಮಾನ್ಯರೆ, ಆದಾಗ್ಯೂ ನಾವು ಜಯಿಸಬೇಕಾದ ಆಂತರಿಕ ಮತ್ತು ಬಾಹ್ಯ ಕಷ್ಟಗಳ ದೃಷ್ಟಿಯಿಂದ, ಈ ಸಭೆಯ ನೈತಿಕ ಅಧಿಕಾರಕ್ಕೆ ಪುಷ್ಟಿಕೊಡುವ ರೀತಿಯಲ್ಲಿ ನಾವು ಕ್ರಿಯಾಶೀಲರಾಗುವುದು ವಿವೇಕ. ನಮಗೆ ಈ ದೇಶದಲ್ಲಷ್ಟೇ ಅಲ್ಲ ಇಂಗ್ಲೆಂಡಿನಲ್ಲಿಯೂ ಅಪಾರವಾದ ಸ್ನೇಹಿತರಿದ್ದಾರೆ. ಅವರ ಕೈಗಳನ್ನು ಬಲಪಡಿಸುವ ರೀತಿಯಲ್ಲಿ ನಾವು ಮುಂದುವರಿಯೋಣ. ಮೇ ೧೬ರ ಹೇಳಿಕೆಯ ಷರತ್ತುಗಳ ಅಡಿಯಲ್ಲಿ ಏನನ್ನು ಮಾಡಲು ನಮಗೆ ಹಕ್ಕು ಇದೆ ಎಂದು ನಾವು ಚಿಂತಿಸದಿರೋಣ. ಅದಕ್ಕಿಂತ ಹೆಚ್ಚಾಗಿ ಈ ಮುಖ್ಯವಾದ ಘಟ್ಟದಲ್ಲಿ ನಮ್ಮ ಹಿತದ ದೃಷ್ಟಿಯಿಂದ ಏನನ್ನು ಮಾಡಬೇಕು ಎಂದು ಯೋಚಿಸೋಣ. ಪಂಡಿತ್ ಜವಾಹರಲಾಲ್ ನೆಹರು ಅವರ ನಿರ್ಣಯವನ್ನು ಅಂಗೀಕರಿಸುವುದು ಸಂಪೂರ್ಣವಾಗಿ ನ್ಯಾಯಸಮ್ಮತ ಎಂದು ನಾವು ಪರಿಗಣಿಸಬಹುದು. ಆದರೆ ಯಾವ ಅತೃಪ್ತಿ ಮತ್ತು ಅಶಾಂತಿಯನ್ನು ಶಮನ ಮಾಡಬೇಕೆನ್ನುವುದು ನಮ್ಮ ಅಪೇಕ್ಷೆಯಾಗಿದೆಯೋ ಅವನ್ನೇ ಉಲ್ಬಣಗೊಳಿಸುವಂತಿದ್ದರೆ ನಮ್ಮ ಹಕ್ಕುಗಳನ್ನು ಚಲಾಯಿಸಿ ಏನು ಪ್ರಯೋಜನ? ಆದ್ದರಿಂದ ಮಾನ್ಯರೆ, ಜನಸಮುದಾಯದ ಎಲ್ಲ ಜನರ ಒಪ್ಪಿಗೆಯಿಂದ ಭಾರತವು ಯಾವ ರೀತಿಯಲ್ಲಿ ಮುಂದುವರಿಯಬೇಕೆಂದರೆ – ದುರದೃಷ್ಟವಶಾತ್ ಅದು ಸಂಭವಿಸುತ್ತಿಲ್ಲದಿದ್ದರೆ – ಮುನ್ನುಗ್ಗಬೇಕೆಂಬ ದೇಶದ ಹಕ್ಕನ್ನು ಒಪ್ಪಿಕೊಳ್ಳುವ ಎಲ್ಲರ ಸಮ್ಮತಿಯ ಮೇರೆಗೆ, ನಮ್ಮ ಮುಂದೆ ಇಟ್ಟುಕೊಂಡಿರುವ ಗುರಿಯ ಕಡೆಗೆ ಕ್ಷಿಪ್ರವಾಗಿ ಧಾವಿಸಲು ನಾವು ಸಮರ್ಥರಾಗಬೇಕು ಎಂದು ನಾನು ಆಶಿಸುತ್ತೇನೆ. ಆ ಗುರಿಯೇ ಸ್ವಾತಂತ್ರ್ಯ ಮತ್ತು ಒಗ್ಗಟ್ಟು (ಹರ್ಷೋದ್ಗಾರ).

**ಗೌರವಾನ್ವಿತ ದಿವಾನ್ ಬಹಾದ್ದೂರ್ ಸರ್ ಎನ್. ಗೋಪಾಲಸ್ವಾಮಿ ಆಯ್ಯಂಗಾರ್** (ಮದ್ರಾಸ್ : ಸಾಮಾನ್ಯ) : ಮಾನ್ಯ ಅಧ್ಯಕ್ಷರೆ, ನಾನು ಈ ನಿರ್ಣಯವನ್ನು ಬೆಂಬಲಿಸಲು ಮುಂದೆ ಬಂದಿದ್ದೇನೆ. ಈ ಮಾತಿಗೆ ಸೇರಿಸಬಹುದಾದದ್ದೆಂದರೆ ಈ ಬೈಠಕ್ಕುಗಳಲ್ಲಿಯೇ ಈ ನಿರ್ಣಯವನ್ನು ಅದರ ನಿರ್ಣಾಯಕ ಹಂತಕ್ಕೆ ನೂಕಬೇಕು ಎಂದು ನನ್ನ ಶಕ್ತಿಮೀರಿ ಒತ್ತಾಯಿಸಲು ಮುಂದೆ ಬಂದಿದ್ದೇನೆ. (ಹರ್ಷೋದ್ಗಾರಗಳು) ಮಾನ್ಯರೆ, ಡಾ. ಜಯಕರ್‌ಗೆ ನನ್ನ ಗೌರವವನ್ನು ಸಲ್ಲಿಸುತ್ತೇನೆ ಮತ್ತು ಪಂಡಿತ್ ಕುಂಜ್ರು ಅವರು ಮಹಾನುಭಾವರು.

ಈ ತಿದ್ದುಪಡಿಯನ್ನು ಸಮರ್ಥಿಸುತ್ತಾ ಅವರು ಹೇಳಿದ ಎಲ್ಲವನ್ನು ಅತ್ಯಂತ ಜಾಗರೂಕತೆಯಿಂದ ನಾನು ಪರಿಗಣಿಸಿದ್ದೇನೆ. ಮುಸ್ಲಿಮ್ ಲೀಗ್‌ನ ಪ್ರತಿನಿಧಿಗಳು ಮತ್ತು ಭಾರತದ ರಾಜ್ಯಗಳ ಪ್ರತಿನಿಧಿಗಳು ನಮ್ಮನ್ನು ಸೇರುವವರೆಗೂ ಈ ಚರ್ಚೆಯನ್ನು ಮುಂದೂಡಬೇಕೆಂದು ಅವರು ಪ್ರಸ್ತಾವಿಸಿದ್ದಾರೆ. ಮುಂದೂಡಬೇಕೆಂದು ಕೋರುವ ಈ ಪ್ರಸ್ತಾವದ ವಿರುದ್ಧ ನಾನು ಒಂದೇ ಒಂದು ಅಭಿನಂದನೆಯ ಮಾತನ್ನು ಆಡಬೇಕು. ಮಾನ್ಯರೆ, ಇದರಲ್ಲಿ ಕಲ್ಪನಾಶಕ್ತಿಯ ಕೊರತೆಯಿದೆ ಎಂದು ನಾನು ಪರಿಗಣಿಸುತ್ತೇನೆ. ನನ್ನ ಸ್ನೇಹಿತರಿಗೆ ಅಗೌರವ ತೋರಿಸದೆ ಈ ಮಾತನ್ನು ನಾನು ಆಡುತ್ತಿದ್ದೇನೆ. ಅದರಲ್ಲಿ ಕಲ್ಪನಾಶಕ್ತಿಯ ಕೊರತೆಯಿದೆಯೆಂದು ಏಕೆ ಹೇಳುತ್ತಿದ್ದೇನೆಂದರೆ ನಾವು ಈಗಷ್ಟೇ ಒಂದು ದೊಡ್ಡ ಕೆಲಸವನ್ನು ಉಪಕ್ರಮಿಸುತ್ತಿದ್ದೇವೆ ಮತ್ತು ನಮ್ಮ ದೇಶ ಹಾಗೂ ಜಗತ್ತಿಗೆ ನಾವು ಗಂಭೀರವಾದ ಕೆಲಸಮಾಡುತ್ತಿದ್ದೇವೆ ಎಂಬುದನ್ನು ಮನದಟ್ಟು ಮಾಡಿಕೊಡುವುದು ಅಗತ್ಯವಾಗಿದೆ ಎಂಬುದನ್ನು ಅದು ಮರೆತಿದೆ.

ಈಗ, ಮಾನ್ಯರೆ, ಈ ನಿರ್ಣಯವನ್ನು ನೋಡಿ. ನಮ್ಮ ಸಂವಿಧಾನವನ್ನು ರಚಿಸಲು ನಮ್ಮ ಮುಂದೆ ನಾವು ಇಟ್ಟುಕೊಳ್ಳಬೇಕಾದ ಉದ್ದೇಶಗಳನ್ನು ಅದು ವ್ಯವಸ್ಥಿತವಾಗಿ ಪ್ರತಿಪಾದಿಸಿದೆ. ಈ ಸಭೆಯಲ್ಲಿ ನಮ್ಮ ಕೆಲಸದ ಕೊನೆಯ ಹಂತವನ್ನು ತಲಪುವವರೆಗೂ ಅಂತಹ ನಿರ್ಣಯವನ್ನು ಮುಂದೂಡಬೇಕೆ? ಈ ಸಭೆಯಲ್ಲಿ ನಾವು ಮಾಡಬೇಕೆಂದು ಉದ್ದೇಶಿಸಿರುವ ಪ್ರತಿಯೊಂದಕ್ಕೂ ಪೀಠಿಕೆಯಾಗಬೇಕಾದದ್ದು ಈ ನಿರ್ಣಯವಲ್ಲವೆ? ಮಾನ್ಯರೆ, ಈ ಮುಂದೂಡಿಕೆಯ ಪ್ರಸ್ತಾವಕ್ಕೆ ಇದು ಒಂದು ಸಂಪೂರ್ಣವಾದ ಉತ್ತರ ಎಂದು ನಾನು ಭಾವಿಸುತ್ತೇನೆ. ಈ ತಿದ್ದುಪಡಿಯ ಮಂಡನೆಕಾರರು ಮತ್ತು ಬೆಂಬಲಗಾರರು ಈ ನಿರ್ಣಯವನ್ನು ಮುಂದೂಡುವುದಕ್ಕೆ ಕಾರಣಗಳನ್ನು ಒತ್ತಿಹೇಳಿದ್ದಾರೆ. ಆದರೆ ಹಾಗೆ ಮಾಡುವಾಗ ಅವರಲ್ಲಿ ಇಬ್ಬರೂ ಈ ನಿರ್ಣಯದಲ್ಲಿ ಆಕ್ಷೇಪಾರ್ಹವಾದುದು ಏನೂ ಇಲ್ಲ ಎಂದು ಸ್ವತಃ ಒಪ್ಪಿಕೊಂಡಿದ್ದಾರೆ. ಮಾನ್ಯರೆ, ನಾನು ಅವರಿಗೆ ಮನವಿ ಮಾಡಿಕೊಳ್ಳುವುದೇನೆಂದರೆ ಈ ನಿರ್ಣಯದಲ್ಲಿ ಅವರಿಗೆ ನಂಬಿಕೆ ಇದ್ದರೆ ಈ ಬೈಠಕ್ಕುಗಳ ಸರಣಿಯಲ್ಲಿ ಅವರು ಅದನ್ನು ಅಂಗೀಕರಿಸಿಬೇಕು. ನಮ್ಮ ನಿಜವಾದ ಕಾರ್ಯಕಲಾಪಗಳನ್ನು ಪ್ರಾರಂಭಿಸುವ ಮೊದಲೇ ಮುಗಿಸಬೇಕು ಮತ್ತು ನಮ್ಮ ಎಲ್ಲ ಕಾರ್ಯಕಲಾಪಗಳನ್ನು ಬಹುತೇಕ ಮುಕ್ತಾಯಗೊಳಿಸುವವರೆಗೂ ಮುಂದೂಡಬಾರದು. ಡಾ. ಜಯಕರ್ ತಮ್ಮ ಭಾಷಣದ ಕೊನೆಯ ಹಂತದಲ್ಲಿ ಈ ನಿರ್ಣಯದ ಪರಿಗಣನೆಯನ್ನು ಸುಮಾರು ಒಂದು ತಿಂಗಳ ಕಾಲವಷ್ಟೆ ಮುಂದೂಡಬೇಕು ಎಂದು ಸೂಚಿಸಿರುವುದನ್ನು ನಾನು ಬಲ್ಲೆ. ಅದರ ಕೊನೆಯಲ್ಲಿ ಮುಸ್ಲಿಮ್ ಲೀಗ್‌ನ ಪ್ರತಿನಿಧಿಗಳು ನಮ್ಮನ್ನು ಸೇರಿಕೊಂಡಿರುತ್ತಾರೆ ಎನ್ನುವುದು ಅವರ ನಿರೀಕ್ಷೆ. ಆದರೆ ಭಾರತದ ರಾಜ್ಯಗಳ ಪ್ರತಿನಿಧಿಗಳ ಸಂಗತಿ ಏನು? ಈ ಸಂವಿಧಾನ ರಚನಾಸಭೆಯ ಯಾವ ತಪ್ಪೂ ಇಲ್ಲದೆ ಭಾರತದ ರಾಜ್ಯಗಳ ಪ್ರತಿನಿಧಿಗಳು ಈ ಸಭೆಯ ಆರಂಭದಲ್ಲೇ ಬರಲಿಲ್ಲ. ಹಾಗೆ ಬರಬೇಕಾದದ್ದು ಅವರ ಹಕ್ಕಾಗಿದೆ ಎಂದು ನಾನು ಪರಿಗಣಿಸುತ್ತೇನೆ. ಆದರೆ ಕಾರ್ಯವಿಧಾನವನ್ನು ಎಷ್ಟೊಂದು ನಿಯಂತ್ರಿಸಲಾಗಿದೆಯೆಂದರೆ ಅವರು ಈ ಸಂವಿಧಾನ ರಚನಾಸಭೆಯ ಅಂತಿಮ ಬೈಠಕ್ಕಿನಲ್ಲಿ ಮಾತ್ರ ಒಳಗೆ ಬರುತ್ತಾರೆ. ನಾವು ಅವರಿಗಾಗಿ ಕಾಯಬೇಕೆ? ಅಷ್ಟಕ್ಕೂ ಈ ನಿರ್ಣಯಕ್ಕೆ ಬಹುಪಾಲು ಕಂಠೋಕ್ತವಾದ ಆಕ್ಷೇಪ ಬಂದಿರುವುದು ಈ ಸದನದ ಹೊರಗಿನಿಂದಲೇ, ಭಾರತದ ರಾಜ್ಯಗಳನ್ನು ಪ್ರತಿನಿಧಿಸುತ್ತಿರುವ ಜನರಿಂದಲೇ.

ಈಗ ಮುಸ್ಲಿಮ್ ಲೀಗ್‌ನ ಪ್ರತಿನಿಧಿಗಳನ್ನೇ ತೆಗೆದುಕೊಳ್ಳಿ. ಈ ನಿರ್ಣಯದೊಡನೆ ಮುಂದೆ ಸಾಗುವ ಮೂಲಕ ನಾವು ಅವರಿಗೆ ಏನಾದರೂ ಅನ್ಯಾಯ ಮಾಡುತ್ತಿದ್ದೇವೆಯೇ? ನಾವು ಇಂದು ಮಾಡುತ್ತಿರುವುದಕ್ಕೆ ಮುಖ್ಯವಾದ ಆಕ್ಷೇಪವೆಂದರೆ ಗುಂಪುಗೂಡಿಸುವುದಕ್ಕೆ ಸಂಬಂಧಿಸಿದಂತೆ ಇರುವ ಖಂಡಕ್ಕೆ ಬೇರೆಯದೇ ಆದ ವ್ಯಾಖ್ಯಾನವನ್ನು ಅವರು ಕೊಟ್ಟಿರುವುದು. ನಾವು ಗುಂಪುಗೂಡಿಸುವುದಕ್ಕೆ ಸಂಬಂಧಿಸದಂತೆ ಚರ್ಚೆಮಾಡುತ್ತಿಲ್ಲ. ನಮ್ಮ ಕೆಲಸದ ಉದ್ದೇಶಗಳನ್ನು ವಿಶದೀಕರಿಸುತ್ತಿರುವ ಈ ನಿರ್ಣಯವನ್ನು ಕುರಿತು ನಾವು ಚರ್ಚಿಸುತ್ತಿದ್ದೇವೆ. ಈ ವಿಷಯವನ್ನು ಕುರಿತಂತೆ ಒಳಗೆ ಬಂದು ಈ ಚರ್ಚೆಯಲ್ಲಿ ಭಾಗವಹಿಸಲು

ಅವರಿಗೆ ಪರಿಪೂರ್ಣ ಹಕ್ಕಿದೆ. ಇಲ್ಲಿಗೆ ಬಂದು ತಮ್ಮ ಪೀಠಗಳಲ್ಲಿ ಆಸೀನರಾಗಿ, ಮುಂದೆ ಬರಲಿರುವ ಹೆಚ್ಚು ಮುಖ್ಯವಾದ ಕೆಲಸಕ್ಕೆ ಪೂರ್ವಭಾವಿಯಾಗಿ ನಾವು ಕೈಗೆತ್ತಿಕೊಂಡಿರುವ ಇತರ ಪ್ರಶ್ನೆಗಳನ್ನು ಕುರಿತು ನಮ್ಮೊಡನೆ ಚರ್ಚಿಸಲು ಅವರನ್ನು ತಡೆಯುತ್ತಿರುವುದೇನು? ಈ ಸಭೆಯು ಮೊದಲ ಅಧಿವೇಶನದ ಕೊನೆಯ ಭಾಗದಲ್ಲಿ ವಿಭಾಗಗಳ ವಿಂಗಡಣೆಯ ಪ್ರಸ್ತಾವ ಮಾಡಿದಾಗ ಮಾತ್ರ ಅವರ ಮುಖ್ಯ ಆಕ್ಷೇಪವು ಉದ್ಭವಿಸುತ್ತದೆ. ಮಾನ್ಯರೆ, ಇನ್ನು ಒಂದೇ ನಿಮಿಷದಲ್ಲಿ ನಾನು ತೋರಿಸುವಂತೆ, ಆ ಹಂತದಲ್ಲಿ ಅವರು ಬಯಸುವ ಎಲ್ಲ ವಿವಾದಾಂಶಗಳನ್ನೂ ಎತ್ತುವುದು ತೀರ ಸುಲಭಸಾಧ್ಯ. (ಕೇಳಿ, ಕೇಳಿ!)

ಈಗ, ಮಾನ್ಯರೆ, ಈ ತಿಂಗಳ ೬ ರಂದು ಚಕ್ರವರ್ತಿಯ ಸರ್ಕಾರವು ಮಾಡಿದ ಹೇಳಿಕೆಯಿಂದ ಗುಂಪುಗೂಡಿಸುವುದಕ್ಕೆ ಸಂಬಂಧಿಸಿದ ಪ್ರಶ್ನೆಯು ಒಂದು ಹೊಸ ಹಂತವನ್ನು ಪ್ರವೇಶಿಸಿದೆ. ಆದರೆ ಅವರು ಆ ಹೇಳಿಕೆಯಲ್ಲಿ ಏನನ್ನು ಹೇಳಿದ್ದಾರೆ ಎಂಬುದರ ಗುಣದೋಷಗಳನ್ನು ಕುರಿತು ವಿವರಿಸಲು ನಾನು ಹೋಗುವುದಿಲ್ಲ. ನಾನು ಹೇಳಬಯಸುವ ಒಂದೇ ಒಂದು ಸಂಗತಿಯೆಂದರೆ, ವಿವಾದದ ಈ ಹಂತದಲ್ಲಿ ಚಕ್ರವರ್ತಿಯ ಸರ್ಕಾರದಂತಹ ಘನಗಂಭೀರ ಸಂಸ್ಥೆಯು ಮಾಡಬಹುದಾದ ಅತ್ಯಂತ ಆಶ್ಚರ್ಯಕರ ಹೇಳಿಕೆಯು ಇದಾಗಿದೆ. ಅದು ಹೇಗಾದರೂ ಇರಲಿ, ಅದರ ಗುಣದೋಷಗಳ ವಿಮರ್ಶೆಗೆ ನಾನು ಹೋಗುವುದಿಲ್ಲ. ಈಗ, ಆ ಹೇಳಿಕೆಯಿಂದ ಹೊರ ಹರಿಯುವುದೇನೆಂದು ನೋಡೋಣ. ಚಕ್ರವರ್ತಿಯ ಸರ್ಕಾರವು ಹೇಳಿರುವುದೇನೆಂದರೆ ಸಂಪುಟ ಆಯೋಗದ ಯೋಜನೆಯನ್ನು ಕುರಿತ ಅವರ ವ್ಯಾಖ್ಯಾನ ಮತ್ತು ಮುಸ್ಲಿಮ್ ಲೀಗ್‌ನ ವ್ಯಾಖ್ಯಾನ ಪರಸ್ಪರ ಸಮ್ಮತಿಸುತ್ತವೆ. ಆದರೆ ಅವರು ಹೀಗೆ ಹೇಳುತ್ತಾರೆ. "ಈ ವಿಷಯವನ್ನು ಫೆಡರಲ್ ನ್ಯಾಯಾಲಯಕ್ಕೆ ವಹಿಸಲು ನೀವು ಒಪ್ಪಿರುವುದರಿಂದ ಅಥವಾ ಸಂವಿಧಾನ ರಚನಾಸಭೆಯು ಹಾಗೆ ಮಾಡುವುದೆಂದು ನೀವು ಹೇಳುವುದರಿಂದ, ನೀವು ಹಾಗೆ ಮಾಡಬಹುದು." ಅನಂತರ ನಿನ್ನೆಯಷ್ಟೇ ಲಾರ್ಡ್ ಪೆಥಿಕ್ ಲಾರೆನ್ಸ್ ಮಾಡಿದ ಹೇಳಿಕೆಯಿದೆ. ಅವರು ವಿಷಯವನ್ನು ಆಖೈರಾಗಿ ತೀರ್ಮಾನಿಸುತ್ತಾ ಹೀಗೆ ಹೇಳಿದ್ದಾರೆ: "ನೀವು ಫೆಡರಲ್ ನ್ಯಾಯಾಲಯಕ್ಕೆ ಮನವಿ ಸಲ್ಲಿಸಿದರೂ ಚಕ್ರವರ್ತಿಯ ಸರ್ಕಾರವು ತನ್ನ ಸ್ಥಾನದಿಂದ ಒಂದು ಅಂಗುಲ ಕೂಡ ಕದಲುವುದಿಲ್ಲ." ಈಗ ಮಾನ್ಯರೆ, ಪರಿಸ್ಥಿತಿ ಏನಾಗಿದೆ? ನಾವು ಫೆಡರಲ್ ನ್ಯಾಯಾಲಯಕ್ಕೆ ಹೋದರೆ, ಫೆಡರಲ್ ನ್ಯಾಯಾಲಯವು ಕಾಂಗ್ರೆಸ್ ನಿಲುವಿನ ಪರವಾಗಿ ತೀರ್ಮಾನವನ್ನು ಕೊಟ್ಟರೆ ಮುಸ್ಲಿಮ್ ಲೀಗ್ ಅದನ್ನು ಒಪ್ಪಿಕೊಳ್ಳುವುದಿಲ್ಲ ಎಂದು ಖಂಡತುಂಡವಾಗಿ ಹೇಳಿದೆ. ಈ ವಿಷಯವನ್ನು ಕುರಿತು ಒಂದು ಅಂಗುಲ ಕೂಡ ಕದಲುವುದಿಲ್ಲ ಎಂದು ಚಕ್ರವರ್ತಿಯ ಸರ್ಕಾರ ಹೇಳಿದೆ. ನನ್ನ ಅಭಿಪ್ರಾಯದಲ್ಲಿ, ಫೆಡರಲ್ ನ್ಯಾಯಾಲಯದ ನಿಲುವನ್ನು ಒಪ್ಪಿಕೊಳ್ಳುವುದಾಗಲಿ ಅಥವಾ ಬಿಡುವುದಾಗಲಿ ಚಕ್ರವರ್ತಿಯ ಸರ್ಕಾರದ ಅಧಿಕಾರವ್ಯಾಪ್ತಿಯಲ್ಲಿ ಸಹಜವಾಗಿಯೇ ಬರುವುದಿಲ್ಲ. ಏಕೆಂದರೆ, ಅದು ಸಂಪೂರ್ಣವಾಗಿ ಅದರ ಕೈಮೀರಿದೆ. ಸಂವಿಧಾನ ರಚನಾಸಭೆಯು ಫೆಡರಲ್ ನ್ಯಾಯಾಲಯಕ್ಕೆ ವಹಿಸಿಕೊಡುತ್ತದೆ. ಹೀಗೆ ಮಾಡುವ ಮುನ್ನ ಫೆಡರಲ್ ನ್ಯಾಯಾಲಯದ ತೀರ್ಮಾನಕ್ಕೆ ತಾನು ಬದ್ಧವಾಗಿರುತ್ತದೆಯೇ ಎಂದು ಸಂವಿಧಾನ ರಚನಾಸಭೆಯು ಹೇಳಬೇಕು. ಆಗ ಏನಾಗುತ್ತದೆ? ಒಂದು ಪಕ್ಷ ಫೆರಡಲ್ ನ್ಯಾಯಾಲಯದ ತೀರ್ಮಾನವು ಚಕ್ರವರ್ತಿಯ ಸರ್ಕಾರದ ಅಭಿಪ್ರಾಯದ ಪರವಾಗಿರುತ್ತದೆ ಎಂದುಕೊಳ್ಳೋಣ, ಆಗ ಅದಕ್ಕೆ ವಿರುದ್ಧವಾದ ನಿಲುವನ್ನು ತೆಗೆದುಕೊಂಡವರ ಪರಿಸ್ಥಿತಿ ಏನು? ಬಿಡಿ ಪ್ರಾಂತ್ಯಗಳಿಗೆ ಮತ್ತು ಸಮುದಾಯಗಳಿಗೆ ಮಾಡಿಕೊಂಡಿರುವ ಬದ್ಧತೆಗಳ ದೃಷ್ಟಿಯಿಂದ ಅವರು ಮಾಡಬಹುದಾದ ಏಕಮಾತ್ರ ಕ್ರಿಯೆ ಎಂದರೆ, ತಮ್ಮ ಅಭಿಪ್ರಾಯವನ್ನು ಹೆಚ್ಚು ಸ್ಪಷ್ಟವಾಗಿ ವ್ಯಕ್ತಪಡಿಸುವ ೧೯ನೆಯ ಕಂಡಿಕೆಯನ್ನು ಮಾರ್ಪಡಿಸುವಂತೆ ಈ ಸಭೆಗೆ ಮನವಿ ಸಲ್ಲಿಸುವುದು. ಇಲ್ಲಿರುವ ಮುಖ್ಯವಾದ ತೊಂದರೆ ಎಂದರೆ ಹೌಸ್ ಆಫ್ ಲಾರ್ಡ್ಸ್‌ನಲ್ಲಿ ರಾಜ್ಯಗಳ ಕಾರ್ಯದರ್ಶಿ ಹೇಳಿದಂತೆ ವಿಭಾಗಗಳಲ್ಲಿ ಮತದಾನದ ವಿಧಾನ. ಕಂಡಿಕೆ ೧೯(೫)ಅನ್ನು ಈಗಿರುವಂತೆಯೇ ಬಿಟ್ಟರೆ, ಆ ಖಂಡದ ಪದರಚನೆಯಲ್ಲಿನ ಬದಲಾವಣೆಯ ಅನುಪಸ್ಥಿತಿಯಲ್ಲಿ

ಮತದಾನವು ಬಿಡಿವ್ಯಕ್ತಿಗಳಿಂದ, ಹಾಗೂ ಸರಳ ಬಹುಮತವು ಪ್ರಶ್ನೆಯನ್ನು ಇತ್ಯರ್ಥಗೊಳಿಸುತ್ತದೆ ಎನ್ನುವುದು ಖಂಡಿತವಾಗಿಯೂ ಚರ್ಚಾಸ್ಪದವಾದ ಅಂಶವಾಗುತ್ತದೆ. ಅದು ಖಂಡಿತವಾಗಿಯೂ ಒಂದು ಚರ್ಚಾಸ್ಪದವಾದ ಅಂಶ. ಪ್ರಾಂತ್ಯಗಳಿಂದ ಮತದಾನವಾಗಬೇಕು ಎಂದು ನಾವು ಬಯಸಿದರೆ, ಆ ಖಂಡಕ್ಕೆ ಒಂದು ಮಾರ್ಪಾಡನ್ನು ನಾವು ಪ್ರಸ್ತಾವಿಸುವುದು ಅಗತ್ಯವಾಗಿದೆ, ಮತ್ತು ಅಂತಹ ಮಾರ್ಪಾಡನ್ನು ಸೂಕ್ತವಾಗಿ ರೂಪಿಸಿದ ಪ್ರಸ್ತಾವದ ಮೇಲೆ ಈ ಸಭೆಯು ಮಾಡಬಹುದು ಎಂದು ನಾನು ಭಾವಿಸುತ್ತೇನೆ. ಈಗ, ಅದನ್ನು ನಾವು ಮಾಡಲಿದ್ದೇವೆಯೆ? ಡಿಸೆಂಬರ್ ೬ರ ಹೇಳಿಕೆ ಮತ್ತು ಸಂಸತ್ತಿನ ಎರಡೂ ಸದನಗಳಲ್ಲಿ ಮಾಡಲಾದ ಭಾಷಣಗಳಿಂದ ಹೊರಹೊಮ್ಮಿದ್ದೇನು ಎಂಬುದನ್ನು ದೃಷ್ಟಿಯಲ್ಲಿಟ್ಟುಕೊಂಡು ನಾನು ಸಲಹೆ ನೀಡುವುದೇನೆಂದರೆ, ಈಗ ಸೃಷ್ಟಿಸಲಾಗಿರುವ ಹೊಸ ಸನ್ನಿವೇಶಗಳಲ್ಲಿ, ಮಾಡಬಹುದಾದ ವಿವೇಕಯುತವಾದ ಕಾರ್ಯವೆಂದರೆ ಫೆಡರಲ್ ನ್ಯಾಯಾಲಯಕ್ಕೆ ಮನವಿ ಮಾಡಿಕೊಳ್ಳದೆ ಇರುವುದು ಮತ್ತು ಇನ್ನೊಂದು ದಾರಿಯನ್ನು ಹಿಡಿಯುವುದು. ಅದನ್ನು ನಾನು ಆಗಲೆ ಸೂಚಿಸಿದ್ದೇನೆ. ಅದೆಂದರೆ, ೧೯(೫) ಖಂಡದ ಮಾರ್ಪಾಡನ್ನು ಪ್ರಸ್ತಾವಿಸುವ ಒಂದು ನಿರ್ಣಯವನ್ನು ಈ ಸಂವಿಧಾನ ರಚನಾಸಭೆಯಲ್ಲಿ ತರುವುದು. ಅದು ಗುಂಪುಗೂಡಿಸುವ ವಿಚಾರಕ್ಕೆ ಸಂಬಂಧಿಸಿದಂತೆ ವಿಭಾಗಗಳಲ್ಲಿ ಪ್ರಾಂತ್ಯಗಳಿಂದ ಮತದಾನವಾಗುವ ವಿಧಾನಕ್ಕೆ ಅವಕಾಶಕೊಡುತ್ತದೆ.

**ಶ್ರೀ ಧೀರೇಂದ್ರನಾಥ್ ದತ್ತ** : ಅಂತಹ ಪ್ರಾರ್ಥನಾ ಮನೋಭಾವದ ನಿರ್ಣಯಗಳಿಂದ ದಯವಿಟ್ಟು ನಮ್ಮನ್ನು ರಕ್ಷಿಸಿ!

**ಗೌರವಾನ್ವಿತ ದಿವಾನ್ ಬಹಾದೂರ್ ಸರ್ ಎನ್. ಗೋಪಾಲಸ್ವಾಮಿ ಅಯ್ಯಂಗಾರ್** : ನಾನು ಸೂಚಿಸುತ್ತಿರುವ ನಿರ್ಣಯವನ್ನು ಈ ಸಭೆಯಲ್ಲಿ ಮಂಡಿಸಬೇಕು; ನಾವು ಅದರ ಮೇಲೆ ಒಂದು ನಿರ್ಧಾರವನ್ನು ಕೈಗೊಳ್ಳಬೇಕು. ಮುಸ್ಲಿಮ್ ಲೀಗ್ ಪ್ರತಿನಿಧಿಗಳು ಇಲ್ಲಿಗೆ ಬಂದು ಅಂತಹ ಮಾರ್ಪಾಡು ಒಂದು ಪ್ರಮುಖ ಕೋಮುವಾರು ವಿವಾದವನ್ನು ಉಂಟುಮಾಡುತ್ತದೆ ಎಂಬ ಪ್ರಶ್ನೆಯನ್ನು ಎತ್ತುವುದು ತೀರ ಸಂಭವನೀಯ ಮತ್ತು ಅದು ಚರ್ಚಾಸ್ಪದವಾದ ನಿಲುವಾಗುತ್ತದೆ ಎಂದು ನಾನು ಭಾವಿಸುತ್ತೇನೆ. ಮಾನ್ಯರೆ, ಅದು ಒಂದು ಪ್ರಮುಖ ಕೋಮುವಾರು ವಿವಾದ ಎಂದು ನೀವು ನಿರ್ಧರಿಸಿದರೆ ಅಥವಾ ಫೆಡರಲ್ ನ್ಯಾಯಾಲಯದಿಂದ ಸೂಚನೆಯನ್ನು ಪಡೆದಮೇಲೆ ಅದು ಒಂದು ಪ್ರಮುಖ ಕೋಮುವಾರು ವಿವಾದವನ್ನು ಒಳಗೊಳ್ಳುತ್ತದೆ ಎಂದು ನೀವು ನಿರ್ಧರಿಸಿದರೆ, ಪ್ರಧಾನ ಸಮುದಾಯಗಳೆಲ್ಲದರ ಬಹುಮತವನ್ನು ಪಡೆಯದೆ ನೀವು ಮಾರ್ಪಾಡನ್ನು ಮಾಡಲಾಗುವುದಿಲ್ಲ ಎಂದು ವಾದಮಾಡಲು ಮುಸ್ಲಿಮ್ ಲೀಗ್‌ಗೆ ಮುಕ್ತ ಅವಕಾಶವಾಗುತ್ತದೆ. ಆ ಕ್ರಮವನ್ನು ನಾವು ಏಕೆ ತೆಗೆದುಕೊಳ್ಳಬಾರದು ಎಂದು ನಾನು ಕೇಳುತ್ತೇನೆ. ನಾವು ಆ ನಿರ್ಣಯವನ್ನು ಈ ಸಭೆಯ ಒಂದು ಮುಂದೂಡಿದ ಅಧಿವೇಶನದಲ್ಲಿ ಪರಿಗಣನೆಗೆ ತೆಗೆದುಕೊಳ್ಳೋಣ. ತಮ್ಮ ಪರಿಚಯ ಪತ್ರಗಳನ್ನು ಸಲ್ಲಿಸಿ ದಾಖಲಾತಿ ಪುಸ್ತಕದಲ್ಲಿ ಸಹಿಮಾಡದಿರುವವರನ್ನೂ ಕೂಡ – ಮುಸ್ಲಿಮ್ ಲೀಗ್ ಸದಸ್ಯರು – ನಾವು ಪರಿಗಣಿಸೋಣ ಮತ್ತು ಅಂತಹ ಒಂದು ನಿರ್ಣಯವನ್ನು ಮಂಡಿಸೋಣ. ಈ ಸಭೆಗೆ ಬಂದು ಕುಳಿತುಕೊಳ್ಳಲು ಅವರಿಗೆ ಅದು ಸಮರ್ಥ ಕಾರಣವಾಗುತ್ತದೆ. ಎದುರು ಪಕ್ಷದಿಂದ ನ್ಯಾಯವಲ್ಲದ ಸಲಹೆ ಬಂದಿತೆಂದು ಅವರು ಪರಿಗಣಿಸಿದಾಗ ಅದನ್ನು ಸೋಲಿಸುತ್ತಾರೆ. ಈ ವಿಚಾರವಾಗಿ ಯಾರು ನಿರ್ಧಾರ ತೆಗೆದುಕೊಳ್ಳುತ್ತಾರೋ ಅವರಿಗೆ ನಾನು ಸೂಚಿಸಲು ಬಯಸುವ ಒಂದು ಅಂಶ ಇದು. ಫೆಡರಲ್ ನ್ಯಾಯಾಲಯಕ್ಕೆ ಹೋಗುವುದು ಸಂಪೂರ್ಣವಾಗಿ ನಿಷ್ಪ್ರಯೋಜಕ. ನನಗೆ ತಿಳಿದಿರುವಮಟ್ಟಿಗೆ ಅದು ನಮ್ಮ ಯಾವ ತೊಂದರೆಗಳನ್ನೂ ಪರಿಹರಿಸುವುದಿಲ್ಲ.

ಅನಂತರ, ಈ ತಿದ್ದುಪಡಿಯ ಪ್ರಮುಖ ವಾದಾಂಶ. ನನ್ನ ಮಿತ್ರರಾದ ಡಾ. ಜಯಕರ್ ಕೈಗೆತ್ತಿಕೊಂಡ ಕಾನೂನಿನ ಅಂಶವನ್ನು ಕುರಿತು ವ್ಯವಹರಿಸಲು ನಾನು ಉದ್ದೇಶಿಸಿಲ್ಲ. ಈ ವಿಚಾರವಾಗಿ ಬಂದ ಇತರ ಕೆಲವು ಟೀಕೆ ಟಿಪ್ಪಣಿಗಳನ್ನು ಕುರಿತಷ್ಟೇ ನಾನು ಉಲ್ಲೇಖಿಸುತ್ತೇನೆ. ಅದರ ಕಡೆಗೆ ಸಾಗುವುದಕ್ಕೆ ಮೊದಲು

ನಾನು ಸೂಚಿಸಬೇಕೆಂದು ಬಯಸುವುದೇನೆಂದರೆ ದಾಖಲೆ ಪತ್ರದ, ಅಂದರೆ ಮೇ ೧೬ರ ಹೇಳಿಕೆಯ ವ್ಯಾಖ್ಯಾನದ ಅಂಶಗಳನ್ನು ಪರಿಗಣಿಸುವಾಗ ನಾವು ಒಂದು ಪ್ರಾಂತೀಯ ಕಾನೂನಿನ ಅಡಿಯಲ್ಲಿ ಕೆಲಸ ಮಾಡುತ್ತಿಲ್ಲ ಅಥವಾ ಸಂಸತ್ತಿನ ಕಾನೂನಿನ ಅಡಿಯಲ್ಲಿ ಕೆಲಸ ಮಾಡುವ ಕೇಂದ್ರೀಯ ಶಾಸನಸಭೆಯ ಒಂದು ಪ್ರಾಂತೀಯ ವಿಧಾನಮಂಡಲದ ಸದಸ್ಯರಾಗಿ ಕೆಲಸ ಮಾಡುತ್ತಿಲ್ಲ ಎನ್ನುವುದನ್ನು ಮರೆಯದಿರೋಣ. ನಾವು ಒಂದು ಸಂವಿಧಾನ ರಚನಾಸಭೆಯಲ್ಲಿ ಇದ್ದೇವೆ ಮತ್ತು ಯಾವ ದಾಖಲೆಯ ಅಡಿಯಲ್ಲಿ ನಾವು ಇಲ್ಲಿ ಸೇರಿದ್ದೇವೆಯೋ ಅದರಲ್ಲಿ ಹೇಳಿಲ್ಲದೇ ಇರುವುದನ್ನು ನಮಗೆ ನಿಷೇಧಿಸಲಾಗಿಲ್ಲ. ನಾವು ಕೈಗೆತ್ತಿಕೊಂಡಿರುವ ಕೆಲಸವನ್ನು ಸಾಧಿಸಲು ಪೂರ್ಣವಾದ ಶೇಷಾಧಿಕಾರವನ್ನು ಹೊಂದಿದ್ದೇವೆ... (ಕೇಳಿ, ಕೇಳಿ!) ಹೀಗಿರುತ್ತ, ನಾನು ಸೂಚಿಸುವುದೇನೆಂದರೆ ಈ ದಾಖಲೆಯ ನಿರ್ದಿಷ್ಟವಾದ ಖಂಡಗಳ ಮೇಲೆ ನಾವು ಕಣ್ಣು ನೆಡಬಾರದು, ಮತ್ತು "ಈ ನಿರ್ದಿಷ್ಟವಾದ ಖಂಡದಲ್ಲಿ ಇದನ್ನು ಹೇಳಲಾಗಿಲ್ಲ, ಇನ್ನೊಂದು ಖಂಡದಲ್ಲಿ ಅದನ್ನು ಹೇಳಲಾಗಿಲ್ಲ, ಆದ್ದರಿಂದ ಈ ಖಂಡಗಳಲ್ಲಿ ಹೇಳಿಲ್ಲದವುಗಳನ್ನು ಏನನ್ನೂ ನಾವು ಮಾಡಲಾಗುವುದಿಲ್ಲ" ಎಂದು ಹೇಳಬಾರದು. ಏನನ್ನು ಹೇಳಲಾಗಿಲ್ಲವೋ ಮತ್ತು ನಮ್ಮ ಕಾರ್ಯವನ್ನು ಸಾಧಿಸುವುದಕ್ಕೆ ಯಾವುದು ಅಗತ್ಯವೋ ಅದನ್ನು ನಿಯಂತ್ರಿಸುವುದು ನಮ್ಮ ಅಧಿಕಾರದೊಳಗೇ ಇದೆ.

ಈ ನಿರ್ಣಯವನ್ನು ಪರಿಗಣಿಸುವುದಕ್ಕೆ ಸಂಬಂಧಿಸಿದ ಇತರ ಕಾನೂನಾತ್ಮಕ ಆಕ್ಷೇಪಗಳನ್ನು ನನಗಿಂತ ಹೆಚ್ಚು ದಕ್ಷವಾಗಿ ಕಾನೂನಿನಲ್ಲಿ ವ್ಯವಹರಿಸಬಲ್ಲ ಜನರಿಗೇ ಬಿಡುತ್ತೇನೆ. ನನ್ನ ಪಾಲಿಗೆ ಇನ್ನೂ ಉಳಿದಿರುವ ಕೆಲವೇ ನಿಮಿಷಗಳಲ್ಲಿ ರಾಜ್ಯಗಳ ಪರವಾಗಿ ಎತ್ತಲಾದ ಆಕ್ಷೇಪಗಳನ್ನು ಕುರಿತು ಮಾತ್ರ ವ್ಯವಹರಿಸುತ್ತೇನೆ. 'ಚೇಂಬರ್ ಆಫ್ ಪ್ರಿನ್ಸಸ್' ಪರವಾಗಿ ಮೂರು ಪ್ರಮುಖ ಆಕ್ಷೇಪಗಳನ್ನು ಮಾತ್ರ ಪ್ರಕಟಿಸಲಾಗಿದೆ. ಮೊದಲನೆಯದಾಗಿ ರಾಜ್ಯಗಳ ಪ್ರತಿನಿಧಿಗಳ ಗೈರುಹಾಜರಿಯಲ್ಲಿ ಪರಿಗಣಿಸಿ, ಅಂಗೀಕರಿಸಲು ಉದ್ದೇಶಿಸಿರುವ ಈ ನಿರ್ಣಯವೇ ಆಕ್ಷೇಪಾರ್ಹವಾಗಿದೆ. ಮಾನ್ಯರೆ, ಅದನ್ನು ಕುರಿತು ನಾನು ಈಗಾಗಲೇ ವಿವರಿಸಿದ್ದೇನೆ. ಎರಡನೆಯದು "ಸ್ವತಂತ್ರ ಸಾರ್ವಭೌಮ ಗಣರಾಜ್ಯ" ಎಂಬ ಶಬ್ದಗಳ ಬಳಕೆಯನ್ನು ಕುರಿತದ್ದು. ಬೇರೆಯ ಭಾಷಣಕಾರರು ಆ ವಿಚಾರವಾಗಿ ಈಗಾಗಲೇ ಮಾತನಾಡಿರುವುದರಿಂದ ನಾನು ಅದನ್ನು ಕುರಿತು ಮಾತನಾಡಿ ನಿಮ್ಮ ಸಮಯವನ್ನು ತೆಗೆದುಕೊಳ್ಳಲು ಬಯಸುವುದಿಲ್ಲ. ಈ ನಿರ್ಣಯದ ೪ನೇ ಖಂಡವನ್ನು ಕುರಿತ ಆಕ್ಷೇಪದ ಬಗೆಗೆ ಸ್ವಲ್ಪ ಹೆಚ್ಚು ವಿವರವಾಗಿ ಮಾತನಾಡಲು ಬಯಸುತ್ತೇನೆ. ಈ ಖಂಡ ಹೀಗೆ ಹೇಳುತ್ತದೆ :

> "ಆದರಲ್ಲಿ ಸಾರ್ವಭೌಮ ಸ್ವತಂತ್ರ ಭಾರತ, ಅದರ ನಿಯೋಜಿತ ಭಾಗಗಳು ಮತ್ತು ಸರ್ಕಾರದ ಅಂಗಗಳ ಎಲ್ಲ ಅಧಿಕಾರ ಮತ್ತು ವಿಧಾಯಕ ಶಕ್ತಿಯು ಜನರಿಂದ ನಿಷ್ಪನ್ನವಾಗುತ್ತದೆ."

ವಿಖ್ಯಾತ ಭಾರತೀಯರೊಬ್ಬರು ಇದಕ್ಕೆ ಒಂದು ಹೇಳಿಕೆಯಲ್ಲಿ ವಿನಾಯಿತಿಯನ್ನು ತೆಗೆದುಕೊಂಡಿದ್ದಾರೆ. ಏನೇ ಆದರೂ ಭಾರತದ ರಾಜ್ಯಗಳ ಕೆಲವರಾದರೂ ರಾಜರ ಪರವಾಗಿ ಮಾತನಾಡಲು ಅವರಿಗೆ ಹಕ್ಕು ಇದೆ ಎಂದು ನಾನು ಭಾವಿಸುತ್ತೇನೆ. ಅವರು ಹೀಗೆ ಹೇಳುತ್ತಾರೆ:

> "ಅಂತಹ ಸಿದ್ಧಾಂತವು ಚರ್ಚಾತೀತವಾಗಿರಬಹುದು ಅಥವಾ ಇಲ್ಲದಿರಬಹುದು. ಆದರೆ ಭಾರತೀಯ ಭಾರತದಲ್ಲಿ ಅದನ್ನು ಹಾಗೆಂದು ಇಟ್ಟುಕೊಳ್ಳುವುದರಲ್ಲಿ ಏನೂ ಅರ್ಥವಿಲ್ಲ–ಅದರಲ್ಲೂ ವಿಶೇಷವಾಗಿ ಇಂಗ್ಲೆಂಡಿನಲ್ಲೂ ಕೂಡ ಈ ಕಾನೂನಿನ ತತ್ತ್ವದಲ್ಲಿ ಈ ಸಿದ್ಧಾಂತವನ್ನು ಅಪರಿಪೂರ್ಣವಾಗಿಯಷ್ಟೇ ಅನ್ವಯಿಸಲಾಗುತ್ತದೆ ಎನ್ನುವುದನ್ನು ನಾವು ನೆನೆದುಕೊಂಡಾಗ."

ಕಾನೂನಿನ ತತ್ತ್ವಕ್ಕೆ ಸಂಬಂಧಿಸಿದಂತೆ ಈ ಸಿದ್ಧಾಂತವನ್ನು ಪರೀಕ್ಷಿಸುವ ಕೆಲಸವನ್ನು ಕೈಗೆತ್ತಿಕೊಳ್ಳಲು ನಾನು ಉದ್ದೇಶಿಸಿಲ್ಲ. ಅದಕ್ಕಿಂತಲೂ ಹೆಚ್ಚಾಗಿ ನಾನು ಅದರ ಸಾಂವಿಧಾನಿಕ ಅಂಶಗಳಿಗೆ ನನ್ನನ್ನು ಪರಿಮಿತಗೊಳಿಸಿಕೊಳ್ಳುತ್ತೇನೆ. ರಾಜ್ಯದ ಪ್ರಥಮ ಪ್ರಜೆಯಾಗಿ ಒಬ್ಬ ವಂಶಪಾರಂಪರ್ಯವಾಗಿ ಬಂದ ರಾಜನಿದ್ದರೂ, ಎಲ್ಲ ವಿಧಾಯಕ ಶಕ್ತಿಯೂ ಕಾನೂನಿನ ರೂಪದಲ್ಲಿ ಅವನಿಂದ ಹೊರಹರಿಯುತ್ತಿದೆ ಎಂಬುದು

ಖಂಡಿತ ಚರ್ಚಾತೀತವಾದರೂ, ಇಂಗ್ಲೆಂಡಿನಲ್ಲಿ ನಿಜವಾದ ಅಧಿಕಾರ ಮತ್ತು ವಿಧಾಯಕ ಶಕ್ತಿಯು ಜನರಿಂದ ನಿಷ್ಪನ್ನವಾಗುತ್ತದೆ.

ಈಗ, ಭಾರತದ ರಾಜ್ಯಗಳಲ್ಲಿ ಪರಿಸ್ಥಿತಿ ಹೇಗಿದೆ? ಭಾರತದ ಎರಡು ಅತ್ಯಂತ ಮುಖ್ಯವಾದ ರಾಜ್ಯಗಳಲ್ಲಿ ಸ್ಥಾಪಿತವಾದ ಸಮಿತಿಗಳ ಅಧಿಕಾರವನ್ನು ಹೊಂದಿರುವ ಎರಡು ದಾಖಲೆಪತ್ರಗಳಿಂದ ನಾನು ಉದ್ಧರಿಸುತ್ತೇನಷ್ಟೆ. ಮೊದಲನೆಯದು ಮೈಸೂರಿಂದ. ಅದು ಸುಮಾರು ಕಾಲು ಶತಮಾನದ ಹಿಂದೆ ಪ್ರಕಟವಾದ ಒಂದು ದಾಖಲೆ. ಆ ಸುಧಾರಣಾ ವರದಿಯಲ್ಲಿ ಹೇಳಿರುವುದು ಇದು :

"ಅಂತಹ ಒಂದು ನಾಗರಿಕ ಆಡಳಿತ ವ್ಯವಸ್ಥೆಯಲ್ಲಿ ರಾಜ್ಯದ ಮುಖ್ಯಸ್ಥನು – ಅವನು ವಂಶಪಾರಂಪರ್ಯವಾಗಿ ಬಂದ ರಾಜನಾಗಿರಲಿ ಅಥವಾ ಒಬ್ಬ ಚುನಾಯಿತ ಅಧ್ಯಕ್ಷನಾಗಿರಲಿ, ಜನರ ಸಾರ್ವಭೌಮತೆಯನ್ನು ಪ್ರತಿನಿಧಿಸುತ್ತಾ ಇಮ್ಮಡಿ ವಿಶೇಷಾಧಿಕಾರವನ್ನು ಚಲಾಯಿಸುತ್ತಾನೆ. ಅದೆಂದರೆ, ಮೊದಲನೆಯದು ಶಾಸನದ ಕ್ಷೇತ್ರದಲ್ಲಿ ನಿರಾಕರಣಾಧಿಕಾರವೂ (ವೀಟೋ) ಸೇರಿದಂತೆ ಊರ್ಜಿತಗೊಳಿಸುವಿಕೆಯ ವಿಶೇಷಾಧಿಕಾರ ಮತ್ತು ಎರಡನೆಯದಾಗಿ ಕಾರ್ಯಾಂಗ ಸರ್ಕಾರದ ಕ್ಷೇತ್ರದಲ್ಲಿ ಸರ್ಕಾರದ ಅಂಗವನ್ನು – ಅಂದರೆ ಮಂತ್ರಿಮಂಡಲವನ್ನು ಸೃಷ್ಟಿಸುವ ಮತ್ತು ವಿಸರ್ಜಿಸುವ ವಿಶೇಷಾಧಿಕಾರ ಮತ್ತು ಈ ಎರಡೂ ವಿಶೇಷಾಧಿಕಾರಗಳನ್ನು ಜವಾಬ್ದಾರಿಯುತ ಸರ್ಕಾರದ ಅಡಿಯಲ್ಲಿ ಒಂದು ಪರಿಮಿತ ರಾಜಪ್ರಭುತ್ವದ ಸಾಂವಿಧಾನಿಕ ಮುಖ್ಯಸ್ಥನಿಗಿಂತ ಬಹಳ ಹೆಚ್ಚು ಪೂರ್ಣವಾಗಿ, ವಾಸ್ತವವಾಗಿ ಮತ್ತು ಗಣನೀಯವಾಗಿ ಚಲಾಯಿಸಲಾಗುತ್ತದೆ."

ಇಲ್ಲಿ ಹೈದರಾಬಾದಿನಲ್ಲಿ ಸುಧಾರಣಾ ಸಮಿತಿಯ ವರದಿಯಿಂದ ಒಂದು ಉದ್ಧೃತಭಾಗವನ್ನು ಕೊಡಲಾಗಿದೆ:

"ಬ್ರಿಟಿಷ್ ಸಂವಿಧಾನವು ಇಂಗ್ಲೆಂಡಿನ ದೀರ್ಘ ಇತಿಹಾಸದಿಂದ, ರಾಜ ಮತ್ತು ಸಂಸತ್ತಿನ ನಡುವಣ ಶತಮಾನಗಳಕಾಲದ ಶ್ರಮದಾಯಕವಾದ ಹೋರಾಟದ ಫಲವಾಗಿ ಬೆಳೆದು ಬಂದಿದೆ. ಅಲ್ಲಿ ರಾಜಿಯ ಮನೋಭಾವನೆ ಮತ್ತು ಜನತೆಯ ಸಾರ್ವಭೌಮತೆಯ ಪರಿಕಲ್ಪನೆಗಳಿಂದ ಎರಡು ಭಾಗದ ವ್ಯವಸ್ಥೆಯು ಪೋಷಣೆಗೊಂಡಿತ್ತು ಮತ್ತು ನೆಲದಲ್ಲಿ ಆಳವಾಗಿ ಬೇರೂರಿತ್ತು. ಇನ್ನೊಂದು ಕಡೆ, ಭಾರತದ ರಾಜ್ಯಗಳ ವೈಶಿಷ್ಟ್ಯ ಹೀಗಿದೆ : ರಾಜ್ಯದ ಮುಖ್ಯಸ್ಥನು ತನ್ನ ವ್ಯಕ್ತಿರೂಪದಲ್ಲಿ ನೇರವಾಗಿ ಜನರನ್ನು ಪ್ರತಿನಿಧಿಸುತ್ತಾನೆ, ಆದ್ದರಿಂದ ಜನರೊಡನೆ ಅವನ ಸಂಪರ್ಕವು ಚುನಾಯಿತ ಪ್ರತಿನಿಧಿಗಳಿಗಿಂತ ಹೆಚ್ಚು ಸಹಜವೂ ಮತ್ತು ಬದ್ಧತೆಯಿಂದ ಕೂಡಿದ್ದು ಆಗಿರುತ್ತದೆ. ಅವನು ರಾಜ್ಯದ ಸರ್ವೋನ್ನತ ಮುಖ್ಯಸ್ಥ ಮತ್ತು ಜನರ ಸಾರ್ವಭೌಮತೆಯ ಸಾಕಾರ ರೂಪ ಎರಡೂ ಆಗಿರುತ್ತಾನೆ. ಆದ್ದರಿಂದ ಅಂತಹ ನಾಗರಿಕ ಆಡಳಿತ ವ್ಯವಸ್ಥೆಯಲ್ಲಿ ರಾಜ್ಯದ ಮುಖ್ಯಸ್ಥನು ಶಾಸನದ ಯಾವುದೇ ಭಾಗವನ್ನು ಸ್ಥಿರೀಕರಿಸುವ ಅಥವಾ ನಿರಾಕರಿಸುವ ಅಧಿಕಾರವನ್ನು ತನ್ನಲ್ಲಿ ಇಟ್ಟುಕೊಂಡಿರುತ್ತಾನಷ್ಟೇ ಅಲ್ಲದೆ ಕಾರ್ಯಾಂಗವನ್ನು ರಚಿಸುವ ಅಥವಾ ವಿಸರ್ಜಿಸುವ ಅಥವಾ ಜನರ ಅಗತ್ಯಗಳನ್ನು ಪೂರೈಸುವುದಕ್ಕಾಗಿ ಸರ್ಕಾರದ ಆಡಳಿತ ಯಂತ್ರವನ್ನು ಬದಲಾಯಿಸುವ ತುಂಬ ವಿಶೇಷವಾದ ಅಧಿಕಾರವನ್ನೂ ಅನುಭವಿಸುತ್ತಿರುತ್ತಾನೆ."

ಭಾರತದ ರಾಜ್ಯಗಳಲ್ಲಿ ಸಾರ್ವಭೌಮತೆಯು ನೆಲೆಸಿದೆ ಎಂದು ಹೇಳುವ ಮೇಲಿನ ಎರಡು ಅಭಿಪ್ರಾಯಗಳು ತಾಳೆಯಾಗುತ್ತವೆ. ವಂಶಪಾರಂಪರ್ಯವಾಗಿ ಬಂದ ರಾಜನು ತನ್ನ ವ್ಯಕ್ತಿತ್ವದಲ್ಲಿ ಜನರ ಸಾರ್ವಭೌಮತೆಯನ್ನು ಒಳಗೊಂಡಿರಬೇಕು ಎಂದು ಭಾವಿಸಲಾಗಿದೆ. ಆದರೆ ವಾಸ್ತವ ಸಂಗತಿಯೇನೆಂದರೆ ಅನೇಕ ಪ್ರಸಂಗಗಳಲ್ಲಿ ಜನರ ಹಿತಾಸಕ್ತಿಗಳನ್ನು ನಿರ್ಲಕ್ಷಿಸಿ ಅವನು ಸಾರ್ವಭೌಮ ಅಧಿಕಾರಗಳನ್ನು ಚಲಾಯಿಸಿದ್ದಾನೆ.

ಸಂಪುಟ ನಿಯೋಗವು ಹೇಳಿದ್ದೇನೆಂದರೆ, ಸಂವಿಧಾನ ರಚನಾಸಭೆಯ ಪರಿಶ್ರಮವು ಮುಕ್ತಾಯವಾದ ಮೇಲೆ ಮತ್ತು ಭಾರತದ ಸಂವಿಧಾನವನ್ನು ರಚಿಸಿದಮೇಲೆ ಭಾರತದ ಜನರ ಮೇಲಿನ ಸಾರ್ವಭೌಮತೆಯನ್ನು

ಮುಕ್ತಾಯಗೊಳಿಸಲು ಅಗತ್ಯವಾದ ಕ್ರಮವನ್ನು ಕೈಗೊಳ್ಳಲು ಚಕ್ರವರ್ತಿಯ ಸರ್ಕಾರವು ಸಂಸತ್ತಿಗೆ ಶಿಫಾರಸು ಮಾಡುತ್ತದೆ. ಅಸ್ತಿತ್ವದಲ್ಲಿರುವ ಪರಿಸ್ಥಿತಿಯ ಅಡಿಯಲ್ಲಿ ಕೂಡ ಬ್ರಿಟಿಷ್ ಸರ್ಕಾರದ ಪ್ರಾಂತ್ಯಗಳು ಮತ್ತು ಭಾರತೀಯ ರಾಜ್ಯಗಳು ಸಮಾನವಾದ ಕೇಂದ್ರ ಸರ್ಕಾರವನ್ನು ಹೊಂದಿವೆ. ಏಕೀಕೃತ ಅಥವಾ ಇಡಿಯಾಗಿ ಭಾರತದ ಸಂಯುಕ್ತ ಸಂವಿಧಾನದ ಆಶ್ರಯದಲ್ಲಿ ಅವು ಕೇಂದ್ರಕ್ಕೆ ಅಧೀನವಾಗಿರಬೇಕು. ಸ್ಥೂಲವಾಗಿ ಹೇಳುವುದಾದರೆ ಭಾರತದ ಮೇಲಿನ ಸಾರ್ವಭೌಮ ಅಧಿಕಾರವು ಚಕ್ರವರ್ತಿಯಲ್ಲಿ ನೆಲೆಸಿದೆ. ಭಾರತ ಸರ್ಕಾರದ ಕಾಯಿದೆ ೧೯೩೫ರ ಉಪಬಂಧಗಳಿಗೆ ಅದು ಬದ್ಧವಾಗಿದೆ. ಆ ಅಧಿಕಾರಗಳನ್ನು ಬ್ರಿಟಿಷ್ ಇಂಡಿಯಾ ಮತ್ತು ಭಾರತೀಯ ರಾಜ್ಯಗಳು ಎರಡರಮೇಲೂ ಚಲಾಯಿಸಬಹುದಾಗಿದೆ. ಆದರೆ ಈ ಎರಡು ಪ್ರಸಂಗಗಳಲ್ಲೂ ಆ ಅಧಿಕಾರಗಳ ಪ್ರಮಾಣ ಮತ್ತು ರೀತಿಗಳಲ್ಲಿ ವ್ಯತ್ಯಾಸವಿರುತ್ತದೆ. ಆದ್ದರಿಂದ ಸಾರ್ವಭೌಮತೆಯನ್ನು ಬಿಟ್ಟುಕೊಡುವ ಕ್ರಿಯೆಯು, ಅಂದರೆ ಈ ದೇಶದಲ್ಲಿ ಬ್ರಿಟಿಷರು ಹತೋಟಿ ಹೊಂದಿರುವ ಅಧಿಕಾರದ ಹಸ್ತಾಂತರವು ಇಡೀ ಭಾರತಕ್ಕೇ ಸಂಬಂಧಿಸಿದ್ದಾಗಿರುತ್ತದೆ. ಆದ್ದರಿಂದ ಸಂಪುಟ ನಿಯೋಗವು ಭಾರತದ ಜನರಿಗೆ ಅಧಿಕಾರವನ್ನು ಬಿಟ್ಟುಕೊಡುವುದನ್ನು ಮಾತನಾಡುವಾಗ, ಭಾರತದ ರಾಜ್ಯಗಳ ಜನರನ್ನೂ ಅದರಲ್ಲಿ ಸೇರಿಸಬೇಕು ಎಂದು ಕಟ್ಟುಹಾಕಬೇಕು. (ಕೇಳಿ, ಕೇಳಿ!) ಆದ್ದರಿಂದ ಬ್ರಿಟಿಷರ ಅಧಿಕಾರವನ್ನು ಹಿಂದೆಪಡೆದಾಗ ರಾಜ್ಯಗಳು ಸ್ವತಂತ್ರವಾಗುತ್ತವೆ ಎಂಬ ನಿಯೋಗದ ಹೇಳಿಕೆಯನ್ನು ಹೇಗೆ ಅರ್ಥೈಸಿಕೊಳ್ಳಬೇಕೆಂದರೆ ಭಾರತದ ರಾಜ್ಯಗಳ ಮೇಲೆ ಚಕ್ರವರ್ತಿಯನ್ನು ದಿಟದಲ್ಲಿ ಚಲಾಯಿಸುತ್ತಿದ್ದ ಅಂತಹ ಸಾರ್ವಭೌಮತೆಯು ಆ ರಾಜ್ಯಗಳ ಜನರಿಗೆ ಮರಳಿ ಹೋಗುತ್ತದೆ.

ಈ ವಿಚಾರದಲ್ಲಿ ಗಮನಿಸಬೇಕಾದ ಸಂಗತಿಯೇನೆಂದರೆ ೧೯೪೬ರ ಮೇ ೨೦ರಂದು ಹೊರಡಿಸಲಾದ 'ರಾಜ್ಯಗಳು, ಕೌಲುಗಳು ಮತ್ತು ಪರಮಾಧಿಕಾರದ ಹಕ್ಕುಗಳ' ಕಂಡಿಕೆ ೫, ಪರಮಾಧಿಕಾರವನ್ನು ರದ್ದುಮಾಡುವುದನ್ನು ಕುರಿತದ್ದಾಗಿದೆ. ಅದು ಉದ್ದಕ್ಕೂ ಹೇಳುವುದು ಭಾರತೀಯ ರಾಜ್ಯಗಳು ಎಂದೇ ಹೊರತು ಕೇವಲ ಅವುಗಳ ರಾಜರು ಎಂದಲ್ಲ. ಹೇಗಾದರೂ ರಾಜ್ಯಗಳ ರಾಜರು ಇಲ್ಲಿಯವರೆಗೆ, ಬ್ರಿಟಿಷ್ ಸಾಮ್ರಾಜ್ಯದ ಪರಮಾಧಿಕಾರವು ನಿಗದಿಪಡಿಸಿದ ರಾಜಕೀಯವಾಗಿ ಪಾರಾಗಲಾರದ ಮಿತಿಗಳಿಗೆ ಬದ್ಧವಾಗಿಯೇ ತಮ್ಮ ರಾಜ್ಯಗಳೊಳಗೇ ಸಂಪೂರ್ಣವಾದ ಆಂತರಿಕ ಸಾರ್ವಭೌಮತೆಯನ್ನು ಚಲಾಯಿಸುತ್ತಿದ್ದರು. ಬ್ರಿಟಿಷ್ ಸಾಮ್ರಾಜ್ಯದ ಪರಮಾಧಿಕಾರದ ನಿಜವಾದ ಅರ್ಥವು ಊಳಿಗಮಾನ್ಯ ಧಣಿತನ. ಬೇರೆ ಮಾತುಗಳಲ್ಲಿ ಹೇಳುವುದಾದರೆ ಕೆಲವು ವಿಚಾರಗಳಲ್ಲಿ ಬ್ರಿಟಿಷ್ ಸಾಮ್ರಾಜ್ಯದ ಆತ್ಯಂತಿಕ ಪರಮಾಧಿಕಾರವಿರುತ್ತದೆ. ಈ ಹಕ್ಕು ಕೇಳಿಕೆಯ ಪ್ರತಿಪಾದನೆಯಲ್ಲಿ ರಾಜರು ಉದ್ದಕ್ಕೂ ರಾಜ್ಯಗಳ ಜನರಿಗೆ ವಹಿಸಿಕೊಟ್ಟ ಯಾವುದೇ ಸಾರ್ವಭೌಮ ಅಧಿಕಾರಗಳನ್ನು ಕಡೆಗಣಿಸಿದರು. ಅವರು ಸಾಮಾನ್ಯವಾದ ಶಾಸನಾತ್ಮಕವಾದ ಅಧಿಕಾರ ಮತ್ತು ಸಂವಿಧಾನ ರಚನಾ ಅಧಿಕಾರ ಎರಡನ್ನೂ ತಮ್ಮ ಸಾರ್ವಭೌಮ ಕ್ಷೇತ್ರದ ವ್ಯಾಪ್ತಿಯೊಳಗೆ ಚಲಾಯಿಸಲು ಹಕ್ಕು ಕೇಳಿಕೆ ಮಾಡಿದರು ಮತ್ತು ಕೆಲವು ರಾಜ್ಯಗಳ ಜನರು ತಮ್ಮ ಪ್ರತಿನಿಧಿಗಳ ಮೂಲಕ ಚಲಾಯಿಸುವ ಸಾಂವಿಧಾನಿಕ ಅಧಿಕಾರಗಳು ಅವರ ಪಾಲಿಗೆ ರಾಜರು ನೀಡಿದ ಉಡುಗೊರೆ ಎಂದು ಹೇಳಬಹುದು.

ಈಗ, ಸಂವಿಧಾನ ರಚನೆಯ ಅಧಿಕಾರವು ನೆಲೆಸಿದೆ ಎಂದು ಭಾವಿಸಲಾದ ಜನರ ಪ್ರತಿನಿಧಿಗಳಿಂದ ಕೂಡಿದ ಸಂವಿಧಾನ ರಚನಾಸಭೆಯು ಒಂದು ಸಂವಿಧಾನವನ್ನು ರಚಿಸುವ ಕಲ್ಪನೆಗೆ ಆಧಾರವಾಗಿರುವುದರೊಡನೆ ರಾಜ್ಯಗಳಲ್ಲಿನ ರಾಜ ಮತ್ತು ಜನರ ನಡುವಣ ಸಂಬಂಧಗಳ ಈ ಲಕ್ಷಣವು ಸಂಪೂರ್ಣವಾಗಿ ಅಸಮಂಜಸವಾಗಿರುತ್ತದೆ. ಚಕ್ರವರ್ತಿಯ ಸಾರ್ವಭೌಮತೆಯನ್ನು ಭಾರತದ ಜನರಿಗೆ ಬಿಟ್ಟುಕೊಡುವುದು ಸಂಭವಿಸಿದಾಗ, ರಾಜ್ಯಗಳ ಜನರು ಇಂದು ಬ್ರಿಟಿಷ್ ಇಂಡಿಯಾ ಆಗಿರುವ ಭಾಗಗಳ ಜನರೊಡನೆ ಸೇರಿಕೊಂಡು ಅಖಿಲ ಭಾರತದ ಒಕ್ಕೂಟ ಸರ್ಕಾರವು ವಹಿಸಿಕೊಡುವ ವಿಷಯಗಳಿಗೆ ಸಂಬಂಧಿಸಿದಂತೆ ಸಾರ್ವಭೌಮ ಅಧಿಕಾರಗಳನ್ನು ಚಲಾಯಿಸಲು ಅರ್ಹರಾಗುತ್ತಾರೆ. ಪ್ರಾಂತ್ಯಗಳಿಗೆ ವಹಿಸಿಕೊಟ್ಟ ವಿಷಯಗಳಿಗೆ ಸಂಬಂಧಿಸಿದಂತೆ

ಸಾರ್ವಭೌಮ ಅಧಿಕಾರಗಳ ಚಲಾವಣೆಯು ಅವರು ಉಳಿಸಿಕೊಂಡಿರುವ ವಿಷಯಗಳಿಗೆ ಸಂಬಂಧಿಸಿದಂತೆ ಪ್ರಾಂತ್ಯಗಳ ಪ್ರತಿನಿಧಿಗಳ ಕೈಯಲ್ಲಿರುತ್ತದೆ. ಪ್ರಾಂತ್ಯಗಳು ಪ್ರಾಂತೀಯ ವಿಷಯಗಳನ್ನು ವಹಿಸಿಕೊಟ್ಟಿರಬಹುದಾದ ಗುಂಪುಗಳು ಯಾವುದಾದರೂ ಇದ್ದರೆ ಅಂತಹ ಗುಂಪುಗಳಲ್ಲಿನ ಜನರಿಂದ ಸಾರ್ವಭೌಮ ಅಧಿಕಾರಗಳು ಚಲಾವಣೆಯಾಗುತ್ತವೆ. ಇದು ನ್ಯಾಯಸಮ್ಮತವಾಗಿ ಸ್ಪಷ್ಟವಾಗಿಯೇ ಇದೆ.

ಈಗ ಪರಿಶೀಲನೆಯಲ್ಲಿರುವ ನಿರ್ಣಯವು ಭಾರತದ ರಾಜ್ಯಗಳನ್ನು, ಪ್ರಾಂತ್ಯಗಳು ಪ್ರಾಂತೀಯ ವಿಷಯಗಳನ್ನು ಇರಿಸಿದಂತೆ, ಕೇಂದ್ರ ಸರ್ಕಾರಕ್ಕೆ ಬಿಟ್ಟುಕೊಡದ ವಿಷಯಗಳಿಗೆ ಸಂಬಂಧಿಸಿದಂತೆ, ಅದೇ ನೆಲೆಯಲ್ಲಿ ಇರಿಸುತ್ತವೆ. ಅಂದರೆ, ಪ್ರಾಂತ್ಯಗಳು ತಮ್ಮಲ್ಲಿರುವ ಜನರಿಂದ ಅಧಿಕಾರ ಮತ್ತು ವಿಧಾಯಕ ಶಕ್ತಿಯನ್ನು ಪಡೆದುಕೊಂಡಂತೆಯೇ ಸಾರ್ವಭೌಮ ಸ್ವತಂತ್ರ ಭಾರತದ ಅಂಗಭಾಗಗಳಾಗಿ ಭಾರತೀಯ ರಾಜ್ಯಗಳು ಎಲ್ಲ ಅಧಿಕಾರ ಮತ್ತು ವಿಧಾಯಕ ಶಕ್ತಿಯನ್ನು ರಾಜ್ಯಗಳ ಜನರಿಂದ ಪಡೆದುಕೊಳ್ಳುತ್ತವೆ ಎಂದು ಈ ನಿರ್ಣಯವು ಕಂಠೋಕ್ತವಾಗಿ ಹೇಳುತ್ತದೆ. ಕೇಂದ್ರ ವಿಷಯಗಳಿಗೆ ಸಂಬಂಧಿಸಿದಂತೆ ಭಾರತದ ರಾಜ್ಯಗಳ ಸಂವಿಧಾನ ರಚನಾ ಅಧಿಕಾರವನ್ನು ರಾಜ್ಯದ ಜನರಿಗೆ ವಹಿಸಿಕೊಟ್ಟರೆ ಮತ್ತು ಘಟಕದ ವಿಷಯಗಳನ್ನು ರಾಜ್ಯಗಳ ರಾಜರಿಗೆ ವಹಿಸಿಕೊಟ್ಟರೆ ಅದು ತೀರ ಅಸಂಬದ್ಧವಾಗಿರುತ್ತದೆ. ಈ ಸಂವಿಧಾನ ರಚನಾಸಭೆಯ ಮೂಲಕ ಭಾರತಕ್ಕೆ ಒಂದು ನವೀನ ಒಕ್ಕೂಟದ ಸಂರಚನೆಯನ್ನು ಕಟ್ಟುವ ಈ ಪ್ರಕ್ರಿಯೆಯಲ್ಲಿ, ಪ್ರಾಂತ್ಯಗಳ ವಿಚಾರದಲ್ಲಿ ಆದ ಹಾಗೆ, ಈಗಾಗಲೇ ಲಿಖಿತ ಸಂವಿಧಾನಗಳನ್ನು ಹೊಂದಿರುವ ರಾಜ್ಯಗಳಲ್ಲಿ ಅವುಗಳಲ್ಲಿ ಕೂಲಂಕಷವಾಗಿ ಪರೀಕ್ಷಿಸುವ ಅಗತ್ಯವಿದೆ ಮತ್ತು ಈಗ ಲಿಖಿತ ಸಂವಿಧಾನಗಳನ್ನು ಹೊಂದಿಲ್ಲದ ರಾಜ್ಯಗಳಲ್ಲಿ ಅವುಗಳನ್ನು ಹೊಸದಾಗಿ ರಚಿಸಬೇಕು. ಈ ವಿಚಾರವಾಗಿ ಕೈಗೊಳ್ಳಬೇಕಾದ ಕ್ರಮಗಳು ಹಾಗೂ ಅನುಸರಿಸಬೇಕಾದ ವಿಧಾನಗಳನ್ನು ನಿಗದಿಪಡಿಸುವ ಮೂಲಕ ಕೇಂದ್ರ ಸಂವಿಧಾನವು ಒದಗಿಸುವ ಅವಕಾಶದಲ್ಲಿ ಮುಂದೆ ಈಡೇರಿಸಿಕೊಳ್ಳುವುದಕ್ಕಾಗಿ ಈ ಕಾರ್ಯವನ್ನು ಮುಂದೂಡಬೇಕಾದ ಸಾಧ್ಯತೆಯಿದೆ.

ರಾಜ್ಯ ಸಂವಿಧಾನ ರಚನಾಸಭೆಯ ಪ್ರತಿನಿಧಿಗಳು ಇಷ್ಟಪಟ್ಟರೆ ಕೇಂದ್ರ ಸಂವಿಧಾನವು, ನಿಗದಿಪಡಿಸಿದ ವಿಧಾನಗಳ ಪ್ರಕಾರ ರಾಜ್ಯಗಳ ಮತ್ತು ಇತರ ಪರಿಣಾಮಕ್ಕೊಳಗಾಗುವ ಪ್ರದೇಶಗಳ ಜನರ ಒಪ್ಪಿಗೆಯ ಮೇರೆಗೆ ಮುಂದೆ ಉಂಟಾಗಬಹುದಾದ ಸರಹದ್ದುಗಳ ಮಾರ್ಪಾಡುಗಳಿಗೆ ಬದ್ಧವಾಗಿ, ರಾಜ್ಯಗಳಿಗೆ ಇಂದು ಇರುವಂತೆ ಪ್ರಾದೇಶಿಕ ಸಮಗ್ರತೆಯನ್ನು ಖಾತರಿ ನೀಡಬೇಕು. ಒಂದು ರಾಜ್ಯದ ಜನರು, ರಾಜನೊಡನೆ ಸೇರಿಕೊಂಡು ಆ ರಾಜ್ಯದ ಸಂವಿಧಾನವನ್ನು ಇತ್ಯರ್ಥಗೊಳಿಸಿದಾಗ, ಈಗ ರಾಜ್ಯದಲ್ಲಿ ಅಧಿಕಾರದಲ್ಲಿರುವ ರಾಜವಂಶಕ್ಕೆ ವಂಶಪಾರಂಪರ್ಯವಾಗಿ ಬಂದ ನಾಯಕತ್ವದ ಮುಂದುವರಿಕೆಗೆ ಅವಕಾಶವನ್ನು ಮಾಡಿಕೊಡಬಹುದು, ಮತ್ತು ಕೇಂದ್ರ ಸಂವಿಧಾನವು ಒಂದು ಉಪಬಂಧವನ್ನು ಒಳಗೊಳ್ಳಬಹುದು. ಏನೆಂದರೆ ರಾಜ್ಯದ ಸಂವಿಧಾನವು ಹಾಗೆ ಹೇಳಿದರೆ ಅದರಲ್ಲಿ ಹಸ್ತಕ್ಷೇಪವನ್ನು ಮಾಡಲಾಗುವುದಿಲ್ಲ. ಆದರೆ ಒಂದು ಷರತ್ತನ್ನು ನಮೂದಿಸುವುದು ಅಗತ್ಯವಾಗುತ್ತದೆ. ಏನೆಂದರೆ, ಅಸ್ತಿತ್ವದಲ್ಲಿರುವ ಲಿಖಿತ ಸಂವಿಧಾನವನ್ನು ಕೂಲಂಕಷವಾಗಿ ಪರೀಕ್ಷೆಗೆ ಒಳಪಡಿಸುವಾಗ ಅಥವಾ ಯಾವುದಾದರೂ ಒಂದು ನಿರ್ದಿಷ್ಟ ರಾಜ್ಯದಲ್ಲಿ ಹೊಸದೊಂದನ್ನು ರಚಿಸುವಾಗ ಅದರ ವಂಶಪಾರಂಪರ್ಯ ಮುಖ್ಯಸ್ಥನು ಆಗಲೇ ಅಥವಾ ಅನತಿಕಾಲದಲ್ಲಿಯೇ ಸಾಂವಿಧಾನಿಕ ಪ್ರಭುವಾಗಬೇಕು – ಪ್ರಜಾಸತ್ತಾತ್ಮಕವಾಗಿ ಚುನಾಯಿತರಾದ ಸದಸ್ಯರಿರುವ ಶಾಸನಸಭೆಗೆ ಹೊಣೆಯಾಗಿರುವ ಕಾರ್ಯಾಂಗದಲ್ಲಿ ಅಧ್ಯಕ್ಷತೆ ವಹಿಸಬೇಕು.

ಈಗ ಮಾನ್ಯರೆ, ಈ ನಿರ್ಣಯದ ೪ನೇ ಖಂಡದನಲ್ಲಿರುವ ಅಗತ್ಯವನ್ನು ಒತ್ತಿಹೇಳಲು ಇನ್ನು ಒಂದೇ ಒಂದು ಅಂಶವನ್ನು ಉಲ್ಲೇಖಿಸಲು ಬಯಸುತ್ತೇನೆ. ಬಿಡಿರಾಜ್ಯಗಳಲ್ಲಿ ಅಸ್ತಿತ್ವದಲ್ಲಿರುವ ಲಿಖಿತ ಸಂವಿಧಾನಗಳು ಬಹುತೇಕ ಅಪರಿವರ್ತನೀಯವಾಗಿ ಒಂದು ಪ್ರಕರಣವನ್ನು ಹೊಂದಿರುತ್ತವೆ. ಏನೆಂದರೆ, ಸಂಬಂಧಿಸಿರುವ ಎಲ್ಲ ಹಕ್ಕುಗಳು, ವಿಧಾಯಕ ಶಕ್ತಿ ಮತ್ತು ಅಧಿಕಾರ ವ್ಯಾಪ್ತಿಗಳು ಅಥವಾ ರಾಜ್ಯಗಳಲ್ಲಿ ಸೇರಿಸಲಾದ ಪ್ರದೇಶಗಳ

ಸರ್ಕಾರಕ್ಕೆ ಆನುಷಂಗಿಕವಾಗಿರುತ್ತವೆ. ಅವು ರಾಜನಲ್ಲಿ ನೆಲೆಸಿರುತ್ತವೆ ಮತ್ತು ಚಲಾಯಿಸಬಲ್ಲವಾಗಿರುತ್ತವೆ. ಅವು ಸಂವಿಧಾನದ ಉಪಬಂಧಗಳಿಗೆ ಬದ್ಧವಾಗಿರುತ್ತವೆ. ಅವು ರಾಜನ ಕ್ರಿಯೆಯಿಂದಲೇ ಮಂಜೂರಾಗಿರುತ್ತವೆ. ರಾಜರು ಪ್ರತಿಪಾದಿಸುವ ಅಪರಿಮಿತ ಸ್ವರೂಪದ ಸಾರ್ವಭೌಮ ಅಧಿಕಾರವನ್ನು ಒತ್ತಿಹೇಳುವ ದೃಷ್ಟಿಯಿಂದ ಅಂತಹ ಸಂವಿಧಾನಗಳು ಇನ್ನೊಂದು ಉಪಬಂಧವನ್ನು ಹೊಂದಿರುತ್ತವೆ. ಅವು ಕಟ್ಟಳೆ ಮಾಡುವುದೇನೆಂದರೆ ಸಂವಿಧಾನ ಕಾಯಿದೆ ಅಥವಾ ಬೇರೆ ಯಾವುದೇ ಕಾಯಿದೆಯಲ್ಲಿ ಏನೇ ಇದ್ದರೂ ಎಲ್ಲ ಶಾಸಕಾಂಗ, ಕಾರ್ಯಾಂಗ ಮತ್ತು ನ್ಯಾಯಾಂಗ ಅಧಿಕಾರಗಳು ರಾಜನಲ್ಲಿ ಸದಾ ಅಂತರ್ಗತವಾಗಿರುತ್ತವೆ, ಅಧೀನದಲ್ಲಿರುತ್ತವೆ ಮತ್ತು ಉಳಿದುಕೊಂಡಿರುತ್ತವೆ ಮತ್ತು ಯಾವಾಗಲೂ ಇರುತ್ತವೆ ಹಾಗೂ ಅಂತಹ ಕಾಯಿದೆಯಲ್ಲಿ ಇಲ್ಲದ ಯಾವುದೂ ಅವನಲ್ಲಿ ಅಂತರ್ನಿಹಿತವಾದ ವಿಧಾಯಕ ಶಕ್ತಿಯ ಗುಣದಿಂದಾಗಿ ಕಾರ್ಯಗಳನ್ನು ಮಾಡಲು, ಘೋಷಣೆಗಳನ್ನು ಹೊರಡಿಸಲು ಮತ್ತು ಆಜ್ಞೆಗಳು ಹಾಗೂ ಸುಗ್ರೀವಾಜ್ಞೆಗಳನ್ನು ಹೊರಡಿಸಲು ರಾಜನಿಗೆ ಇರುವ ಹಕ್ಕು ಮತ್ತು ವಿಶೇಷಾಧಿಕಾರವನ್ನು ತಟ್ಟುವುದಿಲ್ಲ ಎಂದು ಭಾವಿಸಲಾಗಿದೆ. ರಾಜ್ಯದ ಸಂವಿಧಾನಗಳಲ್ಲಿರುವ ಅಂತಹ ಉಪಬಂಧಗಳು ಸರ್ವವ್ಯಾಪಿಯಾದ ನಿರಂಕುಶಪ್ರಭುತ್ವದ ಪಳೆಯುಳಿಕೆಗಳು. ಅವು ಗುಡಿಸಿ ಹಾಕಲು ಯೋಗ್ಯವಾದವು. ಅವುಗಳ ಸ್ಥಾನದಲ್ಲಿ ಇನ್ನೊಂದು ಉಪಬಂಧವನ್ನು ತರಬೇಕು. ಅದು ಸರ್ಕಾರದ ಎಲ್ಲ ಶಾಸಕಾಂಗ, ಕಾರ್ಯಾಂಗ ಮತ್ತು ನ್ಯಾಯಾಂಗದ ಅಧಿಕಾರಗಳು ಜನರಿಂದ ನಿಷ್ಪನ್ನವಾಗಬೇಕು ಎಂದು ಘೋಷಿಸಬೇಕು. ವಂಶಪಾರಂಪರ್ಯ ರಾಜನೂ ಸೇರಿದಂತೆ ಲಿಖಿತ ಸಂವಿಧಾನದಲ್ಲಿ ನಿರ್ದೇಶಿಸಿದಂತೆ ಮತ್ತು ಆ ಸಂವಿಧಾನವು ಅಧಿಕಾರ ನೀಡಿದ ವ್ಯಾಪ್ತಿಯವರೆಗೆ ರಾಜ್ಯದ ಅಂಗಸಂಸ್ಥೆಗಳು ಆ ಅಧಿಕಾರಗಳನ್ನು ಚಲಾಯಿಸಬೇಕು.

ಮಾನ್ಯರೆ, ನನ್ನ ಸಮಯ ಮೀರಿದ್ದಕ್ಕೆ ಕ್ಷಮೆ ಕೋರುತ್ತೇನೆ. ಇನ್ನೂ ಹೆಚ್ಚು ಸಮಯವನ್ನು ತೆಗೆದುಕೊಳ್ಳಲು ನಾನು ಬಯಸುವುದಿಲ್ಲ. ಆದರೆ ಈ ನಿರ್ಣಯದಲ್ಲಿನ ೪ನೇ ಖಂಡದಲ್ಲಿ 'ರಾಜ್ಯಗಳು' ಎಂಬ ಶಬ್ದವನ್ನು ಸೇರಿಸಬೇಕಾದದ್ದನ್ನು ಉಳಿಸಿಕೊಳ್ಳಬೇಕಾದದ್ದು ಹೇಗೆ ಅಗತ್ಯ ಎಂದು ತೋರಿಸಲು ಪ್ರಯತ್ನಿಸಿದ್ದೇನೆ ಎಂದು ಭಾವಿಸುತ್ತೇನೆ. ವಾಸ್ತವವಾಗಿ, ಈ ಸಭೆಗೆ ರಾಜ್ಯಗಳ ಜನತಾಪ್ರತಿನಿಧಿಗಳನ್ನು ನಾವು ಕರೆದು ತರದಿದ್ದರೆ ಅವರು ನಿಜವಾಗಿಯೂ ಸಭೆಯ ಕಾರ್ಯದಲ್ಲಿ ಭಾಗವಹಿಸಲು ಸಾಧ್ಯವಾಗುವುದಿಲ್ಲ ಮತ್ತು ತಮ್ಮ ರಾಜ್ಯಗಳ ಹಾಗೂ ಕೇಂದ್ರದ ಸಂವಿಧಾನಗಳನ್ನು ರಚಿಸಲು ಸಹಾಯ ಮಾಡಲಾಗುವುದಿಲ್ಲ.

**ಮಾನ್ಯ ಅಧ್ಯಕ್ಷರು :** ಈಗಾಗಲೇ ಒಂದೂಕಾಲು ಗಂಟೆಯಾಯಿತು. ಈ ಸದನವನ್ನು ನಾಳೆ ಬೆಳಗ್ಗೆ ಹನ್ನೊಂದು ಗಂಟೆಗೆ ಮುಂದೂಡಲಾಗಿದೆ.

ಅನಂತರ ಸಭೆಯನ್ನು ಗುರುವಾರ, ೧೯ನೇ ಡಿಸೆಂಬರ್, ೧೯೪೬ರ ಬೆಳಗ್ಗೆ ಹನ್ನೊಂದು ಗಂಟೆಗೆ ಮುಂದೂಡಲಾಯಿತು.